# MYSORE LEGISLATIVE ASSEMBLY

*Saturday, 24th February 1968*

The House met in the Assembly Chamber, Vidhana Soudha, Bangalore, at Thirty Minutes past Eight of the Clock.

[MR. DEPUTY SPEAKER (SRI D. MANJUNATH, B.SC., B.L.,) in the Chair]

---

Mr. DEPUTY SPEAKER.—Just to facilitate more members to participate in the debate, the Question Hour is suspended to day.

## PAPERS LAID ON THE TABLE

Sri S. R. KANTHI (Minister for Law and Parliamentary Affairs) :—Sir, I beg to lay on the Table of the House :

"The Mysore Legislature (Members' Medical Attendance) Rules, 1968 (Notification No. LAW 119 LGR 67, dated 2nd February, 1968) under Sub-Section (1) of section 15 of the Mysore Legislature Salaries Act, 1956."

Sir, on behalf of the Minister for Finance, I beg to lay :

"The Mysore Manufacture of Wine from Grapes (Amendment) Rules, 1967 (Notification No. HD 39 EDC (7) dated 11th September 1967, under Sub-Section (4) of Section 71 of the Mysore Excise Act, 1965."

Mr. DEPUTY SPEAKER.—Both the notifications are laid on the Table.

## MOTION OF THANKS TO THE GOVERNOR'S ADDRESS

*(Debate Continued)*

Sri B. P. KADAM (Karwar).—Mr. Speaker, Sir, we are discussing the Motion of Thanks to the Governor's Address. It is an obligation cast upon the Governor under Article 176 of the Constitution read along with the Rules of Procedure of this House. There is nothing extraordinary in this Address. We expected certain dynamism, a new

(SRI B. P. KADAM)

objectivity and a bold lead so far as the administration is concerned. But, unfortunately, what we read here in this Address is the same stale, stereotype collection of a few paragraphs, as usual sent by the various Departments put together and read in a graceful manner. It is nothing further than that. Sir, some of the paragraphs are indeed a verbatim collection from the earlier paragraphs from the speech of the Governor during the previous Session. Of course, this is not the occasion to go into all details as this is only a policy statement. The Governor has been, in my humble opinion, ill-advised to refer to the Mahajan Commission findings. Everyone knows that these recommendations are a dead-horse, because the recommendation never adopted any single principle or any amount of principle uniformly. The yard-stick has been followed from area to area to suit the convenience of Mysore and to work as much as possible against Maharashtra. The Report indeed has been held......

Sri S. R. KANTHI.—It is not true.

Sri B. P. KADAM.—Sir, I have a right to speak whatever I desire. Being the Minister for Parliamentary Affairs, he should not disturb me like that. The Report indeed has been held by every impartial thinker in the country, by every responsible leader in the country that it is mischievous, partial arbitrary, undemocratic and has gone out of the way transgressing the terms of reference given to it. Therefore, in the interest of the country, in the interest of democtatic principles, this Report must be thrown, not in the waste-paper basket, but in the durtiest possible gutter never to be traced again. The Governor ought to have been bold enough to say that this Report is arbitrary and it should be shelved and in the interest of the country a solution to the border problem must be found based on the wishes of the people of the border areas considering language and contiguity so that the problem could be solved once and for all in a democratic manner and that the interest of the country is served and not shelved. It is said that the Maharashtra Government asked for a Commission, but did not ask for such arbitrary and mischievous findings. There is nothing on the Government record to show that such a mischievous report is binding on the Maharashtra Government. If the Report was based on certain well laid principles, it could have been accepted.

MR. DEPUTY SPEAKER.—Instead of using the word 'mischievous, the hon'ble member can use healthy words !

Sri B. P. KADAM.—Sir, it is parlimentary. Many reponsible leaders of All-India stature have stated that it is so.

It has been said that Mysore has been denied certain tracts. Mr. Mahajan himself has said in the concluding paragraph that he could not satisfy anybody. That is far from the truth. It is hardly convincing.

What has Mysore not got? They had humourously asked for Chandgad and the town of Sholapur and he ought to have humourously turned down the demand. Instead of doing that he has elaborately and unnecessarily given long arguments to give a degree of seriousness. That will not convince anybody. Mysore has got everything contrary to all principles of equity. This report should be shelved and a fair solution should be found based on the wishes of the people, language and contiguity so that the interests of the country would be better served.

The Governor has referred to the student agitation and language. We expected something bold from the Governor. He ought to have stated that Hindi must be the national language and that it should be adopted as the official language by and by in the years to come not by convulsions and upheavals but by co-operation and harmony among all sections of the people. Instead of doing this, what has the Governor said? He has said that some solution will be found by all the leaders. Is it a policy statement?

He has also referred to Food and Civil Supplies. It is far from satisfactory. He ought to have boldly stated that food could not be grown in the State on account of the tenancy law in the Mysore State. The Land Reforms Act is highly retrograde and reactionary in contrast to the earlier statute of the Government of Bombay. It should be amended so as to bring to the expectations of the people. The vast section of the agriculturists are in complete confusion. The rents have been raised and there has been lot of litigation for evicting the tenants. That is why food could not be grown to the extent that was expected. A lot has been said about controls. I respectfully beg to submit that there is sufficient food in the country at least this year. The food zone and controls must be done away with. Who wants controls and food zones except certain interested traders, stockists and certain banks. Only contractors and traders want these controls in their own interest and in the interest of certain officials. If these are done away with, I am sure the prices of rice and food articles would come donw speedily. What about the smuggling that is going on along the borders of this State under the very sheltering hand of the police. The police and the food Department cannot do anything. Nothing can be done and nothing is intended to be done.

The Governor has referred to certain co-operatives. Corruption is rampant in the co-operatives run by the responsible and irresponsible politicians of this State. The Government should take courage to appoint a high-level committee to go into all the co-operatives run by the legislators, belonging to the Congress Party as well as the Opposition and I am sure there would be a number of astounding things which will come to light and whoever is found guilty must be prosecuted and dealt with under the law of the land. Unless that is done, the co-operatives will be a huge hoax upon the public and would be a good grazing ground for the politicians.

The Governor has failed to refer in his Address to the poor N.G.Os' demand for Central rates of dearness allowance. It has not yet been

(SRI B. P. KADAM)

sanctioned. The vast section of N.G.Os' are working with a good deal of anxiety and uncertainty because the prices have been rising steeply and the emoluments they got are far satisfactory.

I do not wish to take further time. With these observations, I thank the Chair and resume my seat.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ನೀಡಿದಂಥ ಭಾಷಣವನ್ನು ನೋಡಿದರೆ ನಮಗೆ ಬಹಳ ಖೇದವಾಗುತ್ತದೆ. ಏಕೆಂದರೆ ಅವರ ಭಾಷಣ ಸೆರಮೋನಿಯಲ್ ಸ್ಟೇಟ್‌ಮೆಂಟ್ ಆಗಿದೆ. ಕಾಯಿದೆ ದೃಷ್ಟಿಯಿಂದ ಅದಕ್ಕೆ ಏನು ಮಹತ್ವ ಇರಬೇಕೋ ಆ ತರಹ ಮಹತ್ವ ಈ ಭಾಷಣಕ್ಕೆ ಮಾನ್ಯ ರಾಜ್ಯಪಾಲರು ಕೊಟ್ಟಿಲ್ಲ. ಈ ಭಾಷಣ ನೋಡಿದರೆ ಯಾರೋ ಮೂರನೆಯ ದರ್ಜೆ ಗುಮಾಸ್ತ ಬರದಂತೆ ಕಾಣಿಸುತ್ತದೆ. So, I call it as a third class report. ಏಕೆಂದರೆ ಆರ್ಟಿಕಲ್ 176 ನ್ನು ನೋಡಿದರೆ ಅದರಲ್ಲಿ ಒಂದು ಉದ್ದೇಶವಿರುತ್ತದೆ. Causes of Summons... ಅದನ್ನು ಸಂಪೂರ್ಣವಾಗಿ ತೋರಿಸಬೇಕು ಅಂದರೆ ಈ ಸಭೆ ಕರೆಯುವುದಕ್ಕೆ ಮುಂಚಿತವಾಗಿ ಹಿಂದೆ ನಡೆದಂಥ ಅಪೂರ್ವವಾದ ಘಟನೆಗಳು, ಮುಂದೆ ಬರುವ ವರ್ಷಕ್ಕೆ ಯಾವ್ಯವ ಮುಖ್ಯವಾದಂಥ ಪ್ರಶ್ನೆಗಳು ಸರ್ಕಾರದ ಮುಂದೆ ಇವೆ ಎನ್ನುವುದನ್ನು ಇಂದಿನ ಪರಿಸ್ಥಿತಿಯಲ್ಲಿ ಯಾವ ದೃಷ್ಟಿಯಿಂದ ನೋಡತಕ್ಕದ್ದು ಎನ್ನುವ ವಿಷಯಗಳನ್ನು ಅವರ ಭಾಷಣದಲ್ಲಿ ತೋರಿಸಬೇಕಾಗಿತ್ತು. ಅವನ್ನೆಲ್ಲಾ ತೋರಿಸದೇ ಇರುವುದರಿಂದ ಅದು ಸೆರಮೋನಿಯಲ್ ಭಾಷಣವಾಗಿದೆ.

Mr. DEPUTY SPEAKER.—The member need not call it as a Third Class Report.

ಶ್ರೀ ಎಂ. ನಾಗಪ್ಪ.—ಪ್ರತಿವರ್ಷವೂ ರಾಜ್ಯಪಾಲರು ಬರುತ್ತಾರೆ. ಇಲ್ಲಿ ಭಾಷಣವನ್ನು ಓದುತ್ತಾರೆ. ಅನೇಕ ವರ್ಷಗಳಿಂದಲೂ ಈ ಸಭೆ ಸೇರುತ್ತಲೇ ಇರುತ್ತದೆ. Immediately prior to the Session. ಆ ವರ್ಷದಲ್ಲಿ ಮುಖ್ಯ ಘಟನೆಗಳು ಏನೆಂಬುದನ್ನು ತೋರಿಸದೆ ಇದ್ದಲ್ಲಿ ಸೆರಮೋನಿಯಲ್ ಸ್ಟೇಟ್‌ಮೆಂಟ್ ಕೊಟ್ಟರೆ ಅವರ ಕರ್ತವ್ಯ ಮುಗಿಯಿತು ಎಂಬುದಾಗಿ ಭಾವಿಸಿದರೆ ಅದು ಖಂಡಿತವಾಗಿ ಸರಿಯಲ್ಲ. ಅದಕ್ಕೆ ನಾನು ವಿಷಾದ ಪಡುತ್ತೇನೆ.

ಎರಡನೆಯದಾಗಿ ನಾವು ಶಾಸಕರಾಗಿ ಈ ಶಾಸನಸಭೆಯಲ್ಲಿ ಈ ವರ್ಷದ ಮುಖ್ಯ ಕರ್ತವ್ಯಗಳೇನು ಎಂಬುದಕ್ಕೆ ಮುಂದೆ ಬರುವ ವರ್ಷದಲ್ಲಿ ಕೆಲವು ಮಸೂದೆಗಳ ತಿದ್ದುಪಡಿಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತೇವೆಂದು ಇದರಲ್ಲಿ ತೋರಿಸಿದ್ದಾರೆ. ಆದರೆ ಮುಖ್ಯವಾಗಿ ಪಂಚಾಯತಿ ರಾಜ್ಯ ಕಾಯಿದೆ ಹಾಗೂ Agri-pests and diseases Bill ಯಾವಾಗ ಕನಸು ನನಸಾಗುತ್ತದೋ ಜನತೆಗೆ ಗೊತ್ತಿಲ್ಲ. 1960 ರಿಂದಲೂ ತಾಲ್ಲೂಕು ಬೋರ್ಡ್ ಎಲೆಕ್ಷನ್ಸ್ ಪಂಚಾಯತ ರಾಜ್ಯ ಕಾಯಿದೆ ಬರುತ್ತದೆ ಎನ್ನುವ ದೃಷ್ಟಿಯಿಂದ ಅದನ್ನು ಇದುವರೆಗೂ ಈ ಸರ್ಕಾರದವರು ಮುಂದೂಡುತ್ತಾ ಹೊರಟಿದ್ದಾರೆ. ಜನತೆಗೆ ಬೇಕಾದಂಥ ಯಾವ ಕಾಯಿದೆಗಳನ್ನು ಬದಿಗೊತ್ತಿ ಒಂದು ನೀತಿ ನಿಯಮವಿಲ್ಲದಂತೆ ಕೇವಲ ಕೆಲವು ಕಾಯಿದೆಗಳ ತಿದ್ದುಪಡಿಗಳನ್ನು ನಮ್ಮ ಮುಂದೆ ಇಟ್ಟು ಸರಿಯಾದ ಲೆಜಿಸ್ಲೇಷನ್ ವರ್ಕ್ ಏನಾಗಬೇಕೋ ಅದನ್ನು ಮಾಡದೆ ಶಾಸಕರ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆಂಬುದಾಗಿ ನಾನು ಭಾವಿಸುತ್ತೇನೆ. ನನ್ನ ಮಿತ್ರರೊಬ್ಬರು ಹೇಳಿದರು, ಈ ಮಹಾಜನ್ ಕಮಿಷನ್ಸ್ ಫೈಂಡಿಂಗ್ಸ್ ಬಗ್ಗೆ ರಾಜ್ಯಪಾಲರು ಅವರ ಭಾಷಣದಲ್ಲಿ ನಾಲ್ಕು ಶಬ್ದಗಳನ್ನು ಹೇಳಿದ್ದಾರೆಂದು. ಅದನ್ನು ನೋಡಿದರೆ ನನಗೆ ಬಹಳವಾಗಿ ವಿಷಾದವಾಗುತ್ತದೆ. ಆ ಪ್ಯಾರಾದ ಕೊನೆಯ ಅಭಿಪ್ರಾಯ ಹೀಗಿದೆ.

"It is but meet that the well-considered and judicious finding of a high-powered one-man commission appointed by the Government of India should be accepted by all the States concerned, in view of the understanding between the Chief Ministers of Maharashtra and Mysore that the Commission's findings would be regarded as binding on them" ರಾಜ್ಯಪಾಲರೇ, 'ಸ್ವತಃ ಎರಡು ರಾಜ್ಯದ ಮಂತ್ರಿಗಳು ಒಪ್ಪಿಕೊಂಡಿದ್ದೇ ಆದರೆ ಅದನ್ನು ಒಪ್ಪಿಕೊಳ್ಳಬಹುದು. ಇದು ಜುಡಿಷಿಯಸ್ ಫೈಂಡಿಂಗ್ಸ್ ಎಂದು ಹೇಳಿದ್ದಾರೆ.

ಅದನ್ನು ವಿಮರ್ಶಿಸಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಒಂದೆರಡು ಸಾರಿಯಲ್ಲ ನಾಲ್ಕು ಸಾರಿ ಘಂಟಾಘೋಷವಾಗಿ ಹೇಳಿದ್ದಾರೆ; ಇದು ಅವಾರ್ಡು, ಇದನ್ನು ಅವಾರ್ಡ್ ಎಂದು ತಿಳಿಯ ತಕ್ಕದ್ದೆಂದು. ಆದರೆ ಇದನ್ನು ಅವಾರ್ಡು ಎಂದು ಒಪ್ಪತಕ್ಕದ್ದು ಅನ್ನುವ ವಿಷಯವೇನು ಇದೆ ಅದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಸರ್ಕಾರ ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಹೊರಗಡೆ ಇದನ್ನು ಅವಾರ್ಡ್ ಎಂದು ಹೇಳುತ್ತಾರೆ; ಆದರೆ ಮಾನ್ಯ ರಾಜ್ಯಪಾಲರು ಕೊಡತಕ್ಕಂಥ ಹೇಳಿಕೆಯಲ್ಲಿ ಇಬ್ಬರು ಮುಖ್ಯ ಮಂತ್ರಿಗಳೂ ಇದನ್ನು ಒಪ್ಪುವುದಾದರೆ ಒಪ್ಪತಕ್ಕದ್ದು ಎಂದು ಹೇಳುತ್ತಾರೆ. ಈ ರೀತಿ ಹೇಳಿಕೆ ಕೊಟ್ಟರೆ ಎಷ್ಟರಮಟ್ಟಿಗೆ ಕೇಂದ್ರ ಸರ್ಕಾರದಲ್ಲಿ ಸಹಕಾರ ಸಿಕ್ಕುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇವರ ಹೇಳಿಕೆಯ ಅರ್ಥ ರಾಜ್ಯಪಾಲರ ಭಾಷಣದಲ್ಲಿ ಸ್ವಚ್ಛವಾಗಿ ಸ್ಪಷ್ಟವಾಗಿ ಬಂದಿಲ್ಲ. ಇದು ಅವಾರ್ಡು ಇದನ್ನು ಒಪ್ಪಲೇ ಬೇಕು. ಇದನ್ನು ಒಪ್ಪದೆ ಗತ್ಯಂತರವಿಲ್ಲ ಎಂದು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟಪಡಿಸಬೇಕಾಗಿತ್ತು. ಒಬ್ಬ ಮಿತ್ರರು ಮೊನ್ನೆ ಮಾತನಾಡುತ್ತಾ ಮಹಾಜನ್ ಆಯೋಗದ ವರದಿ ಒಂದು ಕೆಲಸಕ್ಕೆ ಬಾರದ ಕಾಗದದ ಚೂರು ಎಂದು ಹೇಳಿದ್ದಾರೆ. ಇವೊತ್ತು ಯಾವುದೇ ಒಂದು ಮಹತ್ತರವಾದ ವಿಷಯವನ್ನು ಪರಿಶೀಲಿಸಬೇಕಾದರೂ, ತೀರ್ಮಾನಿಸಬೇಕಾದರೂ ಒಂದು ಕಮಿಷನ್ ಅಥವಾ ಒಂದು ಆಯೋಗವನ್ನು ನೇಮಿಸುತ್ತಾರೆ; ಆ ಆಯೋಗಕ್ಕೆ ಕೆಲವು ಅಧಿಕಾರಗಳುಂಟು. 1952ನೇ ಇಸವಿಯ ಕಮಿಷನ್ ಆಕ್ಟಿನ ಕಲಮು 3, 4, 5, ಮತ್ತು 6, 8, 9 ಇವುಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ಮಹಾಜನ್ ಕಮಿಷನ್ನಿಗೆ ನೇಮಿಸಿದ ಜವಾಬ್ದಾರಿಯಲ್ಲಿರುವ ವಿಧಿಗಳು ಸಿವಿಲ್ ಕೋರ್ಟಿನಂತೆಯೇ ಇರುವುದರಿಂದ, ಈ ಕಮಿಷನ್ನಿನವರು ಕೊಟ್ಟಿರುವ ವರದಿಯನ್ನು ಒಂದು ಕೆಲಸಕ್ಕೆ ಬಾರದ ಕಾಗದದ ಚೂರು ಎಂದು ಹೇಳಿದ್ದು ತಪ್ಪು ಮತ್ತು ವಿಷಾದನೀಯ. ಇದು ಕಮಿಷನ್ ಆಕ್ಟ್ ಪ್ರಕಾರ ಕೊಟ್ಟಂತಹ ಅವಾರ್ಡ್. ಸರ್ಕಾರದವರು ಇದನ್ನು ಒಪ್ಪತಕ್ಕದ್ದು ಎಂದು ರಾಜ್ಯಪಾಲರ ಭಾಷಣ ದಲ್ಲಿ ಸ್ಪಷ್ಟವಾಗಿ, ಗಂಭೀರವಾಗಿ ಹೇಳತಕ್ಕಂಥ ವಿಷಯ ಇದು.

ಇನ್ನು ಮೂರನೆಯದಾಗಿ ಕೃಷ್ಣಾ ಗೋದಾವರಿ ನೀರಿನ ಹಂಚಿಕೆಯ ಬಗ್ಗೆ ಈಗಿರತಕ್ಕ ಸರ್ಕಾರದ ನೀತಿಯನ್ನು ನೋಡಿದರೆ ಈಗಾಗಲೇ ಮಂತ್ರಿಗಳು ಹೇಳಿದರು ನಮ್ಮ ರಾಜ್ಯಕ್ಕೆ ಆ ನದಿಗಳಿಂದ ನ್ಯಾಯವಾಗಿ ಬರಬೇಕಾಗಿರತಕ್ಕ ನೀರಿನ ಹಕ್ಕನ್ನು ಪಡೆಯುವುದಕ್ಕೆ ನಮ್ಮ ಎಲ್ಲಾ ಪ್ರಯತ್ನಗಳನ್ನೂ ಮಾಡಿರುತ್ತೇವೆ, ನಮ್ಮ ಅಧಿಕಾರವನ್ನು ಪಡೆದುಕೊಳ್ಳುತ್ತೇವೆ ಎಂದು. ಆದರೆ ಆ ಬಗ್ಗೆ ನಿರ್ದಿಷ್ಟವಾಗಿ ಯಾವ ಒಂದು ಪ್ರಯತ್ನವನ್ನು ಮಾಡಬೇಕೋ ಅದನ್ನು ಇವೊತ್ತಿನವರೆಗೂ ಸರ್ಕಾರದವರು ಮಾಡಿಲ್ಲ. ಈಗ ಸುಮಾರು 6–7 ವರ್ಷಗಳಿಂದಲೂ ಇದೇ ರೀತಿಯಲ್ಲಿಯೇ ವರ್ತಿಸುತ್ತಾ ಬಂದಿದ್ದಾರೆ. ಇಲ್ಲಿಯವರೆಗೆ ಕೇಂದ್ರ ಸರ್ಕಾರದವರಿಂದ ಆರ್ಬಿಟ್ರೇಷನ್ನಿಗೆ ತಾವು ಒಪ್ಪಲಿಕ್ಕೆ ಸಾಧ್ಯವಿಲ್ಲಾ ಎನ್ನುವ ನಿಲುವಿಗೆ ಬಂದು ನಮಗೆ ಟ್ರಿಬ್ಯುನಲ್ ನೇಮಿಸಿ ಕೊಡಲೇಬೇಕು ಎನ್ನುವ ನಿರ್ಧಾರಕ್ಕೆ ಇದುವರೆಗೆ ಬರಲಿಲ್ಲ. ಹಾಗಾಗಿದ್ದರೆ Tribunal ನಲ್ಲಿ ಈ ವಿಷಯ ಈಗಾಗಲೆ ನಡೆದು ತೀರ್ಪು ಬರಬಹುದಾಗಿತ್ತು. ಇವರಿಂದಾಗಿ ಈ ವಿಚಾರವನ್ನು ಇಷ್ಟೊಂದು ವಿಳಂಬ ಮಾಡಲಾಯಿತು. ಈ ರೀತಿಯಾಗಿ ಸಮಯವನ್ನು ಕಳೆದದ್ದು ಒಂದು ದೊಡ್ಡ ದೋಷವಾಯಿತು.

ಇನ್ನು ಕೃಷ್ಣಾ ಪ್ರಾಜೆಕ್ಟನ್ನು ತೆಗೆದುಕೊಂಡರೆ ಇದರ ಬಗ್ಗೆ ಒಂದು ಶಬ್ದ ಸಹಿತ ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ. ಇದು ಒಂದು ದೊಡ್ಡ ಇರಿಗೇಷನ್ ಪ್ರಾಜೆಕ್ಟ್. ಇದರ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನೂ ಹೇಳದೇ ಇರುವುದು ಬಹಳ ಖೇದವಾದ ವಿಷಯ. ಮೊನ್ನೆ ಕೇಂದ್ರದ ಇರಿಗೇಷನ್ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರು ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮಾತನಾಡುತ್ತಾ ನಮಗೆ ಹಣದ ಕೊರತೆ ಇದೆ, ಇದನ್ನು ನಡೆಸಲು ಪ್ರಯತ್ನ ಮಾಡುವುದಕ್ಕೆ ಅನುಕೂಲವಾಗುತ್ತದೆಯೋ ಇಲ್ಲವೋ ಎನ್ನುವಂತಹ ಒಂದು ಭಯವನ್ನು ನಮ್ಮೆಲ್ಲರ ಗಮನ ದಲ್ಲಿಯೂ ತಂದಿದ್ದಾರೆ. ಅದಕ್ಕಾಗಿ ನಮ್ಮ ಸರ್ಕಾರದವರು ಕೃಷ್ಣಾ ಪ್ರಾಜೆಕ್ಟ್ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಆದಷ್ಟು ತೀವ್ರವಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಯಾವ ನೀತಿ ನಿಯಮ ವನ್ನು ಅನುಸರಿಸುತ್ತಾರೆ ಎನ್ನುವ ಚಿತ್ರವನ್ನು ನಮ್ಮ ಎದುರಿಗೆ ಇಡಬಹುದಾಗಿತ್ತು. ಈ ವಿಷಯ ವನ್ನು ನಮ್ಮ ಎದುರಿಗೆ ಇಡದೇ ಇರುವುದು ಖೇದಕರವಾದ ವಿಷಯ.

ಇನ್ನೂ ಕೂಲಿಗಾರರ ವಿಷಯದಲ್ಲಿ ಹೇಳುವುದಾದರೆ ರಾಜ್ಯಪಾಲರ ಭಾಷಣದಲ್ಲಿ ಕೈಗಾರಿಕಾ ಕೂಲಿಗಾರರ ವಿಷಯದಲ್ಲಿ ಹೇಳಿದ್ದಾರೆ. ಇದು ವಕ್ಕಲಿಗರ ದೇಶವಾಗಿ, ಇಲ್ಲಿ ವಕ್ಕಲಿಗರ ಸಂಖ್ಯೆ, ಎಂದರೆ ವ್ಯವಸಾಯ ಕೂಲಿಗಾರರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದರೂ ಕೂಡ ಇದರ ಬಗ್ಗೆ ಸರ್ಕಾರದ ನೀತಿ ನಿಯಮಗಳೇನು ಎಂಬುದನ್ನೂ, ಮತ್ತು ಅವರಿಗೆ ಸರ್ಕಾರದವರು ಕೊಡತಕ್ಕಂಥ ಸವಲತ್ತುಗಳೇನು ಎನ್ನತಕ್ಕಂಥ ವಿಷಯ ಈ ಭಾಷಣದಲ್ಲಿ ಉಲ್ಲೇಖ ಇಲ್ಲ. ಅದಕ್ಕಾಗಿ ನಾನು ವಿಷಾದಿಸುತ್ತೇನೆ.

(ಶ್ರೀ ಎಂ. ನಾಗಪ್ಪ)

ಇನ್ನು ರೂರಲ್ ಮತ್ತು ಅರ್ಬನ್ ವಾಟರ್ ಸಪ್ಲೈ ವಿಷಯವನ್ನು ನಾನು ಹೇಳಬೇಕಾದರೆ, ಈಗ ರಾಯಚೂರು ವಾಟರ್ ಸಪ್ಲೈ ಯೋಜನೆಯ ವಿಷಯದಲ್ಲಿ ಈಗ ಸಾಧಾರಣವಾಗಿ ಎರಡು ವರ್ಷಗಳಿಂದ ಒಂದು ರಿಜರ್ವಾಯರ್ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಈ ವಿಳಂಬದ ವಿಷಯವನ್ನು ಮಂತ್ರಿಗಳ ಗಮನಕ್ಕೆ ತಂದರೂ, ಪ್ರತಿ ಸಾರಿ ಈ ವಿಷಯವನ್ನು ಅವರ ಲಕ್ಷ್ಯಕ್ಕೆ ತಂದರೂ ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ರಾಯಚೂರು ಜಿಲ್ಲೆಯಲ್ಲಿ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಭಾವಿಗಳಿಲ್ಲ. ನಮಗೆ ಸ್ವಾತಂತ್ರ್ಯ ಬಂದು 20 ವರ್ಷಗಳಾಗಿವೆ. ಅದರೂ ಸಹ ಅ ಪ್ರದೇಶದಲ್ಲಿ ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರಿನ ಬಾವಿಗಳನ್ನು ಸರ್ಕಾರದವರು ಒದಗಿಸಿಕೊಟ್ಟಿಲ್ಲ. ಜನಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ನಮ್ಮ ದೇಶದಲ್ಲಿ ಇನ್ನೂ ಅನೇಕ ಯೋಜನೆಗಳು ಕಾರ್ಯಗತವಾಗಿಲ್ಲ. ಈ ರೀತಿಯಾಗಿ ಸರ್ಕಾರದ ಪ್ರತಿ ಯೋಜನೆಯನ್ನೂ ಮುಂದೂಡತಕ್ಕ ನೀತಿಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ; ರಾಯಚೂರಿನ ವಾಟರ್ ಸಪ್ಲೈ ಯೋಜನೆ ಬಹಳ ದಿವಸ ಗಳಿಂದ ಕಾರ್ಯರೂಪಕ್ಕೆ ಬಾರದೆ ಹಾಗೆಯೇ ಉಳಿದಿದೆ. ಆದ್ದರಿಂದ ಇದನ್ನು ಆದಷ್ಟು ತೀವ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದು ನಾನು ಮತ್ತೊಮ್ಮೆ ಸರ್ಕಾರದ ವರನ್ನು ಒತ್ತಾಯ ಪಡಿಸುತ್ತೇನೆ. ಇಷ್ಟು ಹೇಳಿ ಈ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ವಂದನಾರ್ಪಣೆಯನ್ನು ಸಮರ್ಪಿಸುವ ಬಗ್ಗೆ ಈ ಸಭೆಯ ಮುಂದೆ ಏನು ಒಂದು ಸೂಚನೆ, ನಿರ್ಣಯ ಬಂದಿದೆ ಅದನ್ನು ಸಮರ್ಥಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

**Sri S. S. SHETTAR** (Hubli).—I have submitted a notice of privilege. The Leader of the House is expected to be present here. It is a privilege of this House that he must be present here when the Governor's Address is discussed.

**Sri D. M. SIDDIAH** (Biligere).—The Ministry has collective responsibility. Other Ministers are here and it is as good as the Leader being present.

**Sri S. S. SHETTER.**—It is our privilege and so we are going to insist. It is a breach of privilege if the ministers are absent. That is why I have submitted that the rule may be suspended and I may be allowed to raise this issue and advance further arguments.

**Mr. DEPUTY SPEAKER.**—It does not amount to a privilege.

**Sri S. S. SHETTAR.**—Definitely it is a privilege, if they do not meet our points.

9-00 A.M.

**Mr. DEPUTY SPEAKER.**—It does not amount to any privilege.

**Sri D. DEVARAJ URS** (Minister for Animal Husbandry, Fisheries, Information and Publicity).—There are conventions set up for all these things. I do not think we have known any practice where that all the Ministers should be present all the time when there is session. As far as possible all the Ministers will be present if they have no other urgent and important work outside the House. Due to exigencies of work, some Ministers might have gone somewherelse. When we are here, it is our collective responsibility and we are answerable to things

raised. It would not be correct to say that a Minister should not go out at all. If he says that all the Ministers should be present, why should I not say that all the members also should be present always ? Something applies to the members also if you are correct in saying that all the Ministers should be present. May I know under what provision the member says that all the Ministers should be present always ?

ಶ್ರೀ ಎ. ಆರ್. ಪಂಚಗಾವಿ. - ಇವತ್ತಿನ ದಿವಸ ರಾಜ್ಯಪಾಲರ ಭಾಷಣದಲ್ಲಿ ಒಂದು ಮಹತ್ವದ ಮಾತು ಬಂದಿಲ್ಲವೆಂದು ಹೇಳಬಹುದು. ಮೊದಲನೆಯದಾಗಿ ನಾವು ಪ್ರಜಾಪ್ರಭುತ್ವದಲ್ಲಿ ಯಾವ ಸಮಾಜವಾದಿ ತಳಹದಿಯ ಮೇಲೆ ಯಾವ ಗುರಿಇಟ್ಟು ರಾಜ್ಯವನ್ನು ಕಟ್ಟಲು ಹೊರಟ್ಟಿದ್ದೇವೋ, ಅದು ಕುಸಿದು ಬಿದ್ದಿದೆ ಎಂದು ಹೇಳಬಹುದು. ಇಂದು ನಾವು ರಾಜ್ಯದಲ್ಲಿ ಬಂಡವಾಳಶಾಹಿ ರಾಜ್ಯವನ್ನು ನಿರ್ಮಾಣ ಮಾಡುತ್ತಿದ್ದೇವೆ. ಪಿ. ಡಬ್ಲ್ಯು. ಡಿ. ಯ ಖಾತೆಯನ್ನು ತೆಗೆದುಕೊಂಡರೆ ಮೊದಲು ಸುಮಾರು ಒಬ್ಬರು ಇಬ್ಬರು ದೊಡ್ಡ ದೊಡ್ಡ ಕಂಟ್ರಾಕ್ಟುದಾರರು ಇದ್ದರು. ಇಂದು ಮೈಸೂರು ರಾಜ್ಯದಲ್ಲಿ ಸುಮಾರು 20-25 ಕೋಟ್ಯಾಧೀಶ ಕಂಟ್ರಾಕ್ಟರುಗಳನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದ ಎಷ್ಟು ಸಾರ್ವಜನಿಕರ ದುಡ್ಡು ಬಂಡವಾಳಶಾಹಿಗಳಿಗೆ ಹೋಗುತ್ತಿದೆ ಎಂದು ನಾವು ಲೆಕ್ಕ ಹಾಕಬಹುದು. ಅದೇ ರೀತಿಯಲ್ಲಿ ಉದ್ಯಮಗಳಲ್ಲಿಯೂ ಕೇವಲ ಬಂಡವಾಳ ಶಾಹಿಗಳದ್ದೇ ಉದ್ಯಮಗಳು ನಡೆಯುತ್ತಾ ಇವೆ. ಕೇವಲ ಇವತು ಅಂಥವರಿಗೇನೇ ಮಹತ್ವ ಕೊಡಲಾಗುತ್ತದೆ. ಮೈಸೂರು ರಾಜ್ಯದಲ್ಲಿ ಹೊರಗಿನವರು ಕೂಡ ಬಂಡವಾಳಶಾಹಿಗಳು ಬರುತ್ತಿದ್ದಾರೆ. ಅವರು ನಮ್ಮನ್ನು ಇಂದು ಶೋಷಿಸಿಕೊಂಡು ಹೋಗುತ್ತಿದ್ದಾರೆ. ಅನೇಕ ಸಲ ಸಹಕಾರಿ ತಳಹದಿಯ ಮೇಲೆ, ಸಾಮಾಜಿಕ ತಳಹದಿಯ ಮೇಲೆ ಬಂಡವಾಳ ಕೂಡಿಸಿ ಉದ್ಯಮಗಳನ್ನು ಪ್ರಾರಂಭ ಮಾಡಬೇಕಾದರೆ, ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರೋತ್ಸಾಹ ಅದಕ್ಕೆ ಸಿಗುತ್ತಾ ಇಲ್ಲ. ಅದರಿಂದಾಗಿ ನಮ್ಮ ಅನೇಕ ಉದ್ಯಮಗಳು ನಷ್ಟ ಹೊಂದಿ ಇದರಿಂದ ಸಾರ್ವಜನಿಕರ ಬಂಡವಾಳದ ಸಾಕಷ್ಟು ಪಾಲು ಸಿಗುತ್ತಾ ಇಲ್ಲ. ಇದು ಹೊರಗಿನ ಬಂಡವಾಳ ಶಾಹಿಗಳಿಗೆ ಮಾತ್ರ ಸಿಗುತ್ತದೆಂದು ಹೇಳಬಹುದು. ನಮ್ಮ ಸಮಾಜವಾದದ ಗುರಿ, ಸ್ವರೂಪ ಸಮಾಜವಾದವನ್ನು ನಾವು ಕಟ್ಟಲಿಕ್ಕೆ ಹೊರಟ ಮೇಲೆ, ಈ ರೀತಿಯಾಗುವುದಕ್ಕೆ ಆಸ್ಪದ ಇರಬಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀ ಕದಂರವರು ಹೇಳಿದ ಹಾಗೆ ಟೆನೆನ್ಸಿಗಳು ಮುಗ್ಗರಿಸಿದ್ದಾವೆ. ಎಲ್ಲೂ ಕೂಡ ರೈತರ ಕಲ್ಯಾಣ ಮಾಡಲಿಕೆ ಸಾಧ್ಯವಾಗಿಲ್ಲ, ಏನಾದರೂ ಇದ್ದರೂ ಕೂಡ, ಅದನ್ನು ಜಾರಿಗೆ ತರಬೇಕಾದರೆ, ಬಹಳ ತೊಂದರೆ, ಅಡಚಣೆಗಳು ಬರುತ್ತವೆ. ರೈತನಿಗೆ ಮೂಲ ಹಿಡುವಳಿಯ ಹಕ್ಕು, ದುಡಿಯುವುದಕ್ಕೆ ಒಂದು ಹಿತ ಸಂಬಂಧ ಏರ್ಪಾಟಾಗಬೇಕಾದರೆ, ಅದಕ್ಕೆ ಅನೇಕ ತಡೆಗಳು ಬರುತ್ತವೆ. ಇದರ ಜೊತೆಗೆ ಇನ್ನೂ ಅನೇಕ ರೀತಿಯ ಸಾಮಾಜಿಕ ಬದಲಾವಣೆಗಳನ್ನು ಮಾಡಲು ನಮ್ಮ ರಾಜ್ಯದಲ್ಲಿ ಶಕ್ತರಾಗಿಲ್ಲ ಎಂದು ನಾನು ಹೇಳಬಯಸುತ್ತೇನೆ. ಮಹಾತ್ಮ ಗಾಂಧಿಯವರು ಸಾಮಾನ್ಯ ಮನುಷ್ಯನು ಕೂಡ ಆಡಳಿತದಲ್ಲಿ ಭಾಗವಹಿಸಬಹುದು ಎನ್ನುವ ರೀತಿಯಲ್ಲಿ ಒಂದು ಭಾಷ ತಳಹದಿಯ ಮೇಲೆ ರಾಜ್ಯಗಳ ನಿರ್ಮಾಣವಾಗಬೇಕೆಂದು ಗುರಿ ಇಟ್ಟುಕೊಂಡಿದ್ದರು. ಅದನ್ನು ಕಾಂಗ್ರೆಸ್ ಸರ್ಕಾರ ಸಮರ್ಥನೆ ಮಾಡುತ್ತಾ ಬಂತು. ಆದರೆ ದುರ್ದೈವವಶಾತ್ ಭಾಷಾ ಗೊಂದಲವು ಇಂದು ಇಡೀ ರಾಷ್ಟ್ರಕ್ಕೆ ಘಾತಕವನ್ನು ತರುವಂತಹ ಸ್ಥಿತಿಯಲ್ಲಿದೆ. ಇಂದು ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ ರಾಷ್ಟ್ರಧ್ವಜವನ್ನು ಸುಟ್ಟು ಹಾಕಿದ ನಿದರ್ಶನಗಳಿವೆ. ಇದು ಒಳ್ಳೆಯ ಲಕ್ಷಣ ಗಳಲ್ಲ. ಈ ರೀತಿಯ ರಾಷ್ಟ್ರಕ್ಕೆ ಧಕ್ಕೆತರುವಂತಹ ಚಟುವಟಿಕೆಗಳನ್ನು ಹತ್ತಿಕ್ಕಲೇಬೇಕು. ಇಡೀ ರಾಷ್ಟ್ರ ಒಂದು ಎನ್ನುವ ಭಾವನೆ ನಮ್ಮಲ್ಲಿ ಮೂಡಿಬಂದು ಅದನ್ನು ಪೋಷಿಸಿಕೊಂಡು ಬರಲೇಬೇಕು. ಛಿದ್ರಕಾರಕ ಘಟನೆಗಳನ್ನು ಖಂಡಿಸಲೇಬೇಕು. ಇಂದು ವಿದ್ಯಾರ್ಥಿಗಳಲ್ಲಿ ಅಶಿಸ್ತು ಬೆಳೆಯುತ್ತಾ ಇದೆ. ಅವರಿಗೆ ನಾವು ಪಾಲಕರು ಕೂಡ ಸಾಕಷ್ಟು ಮಾರ್ಗದರ್ಶನ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳಲ್ಲಿ ಇಂಥ ಭಾವನೆ ಬೆಳೆಯದಂತೆ ನೋಡಿಕೊಳ್ಳಬೇಕು. ಇಂದು ಕಾಲೇಜುಗಳಲ್ಲಿ ಮುಷ್ಕರಗಳು, ಬಂದುಗಳು ಎಲ್ಲಾ ನಡೆಯುವುದು ಒಳ್ಳೆಯ ಲಕ್ಷಣವಲ್ಲ. ನಾವು ನಮ್ಮ ಅಭಿ ಪ್ರಾಯ ವ್ಯಕ್ತಪಡಿಸುವುದಕ್ಕೂ ಒಂದು ಮಿತಿ ಇದೆ. ಅದನ್ನು ಬಿಟ್ಟು ಬಸ್ಸುಗಳನ್ನು ನಾಶಮಾಡು ವುದು, ರೈಲ್ವೆಗಳನ್ನು ನಾಶ ಮಾಡುವುದು, ಮುಂತಾದ ವಿನಾಶಕಾರಿ ಕೆಲಸಗಳನ್ನು ಕೈಗೊಳ್ಳು ವುದು ಒಳ್ಳೆಯ ಲಕ್ಷಣವಲ್ಲ ಇದು ದೇಶಕ್ಕೆ ಹಾನಿಯನ್ನು ತರುವಂಥದ್ದು. ಇದನ್ನು ನಾವೆಲ್ಲರೂ ತಿಳಿದು ಕೊಳ್ಳಬೇಕು. ನಾವು ನಮ್ಮೆಲ್ಲರ ಮಕ್ಕಳನ್ನು ಇಂಥ ಘಟನೆಗಳಿಗೆ ಒಳಗಾಗದಂತೆ ನೋಡಿ ಕೊಂಡು, ಶಾಲಾ ಅಭ್ಯಾಸ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ನಮಗೆ ವಿದ್ಯಾರ್ಥಿ ದೆಸೆಯಲ್ಲಿ ಒಂದು ಭಾಷೆ ಕಲಿತರೆ ಏನೂ ಹಾನಿಯಾಗಲಿಕ್ಕಿಲ್ಲ. ಭಾರತವೆಲ್ಲಾ ಒಂದಾಗಿ ರುವಾಗ ಹಿಂದಿ ಕಲಿತರೂ, ತೆಲುಗು ಕಲಿತರೂ, ತಮಿಳು ಕಲಿತರೂ, ಅದರಿಂದ ಏನೂ ನಷ್ಟ

(ಶ್ರೀ ಎ. ಆರ್. ಪಂಚಗಾವಿ)

ವಾಗುವುದಿಲ್ಲ. ಆದ್ದರಿಂದ ಆದಷ್ಟು ಮಟ್ಟಿಗೆ ಈ ಭಾಷ ಗೊಂದಲಕ್ಕೆ ನಮ್ಮ ವಿದ್ಯಾರ್ಥಿಗಳು ಬೀಳದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕ. ಅದಕ್ಕಾಗಿ ಈ ಭಾಷಾ ಗೊಂದಲವನ್ನು ತಪ್ಪಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಮಾನ್ಯ ಕದಂರವರು, ಹೇಳಿದರು--ಹಿಂದೂಸ್ಥಾನದ ಮಹಾ ನ್ಯಾಯಾಧೀಶರಾದ ಮಹಾಜನರವರು ಕೊಟ್ಟ ವರದಿ ಮಿಶ್ಚೀವಸ್ ಎಂದು ಹೇಳುವ ಮಟ್ಟಕ್ಕೆ ಬಂದು ಮುಟ್ಟಿದ್ದಾರೆ. ಅವರು ಒಂದು ವೇಳೆ ತಪ್ಪು ಅಭಿಪ್ರಾಯ ಕೊಟ್ಟಿರಬಹುದು, ಅದಕ್ಕೆ ಏನಾದರೂ ದುಷ್ಟ ಶಬ್ದಗಳನ್ನು ಉಪಯೋಗಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಮಹಾಜನ ಏಕಸದಸ್ಯ ಅಯೋಗ ನೇಮಕ ಮಾಡುವುದು ಬೇಡವೆಂದು ನಾವೆಲ್ಲರೂ ಒಕ್ಕೊರಳಿನಿಂದ ಹೇಳಿದ್ದೇವೆ. ಪುನಃ ಪುನಃ ಎತ್ತುವುದು ಬೇಡವೆಂದು ಹೇಳಿದರೂ, ಕೇಂದ್ರ ಸರ್ಕಾರದವರು ಕೇಳದೆ ಕಮಿಶನ ನೇಮಿಸಿ ಈ ಚಳವಳಿಗೆ, ಅನ್ಯಾಯ, ಅತ್ಯಾಚಾರಗಳಿಗೆ ಆಸ್ಪದ ಮಾಡಿ ಕೊಟ್ಟಿದೆ. ದುರ್ದೈವದಿಂದ ನಮ್ಮ ಮರಾಠಿ ಬಂಧುಗಳು ಇದನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ. ಯಾವ್ಯಾವ ಭಾಗ ಎಲ್ಲಿ ಇದ್ದರೂ, ಅವು ಭಾರತದ ಒಂದು ಭಾಗವೆಂದು ನಾವು ತಿಳಿದುಕೊಂಡು ನಡೆಯತಕ್ಕದ್ದು. ಇಂಥ ಗೊಂದಲಗಳಿಂದ ಅನೇಕ ರೀತಿಯಲ್ಲಿ ನಮ್ಮ ದೇಶಕ್ಕೆ ನಷ್ಟವಾಗುತ್ತದೆ, ಇದರಿಂದ ಅನೇಕ ಯೋಜನೆಗಳಿಗೆ ಕೂಡ ನಷ್ಟವಾಗುವುದು. ಕೃಷ್ಣಾ ನದಿ ನೀರಿನ ಬಗ್ಗೆ ವಾದ ವಿವಾದಗಳು ನಡೆಯುತ್ತಿವೆ ಮತ್ತು ಇನ್ನೂ ಅನೇಕ ನೀರಾವರಿ ಯೋಜನೆಗಳು ಆಗದೇ ಉಳಿದಿವೆ. ಇದರಿಂದಾಗಿ ದೇಶದ ಅಭಿವೃದ್ಧಿ ಯೋಜನೆಗಳು ಆಗದೆ ಬಹಳ ಹಿಂದುಳಿಯುತ್ತಾ ಹೋಗುತ್ತಿವೆ ಎನ್ನುವುದನ್ನು ನಾವೆಲ್ಲರೂ ಲಕ್ಷದಲ್ಲಿಟ್ಟುಕೊಳ್ಳಬೇಕು. ಉದಾಹರಣೆಯಾಗಿ ನಮ್ಮ ಭಾಗದ ಘಟಪ್ರಭಾ ಯೋಜನೆಯನ್ನೇ ತೆಗೆದುಕೊಂಡರೆ, ಮೊದಲು ಚಂದಗಡದ ಹತ್ತಿರ ಹಡಲ್ಗ ಡ್ಯಾಂ ಕಟ್ಟಬೇಕೆಂದು ಇತ್ತು. ಈಚೆಗೆ ಇದರ ಎತ್ತರವನ್ನು ತಗ್ಗಿಸಿ ಬೇರೆ ಕಡೆ ಕಟ್ಟಬೇಕೆಂದು ಮಾಡಿ ಈಗ ಹಿಡಕಲ್‌ಬಳಿ ಡ್ಯಾಂ ಕಟ್ಟುತ್ತಿದ್ದಾರೆ. ಇದರಿಂದ ಸುಮಾರು 150 ಅಡಿಯಷ್ಟು ಎತ್ತರವನ್ನು ಕಡಿಮೆ ಮಾಡಬೇಕಾಗಿ ಬಂತು ಮತ್ತು ಮೊದಲಿನಂತೆ ಕಟ್ಟಿದರೆ ಸುಮಾರು ಒಂದೂವರೆ ಲಕ್ಷ ಎಕರೆಗಳಷ್ಟು ಹೆಚ್ಚು ಭೂಮಿಗೆ ನೀರಾವರಿಯ ಸೌಕರ್ಯಗಳು ಸಿಕ್ಕಿ ಅದರಿಂದ ಇನ್ನೂ ಹೆಚ್ಚು ಉಪಯೋಗ ಪಡೆಯಬಹುದಾಗಿತ್ತು. ಈಗ ಆಹಾರಧಾನ್ಯಗಳ ಅಭಾವ ಇದೆ ಎಂದು ಅಮೇರಿಕಾ ಹಾಗೂ ಇನ್ನಿತರ ದೇಶಗಳಿಗೆ ಕೈ ಒಡ್ಡಬೇಕಾದ ಸ್ಥಿತಿ ಬಂದಿದೆ. ಇವಕ್ಕೆ ಬದಲಾಗಿ ಲಕ್ಷಾಂತರ ರೂಪಾಯಿಗಳನು ಖರ್ಚು ಮಾಡಿ ಈ ನೀರಾವರಿ ಯೋಜನೆಗಳನ್ನು ಮಾಡಿದ್ದಿದ್ದರೆ ದೇಶದಲ್ಲಿ ಇನ್ನೂ ಹೆಚ್ಚು ಬೆಳೆ ಬೆಳೆಯಬಹುದಾಗಿತ್ತು ಎನ್ನುವುದನ್ನು ಎಲ್ಲರೂ ಲಕ್ಷದಲ್ಲಿಡಬೇಕು. ಎಲ್ಲದಕ್ಕೂ ಒಂದು ಮಿತಿ ಇದೆ. ಆ ಮಿತಿಯೊಳಗೆ ನಮ್ಮ ಯೋಜನೆಗಳನ್ನು ಮಾಡುವುದು ಅವಶ್ಯ ಇದೆ. ಇನ್ನು ಇತ್ತೀಚೆಗೆ ನಡೆದ ಭಾಷಾವಾರು ಗೊಂದಲಗಳನ್ನು ನೋಡಿದರೆ ಇಂತಹ ಭಾಷಾವಾರು ರಾಜ್ಯಗಳು ಏತಕ್ಕಾಗಿ ಹುಟ್ಟಿದವೋ ಎನ್ನುವಷ್ಟರ ಮಟ್ಟಿಗೆ ಕೆಲವರಿಗೆ ಅನಿಸಿದೆ ಕರ್ಣಾಟಕ ರಾಜ್ಯ ನಿರ್ಮಾಣವಾಗಬೇಕೆಂದು ಹೋರಾಟಮಾಡಿ ಭಾಷಾವಾರು ಪ್ರಾಂತ ಸಿಕ್ಕಿದರೂ ಕೂಡ ಭಾಷಾವಾರು ಪ್ರಾಂತಗಳು ಏತಕ್ಕಾದವು ಎನ್ನುವಷ್ಟು ಬೇಜಾರು ಈಚೆಗೆ ಕಂಡು ಬರುತ್ತಿದೆ. ಭಾಷಾವಾರು ಗೊಂದಲಗಳ ಬಗ್ಗೆ ಇತ್ತೀಚೆಗೆ ನಮ್ಮ ದೇಶದಲ್ಲಿ ನಡೆದಂತ ಚಳುವಳಿಗಳಿಂದ ಒಂದು ಮಾತನ್ನು ನಾವೆಲ್ಲ ಲಕ್ಷದಲ್ಲಿಡಬೇಕು. ಇಂತಹ ಚಳುವಳಿಗೆ ಎಳೆಯ ಮಕ್ಕಳನ್ನು ಕೂಡಿಸಿಕೊಂಡು ನಡೆಸಿದರೆ ಅದು ಸರಿಯಾದ ಮಾರ್ಗವಲ್ಲ. ನಮ್ಮ ಮಕ್ಕಳನ್ನು ಒಳ್ಳೆಯ ಹಾದಿಗೆ ತರುವುದರಲ್ಲಿ ತಕ್ಕ ಪ್ರಯತ್ನಗಳನ್ನು ಎಲ್ಲರೂ ಮಾಡಬೇಕು.

ಇನ್ನು ನಮ್ಮ ರಾಜ್ಯದ ಆಡಳಿತದ ಬಗ್ಗೆ ಹೇಳುವುದಾದರೆ ಆಡಳಿತದ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ. ಎಲ್ಲಿ ನೋಡಿದರೂ ಅಲ್ಲಿ ಲಂಚಗೂಳಿತನ ಬೆಳೆದು ಆಡಳಿತ ಶಿಥಿಲವಾಗಿ ಸರಕಾರದ ಕಚೇರಿಗಳಲ್ಲಿ ಸಾಕಷ್ಟು ಕೆಲಸಗಳು ಆಗುತ್ತಿಲ್ಲ. ಆಡಳಿತದಲ್ಲೇ ಸರಿಯಾದ ಬಿಗಿಇಲ್ಲದೆ ಇರುವುದರಿಂದಾಗಿ ಕೆಲಸಗಳು ನಡೆಯುತ್ತಿಲ್ಲ. ಆಡಳಿತದ ಯಂತ್ರವನ್ನು ಇನ್ನೂ ಬಿಗಿಯಾಗಿ ನಡೆಸದೇ ಹೋದರೆ ಸರಕಾರಿ ಕೆಲಸಗಳು ಸುಸೂತ್ರವಾಗಿ ನಡೆಯುವುದಿಲ್ಲ. ಸಮಾಜ ಕಲ್ಯಾಣ ಮಾಡಬೇಕೆಂದು ಸಮಾಜ ಕಲ್ಯಾಣ ಖಾತೆಗಾಗಿಯಾಗಿಯೇ ಪ್ರತ್ಯೇಕವಾದ ವ್ಯವಸ್ಥೆ ಮಾಡಿಕೊಂಡಿದ್ದರೂ ಸರಕಾರ ಅದರ ಮೂಲಕ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಸ್ಪಷ್ಟವಾಗಿ ನಾನು ಇಲ್ಲಿ ಹೇಳಬೇಕಾಗಿದೆ. ಲಂಚಗುಳಿತನ ಎನ್ನುವುದು ದಿನೇ ದಿನೇ ಅತಿಯಾಗಿ ಬೆಳೆಯುತ್ತಿದೆ ಇವೊತ್ತು ನಾವು ನೋಡಬಹುದು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಮುಖ್ಯನಾದವನು ಎಂದರೆ ತಲಾಟಿ. ಗ್ರಾಮದಲ್ಲಿ ಇವನೇ ಎಲ್ಲದಕ್ಕೂ ಮುಖಂಡನಾಗಿರುತ್ತಾನೆ. ಸಾಮಾನ್ಯವಾಗಿ ಒಬ್ಬ ರೈತ ಗ್ರಾಮದ ತಲಾಟಿಯ ಹತ್ತಿರ ಹೋಗಿ ಅವನ ಜಮೀನಿನ ಒಂದು ಉತಾರವನ್ನು ಪಡೆಯಬೇಕಾದರೆ ಅವನಿಗೆ ಲಂಚ ಕೊಡದೇ ಕೆಲಸವೇ ಅಗುವುದಿಲ್ಲ. ಇಂತಹ ನಿದರ್ಶನಗಳು ಒಂದಲ್ಲ ಹತ್ತಾರು ಕಡೆಗಳಲ್ಲಿ ನಾವು ನೋಡಬಹುದು. ಸಾಮಾನ್ಯವಾಗಿ ನಾವು ಎಲ್ಲೇ ನೋಡಲಿ ಲಂಚ

ಕೊಡದೇ ಯಾವ ಕೆಲಸವೂ ಈ ಸರಕಾರದಲ್ಲಿ ನಡೆಯುವುದಿಲ್ಲ ಎನ್ನುವ ಒಂದು ಅಭಿಪ್ರಾಯ ಬರುತ್ತದೆ. ಇದನ್ನು ಹೇಗೆ ತಪ್ಪಿಸಬೇಕು ಎನ್ನುವುದನ್ನು ವಿಚಾರ ಮಾಡಬೇಕಾದ ಕಾಲ ಬಂದಿದೆ. ಚಿಕ್ಕ ತಲಾಟಿಯಿಂದ ಹಿಡಿದು ಅವನ ಮೇಲ್ಮಟ್ಟದಲ್ಲಿರತಕ್ಕ ಆಡಳಿತದವರೆಗೆ ಲಂಚವಿಲ್ಲದೆ ಯಾವ ಕೆಲಸಗಳೂ ಆಗುವುದಿಲ್ಲ. ಇವನ್ನು ತಪ್ಪಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳದಿದ್ದರೆ ಜನತೆಗೆ ಕಲ್ಯಾಣ ಮಾಡಿದಂತಾಗುವುದಿಲ್ಲ. ಸಮಾಜದ ಜನತೆಯ ಕಲ್ಯಾಣ ಮಾಡಬೇಕು ಎಂದು ಅಹಾರಧಾನ್ಯವನ್ನು ಹೆಚ್ಚು ಬೆಳಸಬೇಕು ಎನ್ನುವುದು ನಮ್ಮ ದೇಶದಲ್ಲಿ ಬಹಳ ಮುಖ್ಯವಾಗಿ ಆಗಬೇಕಾದ ಕೆಲಸ ಆದರೆ ಇದರ ಬಗ್ಗೆ ಬಹಳ ಅನಾಹುತಗಳಾಗುತ್ತಿವೆ ಎಂದು ಇಲ್ಲಿ ಒತ್ತಿ ಹೇಳಬೇಕಾಗಿ ಬಂದಿದೆ. ಹೋದ ವರ್ಷ ಮಳೆಯಾಗದೆ ನಮ್ಮ ಭಾಗದಲ್ಲಿ ಕೆಲವು ಕಡೆ ದುಷ್ಕಾಲ ಪರಿಸ್ಥಿತಿಯುಂಟಾಯಿತು. ಈ ಸಾರಿ ಕೂಡ ನಮ್ಮ ದೇಶದ ಕೆಲವು ಭಾಗಗಳಲ್ಲಿ ದುಷ್ಕಾಲಕ್ಕೆ ಸಿಕ್ಕಿದ ಭಾಗಗಳೂ ಇವೆ ಎಂದು ಕೇಳುತ್ತೇವೆ. ಆದರೆ ಇದರ ರಿಲೀಫ್ ಮೆಷರ್ಸ್ ಬಗ್ಗೆ ಗವರ್ನರ್‌ರವರು ತಮ್ಮ ಭಾಷಣದಲ್ಲೂ ಉಲ್ಲೇಖ ಮಾಡಿದ್ದಾರೆ. ಈ ರಿಲೀಫ್ ಮೆಷರ್ಸ್ ಹೇಗೆ ನಡೆಯಬೇಕು ಎಂದರೆ ಇಲ್ಲಿನ ಜನಕ್ಕೆ ಸಾಕಷ್ಟು ಕಾಮಗಾರಿ ಕೆಲಸಗಳು ಸಿಗುವಂತೆ ಒದಗಿಸಕೊಡಬೇಕೆಂದು ಸರಕಾರದವರೇನೋ ಮಾಡುತ್ತಿದ್ದಾರೆ. ಆದರೆ ಇದು ಹೇಗೆ ನಡೆದಿದೆ ಎಂದರೆ ಎಲ್ಲಿ ಮುಖ್ಯವಾಗಿ ಜನಕ್ಕೆ ಅನುಕೂಲ ಸಿಗುವಂತೆ ಕಾಮಗಾರಿಗಳಾಗಬೇಕೋ ಆ ಸ್ಥಳಗಳಲ್ಲಿ ಕೆಲಸಗಳು ಆಗುತ್ತಿಲ್ಲ. ಇದಕ್ಕೆ ಕಾರಣ ಎಲ್ಲಿ ಒಬ್ಬ ಆಫೀಸರು ಶ್ರದ್ಧೆ ವಹಿಸಿ ಜನರಿಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಆಸೆಯಿಂದ ಮಾಡುತ್ತಿರುತ್ತಾರೋ ಅವರನ್ನು ಆ ಜಾಗದಿಂದ ವರ್ಗಮಾಡಿ ಬೇರೆ ಕಡೆಗೆ ಕಳುಹಿಸಿ ಬಿಡುತ್ತಾರೆ. ಅವರ ಜಾಗಕ್ಕೆ ಬೇರೆ ಒಬ್ಬರು ಆಫೀಸರನ್ನು ವರ್ಗ ಮಾಡುತ್ತಾರೆ. ಅವರಿಂದ ಜನಕ್ಕೆ ಎಷ್ಟು ಕೆಲಸಗಳು ಆಗಬೇಕೋ ಅದು ಆಗುತ್ತಿಲ್ಲ. ಈ ರೀತಿಯಾಗಿ ಅಧಿಕಾರಗಳ ವರ್ಗಾವರ್ಗಿ ಮಾಡುವುದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ತಮಗೆ ಬೇಕಾದ ಅಧಿಕಾರಿಗಳಿಂದ ಒಳ್ಳೆಯ ಕೆಲಸಗಳಾಗುತ್ತವೆ ಎಂದು ತಮಗೆ ಬೇಕಾದ ಸ್ಥಳಗಳಲ್ಲಿ ಅವರನ್ನು ಇಟ್ಟುಕೊಂಡು ಕೆಲಸ ಮಾಡಿಸುವುದು ಇನ್ನು ಕೆಲವು ಕಡೆಗಳಲ್ಲಿ ಕೆಲಸ ಮಾಡದೇ ಇರುವಂತಹ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಜನತೆಯ ಕೆಲಸಗಳು ನಡೆಯದಂತೆ ಮಾಡುವ ಮನೋವೃತ್ತಿಯನ್ನು ಆದಷ್ಟು ಬಿಡುವುದು ಒಳ್ಳೆಯದು. ಇದರಿಂದಾಗಿ ಸರಕಾರದಲ್ಲಿ ಈಗ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಇದನ್ನು ತಪ್ಪಿಸುವುದರ ಕಡೆಗೆ ಲಕ್ಷಕೊಡಬೇಕು. ಇದರಿಂದಾಗಿ ಸಾಕಾದಷ್ಟು ಗೊಂದಲಗಳಾಗುತ್ತಿವೆ. ಎಲ್ಲಿ ನಿರಾವರಿ ಯೋಜನೆಗಳಾಗಬೇಕೋ ಅಲ್ಲಿ ನೀರಾವರಿ ಯೋಜನೆಗಳು ಆಗುತ್ತಿಲ್ಲ. ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ನಮ್ಮ ಬೆಳಗಾವಿ ಜಿಲ್ಲೆಯಲ್ಲಿ ಕೊಡಬಹುದು. ಇದಕ್ಕಾಗಿ ಸರಕಾರದ ಈಗಿನ ನೀತಿಯನ್ನು ಬದಲಾಯಿಸುವುದು ಅವಶ್ಯವಿದೆ ಎಂದು ಕಾಣುತ್ತದೆ.

ಇನ್ನು ಬಾವಿಗಳನ್ನು ತೋಡಿಸುವುದರ ಸಲುವಾಗಿ ಸರಕಾರ ಸಾಕಷ್ಟು ಲಕ್ಷ್ಯಕೊಟ್ಟು ಹಣವನ್ನು ಸಹಾಯವಾಗಿ ಕೊಡುತ್ತಿದೆ. ಇದಕ್ಕಾಗಿ ಸಹಕಾರ ಸಂಘಗಳ ಮೂಲಕ ಸಾಲವನ್ನು ಕೊಡುವ ವ್ಯವಸ್ಥೆ ಮಾಡಿದ್ದರೂ ಅದರಿಂದ ಜನಕ್ಕೆ ಸಾಕಷ್ಟು ಸಿಗುತ್ತಿಲ್ಲ. ಅನೇಕ ಕಡೆ ಇಲ್ಲದ ಗೊಂದಲಗಳಿಂದಾಗಿ ತೀವ್ರವಾಗಿ ಯೋಜನೆಯಂತೆ ಕೆಲಸಗಳನ್ನು ಕೈ ಗೊಳ್ಳಲು ಆಗುತ್ತಿಲ್ಲ. ನಾನೂ ಕೂಡ ನಮ್ಮ ಕಡೆ ಅಗ್ರಿಕಲ್‌ಚರ್ ಇಲಾಖೆಯ ಮೂಲಕ ಬೋರಿಂಗ್ ಮೆಷಿನ್ ಪಡೆಯಲು ಪ್ರಯತ್ನ ಪಟ್ಟಾಗ ಅದಕ್ಕೆ ಆಪರೇಟರುಗಳು ಇಲ್ಲ ಎಂದು ಕೆಲವು ಕಡೆ ಅವು ಹಾಗೇ ಖಾಲಿಯಾಗಿ ಇದ್ದವು. ಅದೇ ರೀತಿಯಾಗಿ ಜಿಯಾಲಾಜಿಕಲ್ ಇಲಾಖೆಯಲ್ಲಿ ಬೋರ್ ಮಾಷಿನ್‌ಗಳು ಇಲ್ಲ, ಇಲ್ಲಿ ಆಪರೇಟರುಗಳಿದ್ದಾರೆ. ಹೀಗೆ ಅಧಿಕಾರಿಗಳಲ್ಲಿ ಒಂದಕ್ಕೊಂದು ಹೊಂದಾಣಿಕೆ ಇಲ್ಲದಂತಹ ಪರಿಸ್ಥಿತಿ ಬಂದಿದೆ. ಒಂದು ಡಿಪಾರ್ಟ್‌ಮೆಂಟಿನಿಂದ ಇನ್ನೊಂದು ಡಿಪಾರ್ಟ್‌ಮೆಂಟಿಗೆ ಹೊಂದಾಣಿಕೆ ಇಲ್ಲದೇ ಇರುವ ಕಾರಣದಿಂದಾಗಿ ಸರಕಾರದ ಲಕ್ಷಾಂತರ ರೂಪಾಯಿನ ಕೆಲಸಗಳು ಆಗದೆ ಖಾಲಿ ಬಿದ್ದಿವೆ. ಹೀಗಾದರೆ ಜನತೆಗೆ ಉಪಯೋಗ ಮಾಡಿದಂತಾಗುತ್ತದೆಯೆ ? ಇದನ್ನು ಗಮನದಲ್ಲಿಡಬೇಕು. ಇದನ್ನು ತಪ್ಪಿಸಿ ಸಾಮಾಜಿಕ ಸಂಪತ್ತು ಹಾಗೂ ಸಾರ್ವಜನಿಕರ ಸ್ಥಿತಿಯನ್ನು ಕಂಡುಕೊಂಡು ಅವರಿಗೆ ಅನುಕೂಲವಾಗುವಂತಹ ವ್ಯವಸ್ಥೆಯನ್ನು ಮಾಡಲು ಪ್ರಯತ್ನ ಮಾಡಬೇಕು.

ಇನ್ನು ಜನರಿಗೆ ಕಲ್ಯಾಣ ಮಾಡಬೇಕು ಸಮಾಜ ಕಲ್ಯಾಣ ಮಾಡಬೇಕು ಎಂದು ಸಮಾಜ ಕಲ್ಯಾಣ ಹಾಗೂ ಎನ್. ಇ. ಎಸ್. ಖಾತೆಯನ್ನು ನಡೆಸುತ್ತಿದ್ದಾರೆ. ಸಮಾಜ ಕಲ್ಯಾಣದ ಖಾತೆಯ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದರಿಂದ ಹಿಂದುಳಿದ ವರ್ಗದವರಿಗೆ ಅನೂಕೂಲ ಮಾಡಬೇಕು ಅವರಿಗೆ ಲಾಭವಾಗಬೇಕು ಎಂದು ಮಾಡಿರುವ ಉದ್ದೇಶವೇನೋ ಒಳ್ಳೆಯದು. ಹಿಂದುಳಿದ ಜನರಿಗೆ ಉದ್ಯೋಗಗಳನ್ನು ಒದಗಿಸಿ ಕೊಡಬೇಕು ಅವರಿಗೆ ಅನೂಕೂಲಗಳನ್ನು ಮಾಡಬೇಕು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು ಎಂದು ಸರಕಾರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಇನೊಂದು ಕಡೆ ಸೇಂದಿ, ಸಾರಾಯಿ ಅಂಗಡಿಗಳನ್ನು ಹೆಚ್ಚು ಹೆಚ್ಚಾಗಿ ತೆರೆಯಬೇಕು ಎಂದು ಮಾಡುತ್ತಿದ್ದಾರೆ. ಇದರಿಂದ ನಮ್ಮ ಸರಕಾರಕ್ಕೇನೋ

(ಶ್ರೀ ಎ. ಆರ್. ಪಂಚಗಾವಿ)

ಸುಮಾರು ಎಂಟುಕೋಟಿಯಷ್ಟು ಹೆಚ್ಚು ಆದಾಯ ಬಂತು ಎಂದು ಇದೂ ಕೂಡ ಮೂರು ತಿಂಗಳಲ್ಲಿ ಬಂದಿದೆ ಎಂದು ಸರಕಾರದವರು ಒಂದು ಕಡೆ ಹೇಳಿದ್ದಾರೆ. ಇದರಲ್ಲಿ ಕುಡಿಯುವವರು ಯಾರು ಎನ್ನುವುದನ್ನು ನೋಡುವಾಗ ವಾಸ್ತವವಾಗಿ ಸಮಾಜದಲ್ಲಿ ಬಹಳ ಹಿಂದುಳಿದಿರುವ ವರ್ಗದವರೇ ಆದರಲ್ಲೂ ಬಡವರೇ ಹೆಚ್ಚಾಗಿ ದುಡ್ಡುಕೊಟ್ಟು ಸರಕಾರಕ್ಕೆ ಹೆಚ್ಚು ಆದಾಯಬರುವಂತೆ ಮಾಡಿದ್ದಾರೆ. ಹೀಗೆ ಸರಕಾರದವರು ಒಂದು ಕೈಯಿಂದ ಕೊಟ್ಟು ಇನ್ನೊಂದು ಕಡೆ ಅದಕ್ಕೆ ನಾಲ್ಕು ಪಟ್ಟಿನಂತೆ ವಸೂಲು ಮಾಡುತ್ತಿದ್ದರೆ ಇದರಿಂದ ಸಮಾಜ ಕಲ್ಯಾಣ ಮಾಡಿದಂತಾಗುತ್ತದೆಯೆ ? ಆದುದರಿಂದ ನಾನು ಸರಕಾರಕ್ಕೆ ಸಲಹೆ ಮಾಡುವುದು, ಈ ಸಮಾಜ ಕಲ್ಯಾಣದ ಖಾತೆ ಇರುವುದರ ಬದಲು ಇದನ್ನು ರದ್ದುಗೊಳಿಸುವುದು ಸೂಕ್ತವಾದೀತು. ಸುಮ್ಮನೆ ಸಮಾಜ ಕಲ್ಯಾಣ ಮಾಡುತ್ತೇವೆ ಎಂದು ಇದನ್ನು ಬೆಳೆಸಿಕೊಂಡು ಹೋಗುವುದು ಸರಿಯಲ್ಲ. ಇದೇ ರೀತಿಯಾಗಿ ಎನ್. ಇ. ಎಸ್. ಇಲಾಖೆಯೂ ಕೂಡ ಆಗಿದೆ. ಈ ಖಾತೆಯಲ್ಲಿ ಸರಕಾರದ ಅಧಿಕಾರಿಗಳು ಒಂದು ಜೀಪನ್ನು ಇಟ್ಟುಕೊಂಡು ಬರೀ ತಿರುಗಾಡುವುದರಲ್ಲಿದ್ದಾರೆಯೇ ವಿನಾ ಜನಕ್ಕೆ ಇದರಿಂದೇನೂ ಉಪಯೋಗವಾಗುತ್ತಿಲ್ಲ! ಎನ್. ಇ. ಎಸ್. ಇಲಾಖೆಯಲ್ಲಿ ಎಕ್ಸ್‌ಟೆನ್‌ಷನ್ ಆಫೀಸರು, ಸೋಷಿಯಲ್ ಎಕ್ಸ್‌ಟೆನ್‌ಷನ್ ಆಫೀಸರು, ಅಗ್ರಿಕಲ್‌ಚರು ಎಕ್ಸ್‌ಟೆನ್ ಆಫೀಸರು ಎಂದು ಬೇಕಾದಷ್ಟು ಎಕ್ಸ್‌ಟೆನ್‌ಷನ್ ಆಫೀಸರುಗಳನ್ನು ಮಾಡುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ ಎಂದು ಇಲ್ಲಿ ಹಾಗೂ ಪಾರ್ಲಿಮೆಂಟ್‌ನಲ್ಲಿ ಕೂಡ ಒತ್ತಿ ಹೇಳುತ್ತಿದ್ದರೂ ಸರಕಾರ ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡುವುದರ ಕಡೆಗೆ ಗಮನ ಕೊಡುತ್ತಿಲ್ಲ. ಇಂತಹ ಕಾರ್ಯಕ್ರಮಗಳನ್ನು ಮುಂದುವರಿಸುವುದರಿಂದ ಜನತೆಗೆ ಉಪಯೋಗವಾಗುವುದಿಲ್ಲ ಎಂದು ಮಂತ್ರಿಗಳಿಗೆ ಹೇಳುತ್ತಿದ್ದರೂ ಅವರು ಇವರ ಧೋರಣೆಯನ್ನು ಬದಲಾಯಿಸುವುದರ ಕಡೆಗೆ ಗಮನ ಕೊಡುತ್ತಿಲ್ಲ. ಮಂತ್ರಿಗಳು ಹಾಗೂ ಸರಕಾರದ ಅಧಿಕಾರಿಗಳು ಹೊರಗಡೆ ಇವಕ್ಕೆ ವಿರೋಧವಾಗಿ ಮಾತನಾಡುತ್ತಿದ್ದರೂ ಅಧಿಕಾರಕ್ಕೆ ಬಂದ ಕೂಡಲೇ ಅದಕ್ಕೆ ವಿರೋಧವಾಗಿ ಹೇಳುತ್ತಾ ಈ ಖಾತೆಗಳನ್ನು ಮುಂದುವರಿಸುತ್ತಾ ಬರುತ್ತಿದ್ದಾರೆ. ರೈತರಿಂದ ದುಡ್ಡನ್ನು ಪಡೆದು ಸರಕಾರದ ಪ್ರತಿಯೊಂದು ಕಾಸನ್ನು ಕೂಡ ಅವರ ಅನುಕೂಲಕ್ಕಾಗಿ ವ್ಯಯ ಮಾಡುತ್ತಿದ್ದೇವೆ ಸಮಾಜದ ಕಲ್ಯಾಣ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದರೂ ಇದರಿಂದ ದೇಶದ ಬಡ ಜನತೆಗೆ ಕಲ್ಯಾಣವಾಗುತ್ತಿಲ್ಲ ಮತ್ತು ಜನರಿಗೆ ಇದರಿಂದೇನೂ ಲಾಭವಾಗುತ್ತಿಲ್ಲ ಎನ್ನುವ ಒಂದು ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಆಲಸಿ ಅಧಿಕಾರಿಗಳನ್ನು ಸರ್ಕಾರದವರು ಬೆಳೆಸಿಕೊಂಡು ಹೋದರೆ ದೇಶ ಮುಂದುವರೆಯಲಾರದು. ಈಗ ದೇಶ ಹಿಂದುಳಿಯುತ್ತಿರುವುದಕ್ಕೆ ಕಾರಣ ಹಣದ ದುರುಪಯೋಗವಾಗುತ್ತಿರುವುದು. ಸರ್ಕಾರದವರು ಹಣದ ದುರುಪಯೋಗವಾಗುವುದನ್ನು ನಿಲ್ಲಿಸಬೇಕು ಮತ್ತು ಆ ಬಗ್ಗೆ ತಕ್ಕ ಕ್ರಮಗಳನ್ನು ಕೈಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಬೇಕಾಗಿತ್ತು.

ಇನ್ನು ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಸಾಕಷ್ಟು ಖರ್ಚು ಮಾಡುತ್ತಿದ್ದಾರೆ. ಸಾಕಷ್ಟು ರೀತಿಯಿಂದ ಸರ್ಕಾರದವರು ಒಳ್ಳೆಯ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಅದರೂ ಸಹ ಎಲ್ಲಾ ಯೋಜನೆಗಳ ಬಗ್ಗೆಯೂ ಸಹ ಸರ್ಕಾರದವರು ಇನ್ನೂ ಹೆಚ್ಚಿನ ಲಕ್ಷ್ಯ ಕೊಟ್ಟು ಹಣದ ಅಪವ್ಯಯವಾಗದಂತೆ ನೋಡಿಕೊಂಡು ಹೋಗುತ್ತಾರೆಂದು ಭಾವಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿದ್ದಯ್ಯಕಾಶೀಮಠ (ಶಿರಹಟ್ಟಿ). —ಅಧ್ಯಕ್ಷರೇ, ಹೊಸ ವಿಷಯಗಳು ಯಾವುದೂ ಇಲ್ಲದೆ ಇದುವರೆಗೆ ಆಗಿರುವ ಕೆಲಸಗಳ ಬಗ್ಗೆ ಸವಿಸ್ತಾರವಾಗಿ ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರದವರು ತಿಳಿಸಿದ್ದಾರೆ.

ಮೊದಲನೆಯದಾಗಿ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಶಾಸನ ಸುವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿದ್ಯಾರ್ಥಿಗಳು ಭಾಷಾ ಪ್ರಶ್ನೆಯ ಸಂಬಂಧವಾಗಿ ಕೆಲವು ಪಟ್ಟಣಗಳಲ್ಲಿ ಅಶಾಂತಿಯನ್ನು ಉಂಟುಮಾಡಿದ್ದಾರೆಂದೂ, ಈ ಭಾಷಾ ಗೊಂದಲ ವಿಕೋಪ ರೂಪಕ್ಕೆ ಹೋಗುವುದರಲ್ಲಿದೆಯೆಂದು, ಪ್ರಸ್ತಾಪ ಮಾಡಿ, ಭಾಷಾ ಗೊಂದಲವನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ವಿಚಾರದಲ್ಲಿ ಹೇಳಿರುವುದನ್ನು ನೋಡಿದರೆ ಬಹಳ ಆಶ್ಚರ್ಯವೆಂದು ಕಾಣುತ್ತದೆ. ಈ ಭಾಷಾ ಗೊಂದಲವಿರುವುದು ಬರೀ ಮೈಸೂರು ರಾಜ್ಯದಲ್ಲಿ ಮಾತ್ರವಲ್ಲ, ದಕ್ಷಿಣದ ರಾಜ್ಯಗಳಾದ ಕೇರಳ, ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಲ್ಲೂ ಸಹ ಇದೆ. ಮೈಸೂರು ರಾಜ್ಯದಲ್ಲಿರುವ ಭಾಷಾ ಗೊಂದಲವನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕು ಎನ್ನುವ ವಿಷಯದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದರೆ ಒಳ್ಳೆಯದಾಗಿತ್ತು ಎಂದು ಹೇಳಬಯಸುತ್ತೇನೆ.

†Indicates that the remarks or speeches have not been revised by the member concerned.

ಇನ್ನು ಯೋಜನೆಯ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡುತ್ತಾ, ನಾಲ್ಕನೆಯ ಪಂಚ ವಾರ್ಷಿಕ ಯೋಜನೆಯನ್ನು ಆರ್ಥಿಕ ಅಭಾವದ ಕಾರಣ 1-4-1969 ರವರೆಗೆ ಮುಂದುವರಿಸ ಲಾಗಿದೆಯೆಂದು ಹೇಳಿದ್ದಾರೆ. ರೈತರಿಗೆ ಸಹಾಯ ಮಾಡತಕ್ಕಂಥ ಅಭಿವೃದ್ಧಿ ಬ್ಲಾಕ್‌ಗಳು ಏನಿವೆ, ಅವುಗಳ ಬಗ್ಗೆ ಮೂರನೆಯ ಸ್ಟೇಜಿನಲ್ಲಿ ಯಾವ ರೀತಿಯಲ್ಲಿರಬೇಕು ಎನ್ನುವ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಅಭಿವೃದ್ಧಿ ಬ್ಲಾಕ್‌ಗಳು ಹಿಂದೆ ಯಾವ ರೀತಿ ಕೆಲಸ ಮಾಡಿವೆ ಎಂಬುದನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ.

ಇನ್ನು ಆಹಾರದ ಕೊರತೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ, ಆಹಾರದ ಕೊರತೆಯನ್ನು ನಿವಾರಿ ಸಲು ಕೇಂದ್ರಸರ್ಕಾರದವರು ಪರದೇಶಗಳಿಂದ ಗೋಧಿ ಮತ್ತು ಮೈಲೋವನ್ನು ತರಿಸಿಕೊಂಡು ರಾಜ್ಯಗಳಿಗೆ ಹಂಚುತ್ತಿದ್ದರಲ್ಲಿ ತೀವ್ರ ಕಡಿತವಾಗಿದೆಯೆಂದು ಹೇಳಿದ್ದಾರೆ. ಹರಿಯಾಣ ರಾಜ್ಯದಿಂದ ನೇರವಾಗಿ 3,200 ಟನ್ನು ಕಡಲೆ ಮತ್ತು ಕಡಲೆ ಬೇಳೆಯನ್ನು ಪಡೆಯುಕೊಳ್ಳಲು ಸಾಧ್ಯವಾಗಿದೆ ಯೆಂದು ಹೇಳಿದ್ದಾರೆ. ಆದರೆ ಈಗಿರುವ ಆಹಾರದ ಕೊರತೆಯನ್ನು ಯಾವ ರೀತಿ ನಿವಾರಿಸಬೇಕು ಎಂಬ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿಲ್ಲ. ಕೇವಲ ಕಡಲೆ ಬೇಳೆಯನ್ನು ತರಿಸುವುದರಿಂದ ಮಾತ್ರ ನಮ್ಮ ರಾಜ್ಯದ ಆಹಾರದ ಕೊರತೆ ತಪ್ಪುವುದಿಲ್ಲವೆಂದು ನನಗನ್ನಿಸುತ್ತದೆ.

ಇನ್ನು ಉದ್ಯಮಗಳ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡುತ್ತಾ ಈ ರೀತಿ ಹೇಳಿದ್ದಾರೆ: ''ರಾಜ್ಯದಲ್ಲಿ ಉದ್ಯಮಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ, ಉದ್ಯಮ ವ್ಯವಸ್ಥಾಪಕರಿಗೆ ನ್ಯಾಯ ವಾದ ಬೆಲೆಗೆ ವಿದ್ಯುಚ್ಛಕ್ತಿ ಮತ್ತು ನೀರಿನ ಸರಬರಾಜು, ಪ್ರಾರಂಭಾವಸ್ಥೆಯಲ್ಲಿ ಆಕ್ಟ್ರಾಯಿ ಸುಂಕ ದಿಂದಲೂ ಮಾರಾಟ ತೆರಿಗೆಯಿಂದಲೂ ವಿನಾಯಿತಿ ಮತ್ತು ಆಯಾ ಉದ್ಯಮಕ್ಕೆ ಬೇಕಾಗಬಹು ದಾದಂತಹ ಬೇರೆ ಬಗೆಯ ಸಹಾಯ ಇವೇ ಮೊದಲಾದ ಹಲವಾರು ಸೌಲಭ್ಯಗಳನ್ನು ಮತ್ತು ಉತ್ತೇಜನಗಳನ್ನು ಸರ್ಕಾರದವರು ನೀಡಿದ್ದಾರೆ''. ಈ ಉದ್ಯಮಗಳ ಬಗ್ಗೆ ನಾವು ನೋಡು ತ್ತಿದ್ದೇವೆ, ನಮ್ಮ ಸರ್ಕಾರದವರು ಒಂದು ಧೋರಣೆಯನ್ನು ಅನುಸರಿಸುತ್ತಿದ್ದಾರೆ, ಏನೆಂದರೆ ಒಳ್ಳೆಯ ಉದ್ಯಮಗಳನ್ನು ಕೆಡಿಸಿ, ಕೆಟ್ಟದ್ದನ್ನು ಮುಂದುವರಿಸಿಕೊಂಡು ಹೋಗುವುದು. 30 ದೊಡ್ಡ ದೊಡ್ಡ ಉದ್ಯಮಗಳು ಕಚ್ಚಾಮಾಲು ಇಲ್ಲದೆ ಮತ್ತು ಇತರ ಸಾಮಗ್ರಿಗಳು ಸಿಕ್ಕದೆ ಇವತ್ತಿನ ದಿವಸ ಬಂದ್ ಆಗಿವೆ. ನಮ್ಮ ರಾಜ್ಯದಲ್ಲಿ ಉದ್ಯಮಗಳನ್ನು ಸ್ಥಾಪಿಸಲು ಬೇಕಾಗುವ ವಿದ್ಯುಚ್ಛಕ್ತಿ, ನೀರು ಮುಂತಾದ ಅನುಕೂಲಗಳು ಬೇಕಾದಷ್ಟಿವೆ. ಹೊಸ ಉದ್ಯಮಗಳನ್ನು ಪ್ರಾರಂಭ ಮಾಡು ವವರಿಗೆ ಸರ್ಕಾರದವರು ಎಲ್ಲಾ ರೀತಿಯ ರಿಯಾಯಿತಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ, ಇದುವರೆಗೆ ಎಷ್ಟು ಉದ್ಯಮಗಳಿಗೆ ರಿಯಾಯಿತಿಗಳನ್ನು ಕೊಟ್ಟಿದ್ದಾರೆಂದು ಕೇಳುತ್ತೇನೆ. ಈಗಾಗಲೆ 30 ಉದ್ಯಮಗಳು ಬಂದ್ ಆಗಿರುವುದರಿಂದ ಸುಮಾರು 6 ಸಾವಿರ ಕೂಲಿಗಾರರಿಗೆ ಕೆಲಸವಿಲ್ಲ ದಂತಾಗಿದೆ. ಇಂತಹವರಿಗೆ ಸರ್ಕಾರದವರು ಬೇರೆ ಯಾವ ಉದ್ಯೋಗವನ್ನು ಒದಗಿಸಿದ್ದಾರೆಂದು ಕೇಳುತ್ತಿದ್ದೇನೆ. ನಿರುದ್ಯೋಗ ಕಾರ್ಮಿಕರಿಗೆ ಸರ್ಕಾರದವರು ಬೇರೆ ರೀತಿಯ ಏರ್ಪಾಡುಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹತ್ತಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನಮ್ಮ ರಾಜ್ಯದಲ್ಲಿ ಖಾಸಗಿಯವರು ಸ್ಥಾಪನೆ ಮಾಡಿರುವ 14 ರೂರಲ್ ಫ್ಲೋರ್ ಮಿಲ್‌ಗಳು ಕೇಂದ್ರ ಸರ್ಕಾರದವರು ಲೈಸನ್ಸ್ ಕೊಡದಿರುವುದರಿಂದ ಕೆಲಸ ಮಾಡದೆ ಹಾಗೆಯೇ ಉಳಿದಿವೆ. ಈ ಮಿಲ್ ಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಟ್ಟರೆ ಸುಮಾರು 5 ಸಾವಿರ ಕಾರ್ಮಿಕರಿಗೆ ಕೆಲಸ ಸಿಗುವ ಅವಕಾಶವಿದೆ. ಈ ವಿಚಾರವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಹೆಚ್ಚು ಹೆಚ್ಚು ಉದ್ಯಮಗಳು ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗುವುದಕ್ಕೆ ಅವಕಾಶ ಕೊಟ್ಟರೆ ನಂತರ ನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸರ್ಕಾರದವರು ರೂರಲ್ ಫ್ಲೋರ್ ಮಿಲ್‌ಗಳಿಗೆ ಕೇಂದ್ರ ಸರ್ಕಾರದಿಂದ ಆದಷ್ಟು ಜಾಗ್ರತೆ ಒತ್ತಾಯ ಮಾಡಿ ಲೈಸನ್ಸ್ ಕೊಡಿಸಿಕೊಡಬೇಕು. ಇದರಿಂದ 5-6 ಸಾವಿರ ಕೂಲಿಗಾರರಿಗೆ ಕೆಲಸ ಸಿಗುವುದಕ್ಕೆ ಅವಕಾಶವಾಗುತ್ತದೆ.

ಇನ್ನು ರಸ್ತೆಸಾರಿಗೆಯ ಬಗ್ಗೆ ಹೇಳಬೇಕೆಂದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಹತ್ತಾರು ವರ್ಷಗಳು ಕಳೆದರೂ ಸಹ ಬಸ್ ರಾಷ್ಟ್ರೀಕರಣವಾಗಿಲ್ಲ. ನಮ್ಮ ಭಾಗದಲ್ಲಿ ಇನ್ನೂ ಕೂಡ ರಾಷ್ಟ್ರೀ ಕರಣವಾಗದಿರುವುದು ಆಶ್ಚರ್ಯದ ಸಂಗತಿಯೆಂದು ಹೇಳಬಹುದು. ನಮ್ಮ ಭಾಗದಲ್ಲಿ ರಾಷ್ಟ್ರೀಕರಣ ವಾಗಬೇಕಾದರೆ ಇನ್ನೂ ಎಷ್ಟು ವರ್ಷಗಳಾಗುತ್ತದೆ ಎಂಬುದನ್ನು ರಾಜ್ಯಪಾಲರು ತಮ್ಮ ಭಾಷಣ ದಲ್ಲಿ ತಿಳಿಸಿಲ್ಲ. ರಾಜ್ಯದಲ್ಲಿ ಪ್ರವಾಸಿ ಸಂಚಾರವನ್ನು ಹೆಚ್ಚಿಸುವ ಸಲುವಾಗಿ ಪ್ರವಾಸಿ ಟ್ಯಾಕ್ಸಿ ವ್ಯವಸ್ಥೆಗಾಗಿ ವಿದೇಶಗಳಿಂದ ನಾಲ್ಕು ಲಕ್ಸುರಿ ಪ್ರವಾಸಿ ಟ್ಯಾಕ್ಸಿಗಳನ್ನು ತರಿಸಿ ಓಡಾಟವನ್ನು ಪ್ರಾರಂಭಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ ಇವತ್ತು ಪ್ರತಿ ಗ್ರಾಮ ಗ್ರಾಮಕ್ಕೂ ಸಂಚಾರ ವ್ಯವಸ್ಥೆ ಬೇಕಾಗಿದೆ. ಗ್ರಾಮಾಂತರ ಜನರಿಗೆ ಮೊದಲು ಬಸ್ ಸೌಕರ್ಯವನ್ನು ಒದಗಿಸಬೇಕಾಗಿದೆ.

(ಶ್ರೀ ಸಿದ್ದಯ್ಯ ಕಾಶೀಮಠ)

ಇಡೀ ರಾಜ್ಯಾದ್ಯಂತ ಬಸ್ ರಾಷ್ಟ್ರೀಕರಣಗೊಳಿಸಬೇಕಾದರೆ ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತದೆಂದು ಕೇಳುತ್ತೇನೆ. ರಾಷ್ಟ್ರೀಕರಣವನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ಆರೋಗ್ಯದ ವಿಚಾರವಾಗಿ ತೆಗೆದುಕೊಂಡರೆ ಕುಟುಂಬ ಯೋಜನೆ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರು ಯಾವ ರೀತಿ ಔಷಧವನ್ನು ಉಪಯೋಗಿಸಬೇಕು ಎಂಬ ಬಗ್ಗೆ ವಿವರವಾಗಿ ತಿಳಿಸಿಲ್ಲ. ಗ್ರಾಮಾಂತರದ ಜನರಿಗೆ ಆರೋಗ್ಯದ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಕೊಡಲು ತಕ್ಕ ವ್ಯವಸ್ಥೆ ಮಾಡದಿದ್ದರೆ ತಪ್ಪಾದೀತು ಎಂದು ಹೇಳಬೇಕಾಗುತ್ತದೆ.

ಇನ್ನು ಸಮಾಜ ಕಲ್ಯಾಣದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈಗಾಗಲೆ ಎರಡು ಸರ್ಟಿಫೈಡ್ ಸ್ಕೂಲ್‌ಗಳನ್ನು ಸ್ಥಾಪಿಸಲಾಗಿದೆಯೆಂದು, ಪ್ರತಿಯೊಂದು ಜಿಲ್ಲೆಗೂ ರಿಮ್ಯಾಂಡ್ ಹೋಮ್ ಸಂಸ್ಥೆ ಬರುವಂತೆ ರಾಜ್ಯದ ಮಕ್ಕಳ ಅಧಿನಿಯಮದ ಮೇರೆಗೆ ಇನ್ನೂ ಐದು ರಿಮ್ಯಾಂಡ್ ಹೋಮುಗಳನ್ನು ಸ್ಥಾಪಿಸುವ ಉದ್ದೇಶವಿದೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಕೆಲವು ಕಡೆಗಳಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ನಡೆಯತಕ್ಕ ರಿಮ್ಯಾಂಡ್ ಹೋಮ್‌ಗಳಿವೆ. ಆದಷ್ಟು ಜಾಗ್ರತೆ ಎಲ್ಲಾ ಜಿಲ್ಲೆಗಳಲ್ಲೂ ರಿಮ್ಯಾಂಡ್ ಹೋಮ್ ಸಂಸ್ಥೆ ಬರುವಂತೆ ಮಾಡಿ ಅಲ್ಲಿರತಕ್ಕ ಮಕ್ಕಳಿಗೆ ಸರಿಯಾದ ವ್ಯವಸ್ಥೆ ಮಾಡಲಿಕ್ಕೆ ಸರ್ಕಾರದವರು ನಿಗಾವಹಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಋತುಮಾನಸ್ಥಿತಿ ಮತ್ತು ಪರಿಹಾರ ಕಾರ್ಯಗಳ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಯಾವ ಯಾವ ಜಿಲ್ಲೆಗಳಲ್ಲಿ ಸಾಕಷ್ಟು ಮಳೆ ಬರದೆ ಬೆಳೆ ಹೋಯಿತೋ ಅಂತಹ ಕಡೆಗಳಲ್ಲಿ ಅಭಾವ ಪರಿಹಾರ ಕಾರ್ಯಗಳನ್ನು ತಾಲ್ಲೂಕು ಮಟ್ಟದಲ್ಲಿ ತೆಗೆದುಕೊಂಡು ಜನರಿಗೆ ಉದ್ಯೋಗ ಒದಗಿಸುವ ಸಲುವಾಗಿ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಹಣವನ್ನು ಒದಗಿಸಲಾಗಿದೆಯೆಂದು ತಿಳಿಸಿದ್ದಾರೆ. ಇದು ಸಂತೋಷದ ವಿಚಾರ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

9-30 A.M.

ಶ್ರೀ ಸಿ. ಎಂ. ಚುರ್ಚಿಹಾಳಮಠ (ಮುಂಡರಗಿ).—ಸನ್ಮಾನ್ಯ ಅಧ್ಯಕ್ಷರೇ, ಫೆಬ್ರುವರಿ 19ನೇ ದಿನಾಂಕ ಈ ವಿಧಾನ ಸಭೆಯಲ್ಲಿ ರಾಜ್ಯಪಾಲರವರು ಮಾಡಿದ ಭಾಷಣವನ್ನು ನಾನು ಸ್ವಾಗತಿಸುತ್ತೇನೆ. ಈ ಭಾಷಣದೊಳಗಿನ ಅನೇಕ ವಿಷಯಗಳ ಬಗ್ಗೆ ಸ್ವಲ್ಪ ವಿಚಾರ ಮಾಡುವುದು ಅವಶ್ಯಕ ಎಂದು ಕಾಣುತ್ತದೆ. ಮೊದಲನೆಯದಾಗಿ ವಿದ್ಯಾಭ್ಯಾಸ ಕ್ರಮದ ಬಗ್ಗೆ ಹೇಳುವುದಾದರೆ ಅದು ಸಮಾಧಾನಕರವಾಗಿ ಕೆಲಸ ಮಾಡಿದೆ. ಆದರೆ ವಿದ್ಯಾರ್ಥಿಗಳ ಸಮಸ್ಯೆ ಬಂದಾಗ್ಗೆ ಅನೇಕ ಅನಾಹುತಗಳು ಜರುಗಿದ್ದು ಎಲ್ಲರಿಗೂ ಗೊತ್ತುಂಟು. ವಿದ್ಯಾರ್ಥಿಗಳು ಯಾವುದಾದರೂ ಒಂದು ಸಮಸ್ಯೆ ತಂದೊಡ್ಡಬೇಕಾದರೆ ಸರಕಾರ ಮತ್ತು ವಿದ್ಯಾರ್ಥಿಗಳು ತಳೆದ ಧೋರಣೆ ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡಿದಾಗ್ಗೆ ಸರಕಾರ ಯಾವುದಾದರೂ ಒಂದು ಯೋಜನೆ ಮಾಡಬೇಕೆಂದು ಉದ್ದೇಶಪಟ್ಟರೂ ಅದು ಕಾರ್ಯಗತವಾಗುವಾಗ ಬಹಳ ವಿಳಂಬವಾಗಿ ವಿದ್ಯಾರ್ಥಿಗಳಿಗೆ ಅನೇಕ ವಿಷಯ ವಿಚಾರ ಮಾಡಲಿಕ್ಕೆ ಅಸ್ಪದ ಕೊಡುತ್ತದೆ ಎಂಬುದು ಕಂಡು ಬರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ಆಯುರ್ವೇದ ಕಾಲೇಜಿನ ವಿದಾರ್ಥಿಗಳ ಸಂಪು ಕಳೆದ 15 ದಿವಸಗಳಿಂದ ನಡೆಯುತ್ತಿದೆ, ಉಪವಾಸ ಸತ್ಯಾಗ್ರಹ ನಡೆದಿದೆ. ಅದನ್ನು ನಾವು ಹೋಗಿ ನೋಡಿದ್ದೇವೆ. 1964ನೇ ಇಸವಿಯಿಂದ ಈ ವಿಷಯದ ಬಗ್ಗೆ ಪ್ರತಿ ವರ್ಷ ಸಂಪು ನಡೆದಿದೆ. ಸರಕಾರ ಯಾವುದಾದರೂ ಒಂದು ನಿಶ್ಚಿತ ಧೋರಣೆ ಅನುಸರಿಸಿಲ್ಲ ಎನ್ನುವುದು ಇಂದಿನ ಸತ್ಯಾಗ್ರಹದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ವಿದ್ಯಾರ್ಥಿಗಳು ಅನೇಕ ವಿಷಯಗಳನ್ನು ಸರಕಾರದ ಮುಂದೆ ನಾಲ್ಕು ವರ್ಷದಿಂದ ಇರಿಸುತ್ತಾ ಬಂದಿದ್ದಾರೆ. ಸಾಧ್ಯವಿದ್ದಷ್ಟು ಸರಕಾರ ಕಾರ್ಯಗತ ಮಾಡಲು ಪ್ರಯತ್ನ ಮಾಡುತ್ತದೆ. 1964ನೇ ಇಸವಿಯಲ್ಲಿ ಆಯುರ್ವೇದ ಕಾಲೇಜಕ್ಕೆ ಪ್ರವೇಶ ಕೊಡುವಾಗ ಐದು ವರ್ಷದ ಒಂದು ಡಿಗ್ರಿ ಕೊಡುತ್ತೇವೆ, ಎಂದು ಆದೇಶ ಕೊಟ್ಟ ಮೂಲಕ ವಿದ್ಯಾರ್ಥಿಗಳು ಕಾಲೇಜಕ್ಕೆ ಸೇರಿದರು. ಮುಂದೆ ಒಂದು ವರ್ಷದಲ್ಲಿಯೇ ಐದು ವರ್ಷದ ಡಿಗ್ರಿ ಕೋರ್ಸು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ನಾಲ್ಕು ವರ್ಷದ ಡಿಪ್ಲೋಮಾ ಕೋರ್ಸ್ ಪ್ರಕಾರ ಅಭ್ಯಾಸ ನಡೆಸುತ್ತಾ ಬಂದರು. ನಮಗೆ ಡಿಪ್ಲೋಮಾ ಕೋರ್ಸು ಬೇಡ, ಡಿಗ್ರೀ ಕೋರ್ಸಿಗೆ ನಾವು ಸೇರಿದ್ದೇವೆ, ಅದಕ್ಕೆ ಅನುಗುಣವಾಗಿ ಕರಿಕ್ಯುಲಂ ಸಿದ್ಧಪಡಿಸಿ ಕೊಡಿ ಎಂದು 1964ನೇ ಇಸವಿಯಲ್ಲಿ

ಸೇರಿದ ವಿದ್ಯಾರ್ಥಿಗಳು ಹೋರಾಟ ಪ್ರಾರಂಭಿಸಿ ಇದುವರೆಗೆ ನಡೆಸಿದ್ದಾರೆ. ಸರಕಾರ ಡಿಗ್ರೀ ಕೊಡುತ್ತೇವೆ ಕೊಡುತ್ತೇವೆ ಎಂದು ಹೇಳುತ್ತಾ ಬಂದಿದ್ದಾರೆ. ಯಾವ ಡಿಗ್ರಿ ಕೊಡುತ್ತಾರೆ ಎಂಬುದನ್ನು ಸರಕಾರ ಸ್ಪಷ್ಟವಾಗಿ ಹೇಳದೇ ಇದ್ದ ಮೂಲಕ ಸಂಪು ಮುಂದುವರಿದಿದೆ. ಸರಕಾರದವರು ಯಾವ ಡಿಗ್ರಿ ಎಂದು ಕೊಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸಿದರೆ ವಿದ್ಯಾರ್ಥಿಗಳಿಗೆ ಸಮಾಧಾನವಾಗಬಹುದು ಎಂಬ ಈ ಸಂದರ್ಭದಲ್ಲಿ ನಾನು ಸೂಚಿಸಬಯಸುತ್ತೇನೆ. ಇಂದು ಅನೇಕ ಸಮಸ್ಯೆಗಳು ರಾಜ್ಯದಲ್ಲಿ ತಲೆ ಎತ್ತಿರುವುದನ್ನು ನೋಡಿದರೆ ಸರಕಾರ ಯಾವುದಾದರೂ ಒಂದು ಸಮಸ್ಯೆಯನ್ನು ಬಿಡಿಸಬೇಕಾದರೆ ಜನತೆಯಿಂದ ವಿದ್ಯಾರ್ಥಿಗಳಿಂದ ಹೇಳಿಸಿಕೊಂಡ ಮೇಲೆ ಬಿಡಿಸಬೇಕು ಎನ್ನುವ ಮಟ್ಟಕ್ಕೆ ಬಂದಿದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಸರಕಾರ ಒಂದು ಧೋರಣೆಯನ್ನು ಅನುಸರಿಸಿದ ಮೇಲೆ ಸಂಬಂಧಪಟ್ಟವರಿಂದ ಹೇಳಿಸಿಕೊಳ್ಳುವುದಕ್ಕಿಂತ ಪೂರ್ವದಲ್ಲಿಯೇ ಅದನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಇಲ್ಲಿ ಸೂಚಿಸಬೇಕಾಗಿದೆ. ಆಯುರ್ವೇದ ವಿದ್ಯಾರ್ಥಿಗಳ ವಿಷಯ ಒಂದೇ ಅಲ್ಲ. ಇಂಥ ಅನೇಕ ಸಮಸ್ಯೆಗಳಿವೆ. ಅಗ್ರಿಕಲ್ಚರಲ್ ಕಾಲೇಜ ಆಡಳಿತದ ಬಗ್ಗೆ, ರೆವೆನ್ಯೂ ಅಧಿಕಾರಿಗಳ ಬಗ್ಗೆ, ಪೋಲೀಸ್ ಅಧಿಕಾರಿಗಳ ಬಗ್ಗೆ ಅನೇಕ ಕ್ಷೇತ್ರಗಳಲ್ಲಿ ಇಂಥ ಸಮಸ್ಯೆಗಳು ಎಷ್ಟೋ ವರ್ಷಗಳಿಂದ ಮುಂದುವರಿಯುತ್ತಿವೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಋತುಮಾನ ಸ್ಥಿತಿ ಮತ್ತು ಪರಿಹಾರ ಕಾರ್ಯಗಳು ಆಹಾರ ಮತ್ತು ನಿತ್ಯೋಪಯೋಗಿ ಸರಬರಾಯಿಗಳು, ಕಾರ್ಮಿಕ ಮತ್ತು ತರಬೇತಿ, ರಸ್ತೆ ಸಾರಿಗೆ, ವಾರ್ತಾ ಮತ್ತು ಪ್ರವಾಸೋದ್ಯಮ, ವಿದ್ಯಾಭ್ಯಾಸ, ಕುಟುಂಬ ಯೋಜನಾ ಕಾರ್ಯಕ್ರಮ, ಔಷಧ ನಿಯಂತ್ರಣ, ಗ್ರಾಮಾಂತರ ಮತ್ತು ಪೌರ ಪ್ರದೇಶದ ನೀರು ಸರಬರಾಜು ಯೋಜನೆ ಮುಂತಾದ ಅನೇಕ ವಿಷಯಗಳ ಬಗ್ಗೆ ಅವರು ಭಾಷಣದಲ್ಲ ಹೇಳಿದ್ದಾರೆ. ಈ ವಿಷಯಗಳ ಬಗ್ಗೆ ಅನೇಕ ಮಾನ್ಯ ಸದಸ್ಯರು ಈಗಾಗಲೇ ಕೂಲಂಕಷವಾಗಿ ಮಾತನಾಡಿದ್ದಾರೆ. ಆದರೆ ಒಂದು ವಿಷಯ ನಾನು ಹೇಳಬೇಕಾಗಿದೆ. ಗ್ರಾಮಾಂತರ ನೀರು ಸರಬರಾಜು ಯೋಜನೆ ಹಾಗು ಇನ್ನೂ ಅನೇಕ ಯೋಜನೆಗಳು ಇನ್ನೂ ಕಾರ್ಯಗತವಾಗಬೇಕಾಗಿವೆ. ಕೆಲವು ಕಡೆಯಲ್ಲಿ ಬಾವಿಗಳನ್ನು ತೆಗಿಸಿದ್ದಾಗಿದೆ ಮತ್ತು ನೀರು ಒದಗಿಸಿದ್ದಾರೆ. ಆದರೆ ಕೆಲವು ಪ್ರದೇಶದಲ್ಲಿ ಬಾವಿ ತೆಗೆದಿದ್ದಾರೆ ಆದರೆ ನೀರು ಇಲ್ಲ. ಅಂಥ ಪ್ರದೇಶದಲ್ಲಿ ದೂರದಿಂದ ನೀರು ತಂದು ಸರಬರಾಜು ಮಾಡುತ್ತಾರೆ. ಈ ಪ್ರಶ್ನೆ ಅನೇಕ ಕಡೆ ಇದೆ. ನಮ್ಮ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಿವೆ. ಹಳ್ಳಿಗುಡಿ, ಹಳ್ಳಿಕೇರಿ, ಹರ್ಲಾಪುರ, ವೆಂಕಟಾಪುರ ಮೊದಲಾದ ಗ್ರಾಮಗಳಲ್ಲಿ ನೀರಿನ ಕೊರತೆ ಇದೆ. ದೂರದಿಂದ ನೀರು ಟ್ರಕ್ಕಿನ ಮುಖಾಂತರ ತಂದು ಪ್ರತಿಯೊಬ್ಬ ಮನುಷ್ಯನಿಗೆ ಎರಡು ಗ್ಯಾಲನ್ನಿನಂತೆ ನೀರು ಸಪ್ಲೈ ಮಾಡುತ್ತಾರೆ. ಈ ರೀತಿ ನೀರು ಸಪ್ಲೈ ಮಾಡುವುದರಲ್ಲಿ ಅನೇಕ ತೊಂದರೆಗಳಿವೆ. ಸ್ಕೇರ್‌ಸಿಟಿ ಯೋಜನೆ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟದ್ದರಿಂದ ಅವರು ದುಡ್ಡು ಒದಗಿಸುತ್ತಾರೆ, ಪಿ. ಡಬ್ಲ್ಯೂ. ಡಿ. ಯವರು ಟ್ರಕ್ ಕೊಡುತ್ತಾರೆ. ಸಣ್ಣಪುಟ್ಟ ಕ್ಷುಲ್ಲಕ ಕಾರಣದಿಂದ ಟ್ರಕ್ ಪಂಕ್ಚರ್ ಆಗಿ ಕೆಟ್ಟು ಹೋದರೆ ಅದನ್ನು ತಹಶೀಲದಾರರಿಗೆ ತಿಳಿಸಬೇಕು. ಇದಕ್ಕಾಗಿ ಆ ಜಾಗದಿಂದ ಹತ್ತಿಪ್ಪತ್ತು ಮೈಲು ದೂರ ಹೋಗಬೇಕಾಗುತ್ತದೆ. ಒಂದು ರೂಪಾಯಿ ಖರ್ಚಿನ ರಿಪೇರಿ ಕೆಲಸಕ್ಕೆ ಹತ್ತೆಂಟು ರೂಪಾಯಿ ಡ್ರೈವರ್ ಖರ್ಚು ಮಾಡಬೇಕಾಗುತ್ತದೆ. ಗಾಡಿ ರಿಪೇರಿಯಾಗುವುದಕ್ಕೆ ಒಂದೆರಡು ದಿವಸ ತಡವಾಗುತ್ತದೆ. ಆದುದರಿಂದ ಈ ರೀತಿ ಟ್ರಕ್ಕಿನಿಂದ ನೀರು ಸರಬರಾಜು ಮಾಡುವುದರಲ್ಲಿ ಬಹಳ ತೊಂದರೆ ಇರುವುದರಿಂದ ಇಂಥ ಗ್ರಾಮಗಳಲ್ಲಿ ತೀವ್ರವಾಗಿ ನೀರಿನ ಯೋಜನೆ ಮಾಡಬೇಕು ಎಂಬ ಸೂಚನೆಯನ್ನು ಈ ಸಂದರ್ಭದಲ್ಲಿ ಮಾಡಬೇಕಾಗುತ್ತದೆ.

ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಅನೇಕ ಸೌಲಭ್ಯಗಳನ್ನು ತೀವ್ರಗತಿಯಲ್ಲಿ ರೈತರಿಗೆ ಒದಗಿಸಬೇಕು ಎಂದಿದೆ. ಆದರೆ ಎಲ್ಲ ಕಡೆ ಅದು ಸಾಧ್ಯವಾಗಿಲ್ಲ ಎಂದು ಅನಿಸುತ್ತದೆ. ಬ್ಯಾಂಕ್‌ನವರು ಸಾಲ ಕೊಡುವಾಗ್ಗೆ ಲ್ಯಾಂಡ್ ರೆವಿನ್ಯೂ ಮೇಲೆ ಸಾಲ ಕೊಡುತ್ತಾರೆ. ಸಾಮಾನ್ಯವಾಗಿ ನಮ್ಮ ಪ್ರದೇಶದಲ್ಲಿ ಮಸಾರಿ ಜಮೀನು ಇರುವುದರಿಂದ ಒಂದು ಎಕರೆಗೆ ನಾಲ್ಕಾಣೆ ಎಂಟಾಣೆ ಕಂದಾಯ ಇದೆ. ಈ ಭೂಮಿಯಲ್ಲ ಬೆಳೆ ಸರಿಯಾಗಿ ಬರುವುದಿಲ್ಲ. ಬಾವಿ ತೆಗೆಸಿ ನೀರಾವರಿ ಯೋಜನೆ ಮಾಡಿದರೆ ಫಲವತ್ತಾಗಿ ಬೆಳೆಯುತ್ತದೆ. ಆದುದರಿಂದ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ನಮಗೆ ಸರಿಯಾಗಿ ಸಾಲ ಸಿಕ್ಕುತ್ತಾ ಇಲ್ಲ. ಒಬ್ಬ ರೈತನಿಗೆ ಹತ್ತು ಎಕರೆ ಜಮೀನು ಇದ್ದರೂ ಕೂಡ ಲ್ಯಾಂಡ್ ರೆವಿನ್ಯೂ ಸುಮಾರು ಎರಡು ರೂಪಾಯಿ ಇರುವುದರಿಂದ ಒಂದು ಸಾವಿರಕ್ಕಿಂತ ಹೆಚ್ಚಿಗೆ ಸಾಲ ಸಿಕ್ಕುವುದಿಲ್ಲ. ನಮ್ಮ ತಾಲೂಕಿನಲ್ಲಿ ಹೆಚ್ಚು ಕಡಿಮೆ ಇರತಕ್ಕಂಥ ಜಮೀನು ಇದೆ. ಸಾಲ ಪಡೆದು ನೀರಾವರಿ ಮಾಡಲು ಅನುಕೂಲ ದೊರೆಯುವುದಿಲ್ಲ. ಆದುದರಿಂದ ಸರಕಾರ ತಗಾಯಿ ಜಮೀನು ವಿಚಾರದಲ್ಲಿ ಜಮೀನಿನ್ನ ಕಿಮ್ಮತ್ತಿನ ಮೇಲೆ ಸಾಲ ಕೊಡತಕ್ಕಂಥ ಯೋಜನೆ ಕಾರ್ಯಗತ ಮಾಡಿದರೆ ಸಾಲ ಪಡೆದು ಆದರಿಂದ ಉಪಯೋಗವಾದೀತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ)

ಇನ್ನೂ ವ್ಯವಸಾಯ ವಿಷಯವಾಗಿ, ಮೀನುಗಾರಿಕೆ, ಅರಣ್ಯ, ನೀರಾವರಿ, ವಿದ್ಯುಚ್ಛಕ್ತಿ ಸಂಪರ್ಕ ಸಾಧನ, ಸಮಾಜ ಕಲ್ಯಾಣ ಇಂಥ ಅನೇಕ ಯೋಜನೆಗಳು ಸಾಕಷ್ಟು ಪ್ರಗತಿಯಲ್ಲಿ ನಡೆದಿವೆ. ಇದರಿಂದ ಜನತೆಗೆ ಸಾಕಷ್ಟು ರೀತಿಯಿಂದ ಉಪಯೋಗವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮತ್ತೊಮ್ಮೆ ರಾಜ್ಯಪಾಲರವರ ಭಾಷಣವನ್ನು ಸ್ವಾಗತಿಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಅಭಿನಂದನಾ ಗೊತ್ತುವಳಿಯನ್ನು ವಿರೋಧಿಸಿ ಮಾತನಾಡಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ರಾಜ್ಯಪಾಲರ ಭಾಷಣ ಹೋದಸಲದ ರಾಜ್ಯಪಾಲರ ಭಾಷಣದ ಗಿಳಿಪಾಠವಾಗಿದೆ. ಒಂದು ಅಂತರವೆಂದರೆ, ಹೋದ ಸಲ ರಾಜ್ಯಪಾಲರಾಗಿ ಶ್ರೀಮಾನ್ ಗಿರಿ ಅವರು ಭಾಷಣ ಮಾಡಿದರು, ಈ ವರ್ಷ ಪಾಠಕ್ ಅವರು ಭಾಷಣ ಮಾಡಿದ್ದಾರೆ. ಹೋದ ವರ್ಷ 25 ಪುಟಗಳಿದ್ದ ಭಾಷಣ ಈ ಸಲ 29 ಪುಟವಿದೆ. ಹೋದಸಲದ ಭಾಷಣದ ಪುಸ್ತಕದ ಹೊದಿಕೆಯು ಬಣ್ಣ ಗಿಳಿ ಹಸುರು ಇತ್ತು ಈ ಸಲ ತಿಳಿ ನೀಲಿ ಬಣ್ಣವಿದೆ. ಇದರ ಹೊರತು ಇನ್ನು ಯಾವ ವಿಧದಲ್ಲಿಯೂ ಯಾವುದೇ ವ್ಯತ್ಯಾಸವಿದೆ ಎಂದು ಕಂಡುಬರುವುದಿಲ್ಲ.

ನಾವು ಈಗ ಮೂರನೇ ಪಂಚವಾರ್ಷಿಕ ಯೋಜನೆಯ ಕೊನೆ ವರ್ಷದಲ್ಲಿದ್ದೇವೆ. ಈ ಸಲ ಈ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಇಟ್ಟುಕೊಂಡಂಥ ಗುರಿ ಏನು, ಅವನ್ನು ಯಾವ ರೀತಿ ಕೈಗೂಡಿಸಿದ್ದಾರೆ, ಆಗಬೇಕಾದ ಕೆಲಸಗಳು ಯಾವುವು ಆಗಿವೆ, ಇನ್ನೂ ಯಾವುವು ಆಗ ಬೇಕಾಗಿವೆ, ಎನ್ನುವ ಸ್ಪಷ್ಟ ಚಿತ್ರವನ್ನು ನಾವು ಬಯಸಿದ್ದೆವು. ಪ್ಲಾನಿಂಗ್ ವಿಚಾರದಲ್ಲಿ ಹೋದ ಸಲವೂ ಒಂದು ಪ್ಯಾರಾ ಇತ್ತು, ಈ ಸಲವೂ ಇದೆ. ಐದು ವರ್ಷಗಳಲ್ಲಿ ಅಥವಾ ಹೋದ ವರ್ಷದಲ್ಲಿ ಯಾವ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೆವು, ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಿದ್ದೇವೆ, ಸಾಧಿಸಲಿಕ್ಕೆ ಅಗಡೆ ಇದ್ದರೆ ಏಕೆ ಆಗಲಿಲ್ಲ ಎನ್ನುವ ಧೋರಣೆ ಈ ಭಾಷಣದಲ್ಲಿ ಕಂಡುಬಂದಿಲ್ಲ, ಪ್ಲಾನಿಂಗ್ ಎಂದ ಕೂಡಲೇ ಔದ್ಯೋಗಿಕ ಬೆಳವಣಿಗೆಯ ವಿಚಾರ ಜ್ಞಾಪಕಕ್ಕೆ ಬರುತ್ತದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅನೇಕ ಕೈಗಾರಿಕಾ ಉದ್ಯಮಗಳು ನಮ್ಮ ರಾಜ್ಯದ ಉದ್ದಿಮೆದಾರರಿಗೆ ಕೊಡಲ್ಪಟ್ಟವು. ಆದರೆ ಮೂರನೆ ಯೋಜನೆಯಲ್ಲಿ ಎಷ್ಟು ಲೈಸೆನ್ಸ್‌ಗಳು ನಮ್ಮ ರಾಜ್ಯದಲ್ಲಿ ಕೊಡಲ್ಪಟ್ಟವೋ ಅವುಗಳಲ್ಲಿ ಯಾವುವು ಅಮಲಿನಲ್ಲಿ ಬಂದಿವೆ, ಯಾವ ಉದ್ದಿಮೆ ದಾರರು ಆಚರಣೆಗೆ ತಂದಿದ್ದಾರೆ, ಎನ್ನುವ ವಿಚಾರಗಳನ್ನು ಭಾಷಣದಲ್ಲಿ ಹೇಳಿಲ್ಲ. ಮುಖ್ಯವಾಗಿ ಕರ್ನಾಟಕದಲ್ಲಿ ಸುಮಾರು 10 ಜಿಲ್ಲೆಗಳಲ್ಲಿ ಉತ್ತಮವಾದ ಹತ್ತಿ ಬೆಳೆಯುತ್ತಿದೆ. ಈ ಸಂದರ್ಭದಲ್ಲಿ ಬಟ್ಟೆ ಗಿರಣಿ ಬಗ್ಗೆ ಒಂದು ಮಾತು ಹೇಳುವುದು ಅತ್ಯಂತ ಅವಶ್ಯವಿದೆ. ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಒಂದೇ ಒಂದು ಬಟ್ಟೆ ಗಿರಣಿ ಇದೆ. ಅದೂ ಮುಚ್ಚುವ ಸ್ಥಿತಿಯಲ್ಲಿದೆ. ಹೈದರಾಬಾದ್ ಕರ್ನಾಟಕದಲ್ಲಿರುವ ಗಿರಣಿಯೂ ಮುಚ್ಚುವ ಸ್ಥಿತಿಯಲ್ಲಿದೆ. ಮೂರನೆಯ ಯೋಜನೆಯಲ್ಲಿ 14 ಬಟ್ಟೆ ಗಿರಣಿಗಳಿಗೆ ಲೈಸೆನ್ಸ್ ಕೊಡಲ್ಪಟ್ಟಿತು. ಇದರಲ್ಲಿ ಕೋ-ಅಪರೇಟಿವ್ ಸೆಕ್ಟಾರ್ ಪ್ರೈವೇಟ್ ಸೆಕ್ಟಾರ್ ಕೂಡಿ ಗಿರಣಿ ಸ್ಥಾಪನೆ ಮಾಡಬೇಕಾಗಿದೆ. ಕೋ-ಅಪರೇಟಿವ್ ಸೆಕ್ಟಾರಿನಲ್ಲಿ ಯಾವುದೇ ಗಿರಣಿಯ ಕೆಲಸವೂ ಪ್ರಾರಂಭವಾಗಿಲ್ಲ. ಎಂದು ವಿಷಾದದಿಂದ ಹೇಳ ಬೇಕಾಗಿದೆ. ನನಗೆ ತಿಳಿದಮಟ್ಟಿಗೆ ಕೋ-ಅಪರೇಟೀವ್ ಸೆಕ್ಟಾರಿನಲ್ಲಿ ಗಿರಣಿಗೆ ಬೇಕಾದಂಥ ಯಂತ್ರೋಪಕರಣಗಳನ್ನು ತಂದು ಲಕ್ಷಾಂತರ ರೂಪಾಯಿ ವ್ಯಯ ಮಾಡಿ ಜಮೀನು ಕೊಂಡಿದ್ದಾರೆ. ಕೆಲಸ ಮಾತ್ರ ಪ್ರಾರಂಭವಾಗಿಲ್ಲ. ಪ್ರೈವೇಟ್ ಸೆಕ್ಟಾರ್ ತೆಗೆದುಕೊಂಡರೆ ದಾವಣಗೆರೆಯಲ್ಲಿ ಒಂದು ಗಿರಣಿ ಮಾತ್ರ ಪ್ರಾರಂಭವಾಗಿದೆ. ಉಳಿದ ಯಾವುದೇ ಲೈಸೆನ್ಸ್‌ದಾರರೂ ಇದುವರೆಗೂ ಬಟ್ಟೆ ಗಿರಣಿಯನ್ನು ಸ್ಥಾಪನೆ ಮಾಡಿಲ್ಲ. ಈ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎಷ್ಟು ಗಿರಣಿಗಳಿಗೆ ಲೈಸೆನ್ಸ್ ನೀಡಲಾಯಿತೋ ಅಷ್ಟು ಗಿರಣಿಗಳು ಏಕೆ ಪ್ರಾರಂಭವಾಗಲಿಲ್ಲ, ಇದರ ಬಗ್ಗೆ ಯಾವ ಧೋರಣೆಯನ್ನು ಕೈಕೊಳ್ಳಬೇಕು, ನಾಲ್ಕನೆಯ ಯೋಜನೆಯ ಬಗ್ಗೆ ಕೈಗಾರಿಕೆಗಳ ಬಗ್ಗೆ ಸರ್ಕಾರದ ಧೋರಣೆ ಏನು ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕಾಗಿತ್ತು ಅದನ್ನು ಹೇಳಿಲ್ಲ.

ಉಳಿದ ಉದ್ಯಮಗಳ ವಿಚಾರ ಹೇಳಬೇಕು ಎಂದರೆ, ರಾಜ್ಯದಲ್ಲಿ ಅನೇಕ ಜನ ತರುಣರೂ, ಶ್ರೀಮಂತರೂ ಉದ್ಯಮ ಪ್ರಾರಂಭ ಮಾಡಲು ಮುಂದೆ ಬಂದರೂ ಅವರಿಗೆ ಸಾಕಷ್ಟು ಉತ್ತೇಜನ ಸಿಕ್ಕುತ್ತಿಲ್ಲ. ಕೈಗಾರಿಕೆ ಇಲಾಖೆಯಿಂದ ಒಂದು ಉತ್ತರ ಬರಬೇಕಾದರೆ ಒಂದು ವರ್ಷ ವಾಗುತ್ತದೆ. ಕಾಂಗ್ರೆಸ್ ಸದಸ್ಯರೂ, ವಿರೋಧಪಕ್ಷದ ಸದಸ್ಯರೂ ಸೂಚನೆಗಳನ್ನು ಕೊಟ್ಟಿದ್ದರೂ ಆ ಬಗ್ಗೆ ಯಾವುದೇ ನಿರ್ದಿಷ್ಟವಾದ ಧೋರಣೆಯನ್ನು ಪ್ರಸ್ತಾಪ ಮಾಡಿಲ್ಲ.

ಇನ್ನೊಂದು ಮಾತು ಹೇಳುವುದಾದರೆ, ಶ್ರೀಮಾನ್ ಘೋರ್ಪಡೆ ಅವರು ಮತ್ತು ಕೆ. ಎಚ್. ಶ್ರೀನಿವಾಸ್ ಅವರೂ ಉತ್ತಮವಾದ ಸೂಚನೆಗಳನ್ನು ಮಾಡಿದರು. ಯಾವುದೇ ಒಂದು ಕಮಿಟಿಯನ್ನು ಮಾಡುವಾಗಲೂ ಎಲ್ಲ ಪಕ್ಷಗಳ ಜನರ ಪ್ರತಿನಿಧಿಗಳು, ವಿಧಾನಸಭಾ ಸದಸ್ಯರು ಕೂಡಿದಂಥ ಸಮಿತಿಗಳನ್ನು ಮಾಡಬೇಕೆಂದು ಕೊಟ್ಟಂಥ ಸೂಚನೆಗಳನ್ನು ಸರ್ಕಾರದವರು ಕೇಳಲಿಲ್ಲ. ಯಾವುದೇ ಕಮಿಟಿಗಳನ್ನು ನೇಮಿಸುವಾಗಲೂ ಸರ್ಕಾರದ ಧೋರಣೆ ಏನಿದೆ ಎಂದರೆ, ಅವರಲ್ಲಿ ಕಾಂಗ್ರೆಸ್ಸಿನವರೇ ಇರಬೇಕು, ಕಾಂಗ್ರೆಸ್ಸಿನವರಲ್ಲಿಯೂ ಚುನಾವಣೆಗಳಲ್ಲಿ ಸೋತವರೇ ಇರಬೇಕು ಎಂದು ಇದೆ. ಚುನಾವಣೆಗಳಲ್ಲಿ ಸೋತವರಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಈ ಸಮಿತಿಗಳ ನೇಮಕವಾಗುತ್ತದೆ ಎಂದು ಹೇಳಬೇಕಾಗಿದೆ. ಸದಸ್ಯರನ್ನು ನೇಮಕ ಮಾಡುವಾಗ ಅದಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಅವರಿಗೆ ಪರಿಶ್ರಮವಿದೆಯೇ, ಆ ವಿಚಾರವನ್ನು ಪ್ರತಿಪಾದನೆ ಮಾಡುವ ಗುಣವಿದೆಯೇ, ಆ ವಿಚಾರಗಳಲ್ಲಿ ಅವರು ತಜ್ಞರೇ, ಎಂದು ನೋಡಿ, ಆ ಕಾರಣದಿಂದ ಜನರನ್ನು ಸಮಿತಿಗಳಿಗೆ ತೆಗೆದುಕೊಳ್ಳುವುದು ಅವರಿಗೆ ತಿಳಿದಂತೆ ಕಂಡುಬರುವುದಿಲ್ಲ. ಉದಾಹರಣೆಗೆ ಹುಬ್ಬಳ್ಳಿ ಕೆ. ಎಂ. ಸಿ. ಆಸ್ಪತ್ರೆಯ ವಿಸಿಟರ್ಸ್ ಬೋರ್ಡ್ ಬಗ್ಗೆ ಹೇಳುತ್ತೇನೆ. ಹುಬ್ಳಿ ಆಸ್ಪತ್ರೆಯಲ್ಲಿ ವಿಸಿಟರ್ಸ್ ಬೋರ್ಡ್ ಇಲ್ಲದೆ ಹೋಗಿದ್ದು ಅದರ ಕಡೆಗೆ ನಾನೂ ಮತ್ತು ಶ್ರೀಮಾನ್ ಎಸ್. ಎಸ್. ಶೆಟ್ಟರ್ ಅವರು ಕೆ. ಎಂ. ಸಿ. ಆಸ್ಪತ್ರೆಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿ ಅನೇಕ ವಿಚಾರಗಳನ್ನು ಆರೋಗ್ಯ ಮಂತ್ರಿಗಳ ಲಕ್ಷ್ಯಕ್ಕೆ ತಂದೆವು. ಅವರು ವಿಸಿಟರ್ಸ್ ಬೋರ್ಡ್ ನೇಮಕ ಮಾಡುವಾಗ ಈ ಸಭೆಯ ಕಾಂಗ್ರೆಸ್ ಸದಸ್ಯರನ್ನು ಮಾತ್ರ ನೇಮಿಸಿದ್ದಾರೆ. ಮಾನ್ಯ ಸೆಟ್ಟರ್ ಅವರು ಹುಬ್ಳಿಯಿಂದ ಈ ಸಭೆಗೆ ಆರಿಸಿಬಂದಿದ್ದಾರೆ. ಅವರು ಈ ಕಮಿಟಿಯಲ್ಲಿಲ್ಲ. ಆ ಕಮಿಟಿಯಲ್ಲಿ ಶ್ರೀಮಾನ್ ಎಂ. ಆರ್. ಪಾಟೀಲರೂ, ಎಸ್. ವಿ. ಅಗ್ನಿಹೋತ್ರಿಯವರೂ ಇರುವುದು ಬೇಡ ಎಂದು ನಾನು ಹೇಳುವುದಿಲ್ಲ. ಹುಬ್ಬಳ್ಳಿ ಷಹರ್‌ನಿಂದ ಆರಿಸಿಬಂದಿರುವ ಶ್ರೀ ಶೆಟ್ಟರ್ ಅವರು ಉತ್ತಮ ಕಾರ್ಯಕರ್ತರು, ಅಂಥವರನ್ನು ಕಮಿಟಿಯಲ್ಲಿ ಹಾಕುವ ಮನೋಭಾವವಿಲ್ಲವಲ್ಲ ಎಂದು ಹೇಳಬಯಸುತ್ತೇನೆ.

ಸ್ಥಾನಿಕ ಸಂಸ್ಥೆಗಳ ಚುನಾವಣೆಗಳ ವಿಚಾರದಲ್ಲಿ ಸರ್ಕಾರದ ಧೋರಣೆ ಬಹಳ ವಿಚಿತ್ರವಾಗಿದೆ. ಇವುಗಳ ಚುನಾವಣೆಗಳನ್ನು ಮುಂದೂಡಲಾಗಿದೆ. ಉತ್ತರ ಕರ್ಣಾಟಕದ ವಿಚಾರ ಹೇಳುವುದಾದರೆ ಅಲ್ಲಿನ ಎಲ್ಲ ಮುನಿಸಿಪಾಲಿಟಿಗಳನ್ನೂ ಸರ್ಕಾರ ಸೂಪರ್‌ಸೀಡ್ ಮಾಡಿದೆ. ಹುಬ್ಳಿ, ಧಾರವಾಡ, ಗದಗ್, ಬಿಜಾಪುರ, ಬೆಳಗಾಂ ಈ ಎಲ್ಲ ಮುನಿಸಿಪಾಲಿಟಿಗಳನ್ನೂ ಸರ್ಕಾರ ಸೂಪರ್‌ಸೀಡ್ ಮಾಡಿ ಅಲ್ಲಿ ಅಧಿಕಾರಿಗಳನ್ನು ನೇಮಿಸಿ ತಮ್ಮ ಕೈಯಲ್ಲಿ ಆಡಳಿತವನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಚುನಾವಣೆಗಳನ್ನು ಮಾಡುವ ವಿಚಾರವೇ ಇಲ್ಲ. ತುರ್ತು ಪರಿಸ್ಥಿತಿ ಇದೆ ಎನ್ನುವ ಕಾರಣದಿಂದ ಗದಗ್ ಮುನಿಸಿಪಾಲಿಟಿಯಲ್ಲಿ ಚುನಾವಣೆಗಳನ್ನು ನಡೆಸದೆ ಒಬ್ಬ ಅಡ್ಮಿನಿಸ್ಟ್ರೇಟರ್ ಅನ್ನು ನೇಮಿಸಿದ್ದಾರೆ. ಇದಕ್ಕೆ ರಾಜಕೀಯದ ಹಿನ್ನೆಲೆ ಇದೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಚುನಾವಣೆಗಳನ್ನು ಮಾಡುವ ಒಂದು ಕೆಲಸವನ್ನು ಬಿಟ್ಟು ಎಲ್ಲ ಮುನಿಸಿಪಾಲಿಟಿಗಳನ್ನೂ ತಮ್ಮ ಕೈಯಲ್ಲಿಟ್ಟುಕೊಂಡಿರುವ ಧೋರಣೆ ಬಹಳ ತಪ್ಪು.

ಭಾಷೆಯ ವಿಷಯವಾಗಿ ಅನೇಕ ಮಿತ್ರರು ಮಾತನಾಡಿದ್ದಾರೆ. ಮೊಟ್ಟಮೊದಲನೆಯದಾಗಿ ಕಾಂಗ್ರೆಸ್ ಸರ್ಕಾರಗಳ ಒಂದು ನೀತಿ ಇದರಲ್ಲಿ ಅಡಕವಾಗಿದೆ. ಅದೇನೆಂದರೆ, ಕನ್ನಡದಲ್ಲಿ ಒಂದು ಗಾದೆ ಹೇಳುವಂತೆ, ''ಒತ್ತಿದರೆ ಸರಿಯುವುದು, ಸರಿದರೆ ಒತ್ತುವುದು,'' ಎನ್ನುವಂತಾಗಿದೆ. ಒತ್ತಡವಿಲ್ಲದೆ, ಗಲಾಟೆಯಿಲ್ಲದೆ ಯಾವುದೇ ಕೆಲಸವನ್ನೂ ಕಾಂಗ್ರೆಸ್ ಸರ್ಕಾರದಲ್ಲಿ ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯವಾಗಿದೆ. ಒತ್ತಡ ಬಂದಾಗ, ಗಲಾಟೆಯಾದಾಗ ಮಾತ್ರ ಕಾಂಗ್ರೆಸ್ ಸರ್ಕಾರಗಳು ಕೆಲಸ ಮಾಡುತ್ತವೆ, ಇಲ್ಲದೆ ಇದ್ದರೆ ಏನೂ ಮಾಡುವುದಿಲ್ಲ ಎಂದು ಹೇಳುತ್ತೇನೆ. ಭಾಷಾವಾರು ಪ್ರಾಂತ ರಚನೆ ಮಾಡುವಾಗ ಆಂಧ್ರದಲ್ಲಿ ದೊಂಬಿಯಾದಾಗ ಮಾಡಿದರು, ಕರ್ಣಾಟಕದಲ್ಲಿ ದೊಂಬಿಯಾದಾಗ ಕರ್ನಾಟಕ ರಾಜ್ಯವನ್ನು ಮಾಡಿದರು, ಮುಂಬೈನಲ್ಲಿ ದೊಂಬಿಯಾದಾಗ ಮಹಾರಾಷ್ಟ್ರ ರಾಜ್ಯವನ್ನು ಮಾಡಿದರು, ಈ ರೀತಿ ಒತ್ತಾಯಕ್ಕೆ ಮಣಿದು ತಮ್ಮ ಧೋರಣೆಯನ್ನು ಬದಲು ಮಾಡುವ ನೀತಿ ಕಾಂಗ್ರೆಸ್ ಸರ್ಕಾರದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಯಾವುದೇ ಒಂದು ಕಾರ್ಯವಾಗಬೇಕಾದರೆ, ಅವರು ಬಯಸಿದ್ದು ಸಿಕ್ಕಬೇಕಾದರೆ ಚಳುವಳಿ ಮಾಡಬೇಕು, ಬಸ್ಸು ಸುಡಬೇಕು, ರೈಲುಗಳನ್ನು ಸುಡಬೇಕು ಹಾಗೆ ಮಾಡಿದರೆ ಮಾತ್ರ ನಮ್ಮ ಬೇಡಿಕೆ ಈಡೇರುತ್ತದೆ ಎನ್ನುವ ಮನೋಭಾವನೆ ಬಂದಿದೆ. ಅದಕ್ಕೆ ಕಾರಣ ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಕಾಂಗ್ರೆಸ್ ಸರ್ಕಾರ. ಭಾಷಾ ಸಮಸ್ಯೆಯ ಬಗ್ಗೆ ಒಂದು ಮಾತು ಹೇಳುವುದಾದರೆ, ಸಾಮಾನ್ಯವಾಗಿ ದಕ್ಷಿಣ ಹಿಂದೂಸ್ಥಾನದ ಜನ ತಮಗೆ ತಾವೇ 25 ವರ್ಷಗಳಿಂದ ಹಿಂದಿಯನ್ನು ಕಲಿಯುತ್ತಿದ್ದಾರೆ. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯವರು ನಡೆಸುವ ಪರೀಕ್ಷೆಗಳಿಗೆ ಕೂತು ಲಕ್ಷಾಂತರ ವಿದ್ಯಾರ್ಥಿಗಳು ಹಿಂದಿಯನ್ನು ಕಲಿಯುತ್ತಿದ್ದಾರೆ. ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಹಿಂದಿ ಭಾಷೆ ದಕ್ಷಿಣದ ಪ್ರತಿಯೊಬ್ಬ ವಿದ್ಯಾರ್ಥಿಗೂ

(ಶ್ರೀ ಎಸ್. ಆರ್. ಬೊಮ್ಮಾಯಿ)

ಉತ್ತಮವಾದ ರೀತಿಯಲ್ಲಿ ಬರುವಂಥ ಸ್ಥಿತಿ ಇತ್ತು. ಇಂಥ ಹೊತ್ತಿನಲ್ಲಿ ಭಾಷಾ ಕಾಯಿದೆಯನ್ನು ಮಾಡಿ ಲ್ಯಾಂಗ್ವೇಜ್ ಬಿಲ್ ತಂದುದರಿಂದ ಈ ಸಮಸ್ಯೆ ಉದ್ಭವಿಸಿತು. ಕೇಂದ್ರ ಸರ್ಕಾರದವರೇ ಇದನ್ನು ಸರಿಯಾದ ರೀತಿಯಲ್ಲಿ ಕೂಡಿಸಲಿಕ್ಕೆ ಹೊಣೆಗಾರರು. ಈ ಬಗ್ಗೆ ರಾಜ್ಯ ಸರ್ಕಾರದವರ ನಿರ್ದಿಷ್ಟವಾದ ಧೋರಣೆ ಏನು ಎನ್ನುವ ವಿಚಾರದಲ್ಲಿ ರಾಜ್ಯಪಾಲರು ಏನು ಹೇಳಲಿಲ್ಲ. ಈ ದೆಸೆಯಲ್ಲಿ ನಿರ್ದಿಷ್ಟವಾದ ಸೂಚನೆಗಳನ್ನು ಮಾಡಬೇಕಾಗಿತ್ತು.

ಇನ್ನು ಮೇಜರ್ ಇರಿಗೇಷನ್ ಬಗ್ಗೆ ಕೃಷ್ಣಾ ವಾಟರ್ ಬಗ್ಗೆ ಅನೇಕರು ಮಾತನಾಡಿದ್ದಾರೆ. ಈ ಕೃಷ್ಣ ನೀರಿನ ಹಂಚಿಕೆ ವಿಚಾರವನ್ನು ಬೇಕಾದರೆ ಟ್ರಿಬ್ಯೂನಲ್‌ಗೆ ರೆಫರ್ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಬರೆಯುವಂತೆ ತಿಳಿಸಲಾಗಿತ್ತು. ಈ ಸಂಬಂಧವಾಗಿ ಅನೇಕ ಸಲ ಪಬ್ಲಿಕ್ ವರ್ಕ್ಸ್ ಇಲಾಖೆ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇವೆ. ಒಂದು ವೇಳೆ ಆರ್ಬಿಟ್ರೇಷನ್ನಿಗೆ ರೆಫರ್ ಮಾಡದಿದ್ದರೆ ಸುಪ್ರೀಂ ಕೋರ್ಟಿಗೆ ಹೋಗಬೇಕು ಎಂದು ಒತ್ತಾಯ ಮಾಡಿದ್ದೇವೆ. ಇದರ ಬಗ್ಗೆ ಸೂಚನೆಯೇನನ್ನೂ ಕೊಡದೆ ಸ್ಪಷ್ಟವಾಗಿ ವಿಚಾರ ತಿಳಿಸದಿರುವುದು ಬಹಳ ವಿಷಾದಕರ.

ಕುಡಿಯುವ ನೀರಿನ ಯೋಜನೆಗಳ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಇದೊಂದು ವಿಷಾದಕರವಾದ ವಿಚಾರವಾಗಿದೆ. ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಸೌಕರ್ಯ ಮಾಡಿ ಕೊಡುವುದಾಗಿ ಹೇಳುವುದು ಕಾಣುತ್ತಿದ್ದರೂ ನಮ್ಮ ತಾಲ್ಲೂಕಿನಲ್ಲಿ ಒಂದು ಹಳ್ಳಿಯಲ್ಲೂ ಈ ಯೋಜನೆಯನ್ನು ಪ್ರಾರಂಭಿಸಿಲ್ಲ. ಈ ಬಗ್ಗೆ ವಿಚಾರ ಮಾಡಲಾಗಿ ಸುಮಾರು 18 ನೂರು ಯೋಜನೆಗಳು ಹಣಕಾಸಿನ ಇಲಾಖೆಯಿಂದ ವಾಪಸು ಬಂದಿವೆ. ಈ ವರ್ಷ 18 ಲಕ್ಷ ರೂಪಾಯಿಗಳನ್ನು ಮಾತ್ರ ಇದಕ್ಕೆ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಇದು ಏತಕ್ಕೆ ಸಾಕು? ಇಷ್ಟು ಅಲ್ಪ ಹಣ ಪ್ರತಿ ವರ್ಷವೂ ಕೊಡುತ್ತಾ ಹೋದರೆ ಸುಮಾರು 50 ವರ್ಷಗಳಾದರೂ ಪ್ರತಿಯೊಂದು ಹಳ್ಳಿಗೂ ನೀರು ಒದಗಿಸಲು ಸಾಧ್ಯವಾಗುವುದಿಲ್ಲ. ಮೂರು-ನಾಲ್ಕು ವರ್ಷಗಳವರೆಗೆ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಎಫ್. ಡಿ. ಯವರು ತಿಳಿಸಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿರುವುದಕ್ಕೂ ವಾಸ್ತವವಾಗಿ ನಡೆಯುವುದಕ್ಕೂ ಹೀಗೆ ವೆತ್ಯಾಸವಿದೆ.

ಇನ್ನು ಸರಕಾರದ ನೌಕರರ ಬಗ್ಗೆ ಒಂದು ಮಾತು ಹೇಳುವುದು ಅವಶ್ಯವಿದೆ. ಎನ್.ಜಿ.ಓ. ಗಳ ಪಗಾರ ಮತ್ತು ತುಟ್ಟಿ ಭತ್ಯದ ಬಗ್ಗೆ ನನ್ನ ಮಿತ್ರರು ಕೆಲವರು ಮಾತನಾಡಿದ್ದಾರೆ. ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟುಗಳನ್ನು ಇನ್ನೂ ಪೂರ್ಣವಾಗಿ ಮಾಡಿರುವುದಿಲ್ಲ, ರಾಜ್ಯದ ಪುನರ್ವಿಂಗಡಣೆಯಾಗಿ 12 ವರ್ಷಗಳಾದರೂ ಕೂಡ ಈ ವಿಚಾರದಲ್ಲಿ ಇನ್ನೂ ಒಂದು ನಿರ್ದಿಷ್ಟ ನಿಯುವನ್ನು ತೆಗೆದುಕೊಂಡಿಲ್ಲ. ಉದಾಹರಣೆಗೆ ಅಗ್ರಿಕಲ್ಚರಲ್ ಇಲಾಖೆಗೆ ಸಂಬಂಧಪಟ್ಟ ಸೀನಿಯಾರಿಟಿ ಲಿಸ್ಟಿನ ಬಗ್ಗೆ ಕೇಂದ್ರ ಸರಕಾರ ಒಂದು ನಿರ್ಧಾರಮಾಡಿ ರಾಜ್ಯವು ಅದರಂತೆ ಜಾರಿಗೆ ತರಲು ಅದನ್ನು ಕಳುಹಿಸಿ 9 ತಿಂಗಳಾದರೂ ಕೂಡ ಸರಕಾರ ಅದನ್ನು ಅಮಲಿಗೆ ತಂದಿಲ್ಲ. ತಮಗೆ ಬೇಕಾದವರನ್ನು ಕೆಳಕ್ಕೆ ಹಾಕಲು ಇಷ್ಟಪಡದೆ ಸರಕಾರ ಕಾಲ ತಳ್ಳುತ್ತಿದೆ. ಈ ವಿಚಾರ ಕ್ಯಾಬಿನೆಟ್ಟಿನ ಮುಂದೆ 2-3 ಸಲ ಬಂದರೂ ಅಂಗೀಕಾರಮಾಡದೆ ಕೆಲವರ ಹಿತಕ್ಕಾಗಿ ಸರಕಾರ ಮುಂದೂಡುತ್ತಿದೆ. ಕಾರಣ ಜಾರಿಗೆ ತಂದರೆ ಕೆಲವರಿಗೆ ಧಕ್ಕೆ ಬರುತ್ತದೆ. ಇದೇ ರೀತಿಯಲ್ಲಿ ಹೈಕೋರ್ಟಿಗೆ ಕೆಲವು ಸಂದರ್ಭಗಳಲ್ಲಿ ರಿಟ್ ಹೋಗಿ ಅಲ್ಲಿಂದ ಒಂದು ಸೂಚನೆ ಕೊಟ್ಟಾಗ್ಯೂ ಕೂಡ ಅದನ್ನು ಅಮಲುಜಾರಿ ಮಾಡಿಲ್ಲ. ಮೆಡಿಕಲ್ ಸರ್ವಿಸ್ ಬಗ್ಗೆ 1963 ರರ ರೂಲ್ಸ್ ಪ್ರಕಾರ ಸೀನಿಯಾರಿಟಿ ಗೊತ್ತುಮಾಡಿ ಹೈಕೋರ್ಟು ಎರಡು ಸಲ ಆರ್ಡರು ಮಾಡಿದರೂ ಕೂಡ ಸರಕಾರ ಅದನ್ನು ಅಮಲಿಗೆ ತರಲಿಲ್ಲ. 'ಕಂಟೆಂಪ್ಟ್ ಆಫ್ ಕೋರ್ಟ್' ಎಂದು ಕೋರ್ಟಿನ ಆಜ್ಞೆಯಂತೆ ನಡೆಯದಿದ್ದುದಕ್ಕಾಗಿ ಚೀಫ್ ಸೆಕ್ರೆಟರಿ ಮತ್ತು ಹೆಲ್ತ್ ಮಿನಿಸ್ಟರಿಗೆ ತಿಳಿಸಿದರೂ ಸಹ ಹೈಕೋರ್ಟಿನ ಸೂಚನೆಯಂತೆ ಸರಿಪಡಿಸಲಿಲ್ಲ. ಹೈಕೋರ್ಟಿನ ಹುಕುಮಿನಿಂದ ಕೆಲವರಿಗೆ ಲಾಭವಾಗಿದೆ. ಸರಕಾರ ತನಗೆ ಬೇಕಾದವರಿಗೆ 1962 ರ ರೂಲ್ಸ್ ಪ್ರಕಾರ ಅನುಕೂಲ ಮಾಡಿದೆ. ಅದು ಹೈಕೋರ್ಟಿನಲ್ಲಿ ಛಾಲೆಂಜ್ ಆಗಿದೆ. ಇಷ್ಟಾಗಿದ್ದರೂ ಕೇಂದ್ರ ಸರಕಾರದ ಮಾತಿಗಾಗಲಿ ಅಥವಾ ಹೈಕೋರ್ಟಿನ ಮಾತಿಗಾಗಲಿ ಸರಕಾರ ಕಿವಿ ಕೊಡುತ್ತಿಲ್ಲ. ಆದ್ದರಿಂದ ಸರಕಾರಿ ನೌಕರರು ಅಸಮಾಧಾನಗೊಂಡು ಯಾವುದೇ ಕೆಲಸವನ್ನು ಸರಿಯಾಗಿ ನಿರ್ವಹಿಸದೆ ಕೆಲಸ ನಿಲ್ಲುವ ಪರಿಸ್ಥಿತಿ ಬಂದಿದೆ. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಎಸ್. ಎಂ. ಗುರಡ್ಡಿ (ಮುದ್ದೆಬಿಹಾಳ್).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ಈ ಸಭೆಯನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ಕೃತಜ್ಞತೆಯನ್ನರ್ಪಿಸಲು ನನ್ನ ಮಿತ್ರರಾದ ಶ್ರೀ ವಾಸರವರು ತಂದಿರುವ ನಿರ್ಣಯಕ್ಕೆ ಬೆಂಬಲವನ್ನು ಕೊಡುತ್ತಿದ್ದೇನೆ. ಇಲ್ಲಿಯವರೆಗೆ ಸತತ

2-3 ದಿವಸ ರಾಜ್ಯಪಾಲರ ಭಾಷಣದಮೇಲೆ ಕೆಲವು ಟೀಕೆಗಳು ಬಂದಿವೆ ಮತ್ತು ಸಮರ್ಥನೆಯೂ ಬಂದಿದೆ. ಶ್ರೀಮಾನ್ ಶಿವಪ್ಪನವರು ರಾಜ್ಯಪಾಲರ ಭಾಷಣದಲ್ಲಿ ಯಾವ ಸತ್ಯಾಂಶವೂ ಇಲ್ಲ ಎಂದು ಹೇಳಿದುದನ್ನು ಕೇಳಿ ವ್ಯಥೆ ಉಂಟಾಗಿದೆ, ರಾಜ್ಯಪಾಲರ ಭಾಷಣ ಸುಸ್ಪಷ್ಟ ವಾಗಿದೆ, ರಾಜ್ಯದ ಆಗುಹೋಗುಗಳನ್ನು ರಾಜ್ಯಪಾಲರು ಪ್ರಸ್ತಾಪಮಾಡಿದ್ದಾರೆ. ಇವತ್ತಿನ ಸ್ಥಿತಿಗತಿ ನೋಡಿದರೆ ಆರ್ಥಿಕವಾಗಿ ನಾವು ಪ್ರಗತಿ ಪಡೆಯುತ್ತಿದ್ದೇವೆ. 'ಲಾ ಅಂಡ್ ಆರ್ಡರ್'' ನೋಡಿದರೆ ದೇಶದಲ್ಲಿ ಈಗ ಸ್ವಲ್ಪ ಅರಾಜಕತೆಯುಂಟಾಗಿದೆ ಎಂದು ಹೇಳಲೇ ಬೇಕಾಗಿದೆ. ಇದೊಂದು ದುರ್ದೈವದ ಸಂಗತಿ, ಇದು ನಾನಾ ಸಮಸ್ಯೆಗಳಿಗೆ ಎಡೆಕೊಟ್ಟಿದೆ, ಎಂದು ಹೇಳುವುದು ನಿಜವಾಗಿದ್ದರೂ ಇರಬಹುದು. ಆದರೆ ಇದು ಪ್ರಚೋದನೆಗೆ ಎಡೆಕೊಟ್ಟಿದೆ, ಇದರಿಂದ ರಾಜ್ಯ ಕೆಟ್ಟು ಹಾಳಾಗಿಹೋಗುತ್ತಿದೆ ಎಂದು ಹೇಳುವುದು ಅಷ್ಟಾಗಿ ಸರಿಯಲ್ಲ ಎಂದು ಹೇಳಬೇಕಾಗಿದೆ. ಇಂದು ನಮ್ಮ ಇಡೀ ಭಾರತದಲ್ಲಿ ಪ್ರಜಾರಾಜ್ಯ ಸ್ಥಾಪನೆಯಾಗಿದೆ ಎಲ್ಲರೂ ಕೂಡ ಪ್ರಜಾರಾಜ್ಯ ಉಳಿಯಬೇಕೆಂದು ಮನಸ್ಸು ಮಾಡಿದರೆ ಯಾವ ತೊಂದರೆಯೂ ಇರುವುದಿಲ್ಲ. ಅದು ಎಲ್ಲರ ಜವಾಬ್ದಾರಿಯಾಗಿದೆ. ನಾವು ಆಡಳಿತವನ್ನು ಬಿಗಿಪಡಿಸಬೇಕು ಅದಕ್ಕೆ ಎಲ್ಲರೂ ಸಹಕರಿಸಿ ಕೆಲಸಮಾಡಬೇಕು, ಇದು ಅವಶ್ಯವಾಗಿದೆ ಎಂದು ಮೊದಲು ಹೇಳಬೇಕಾಗಿದೆ. ಇಂದು ಲಾ ಅಂಡ್ ಆರ್ಡರ್ ಇಲ್ಲದೆ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸು ವುದಕ್ಕೆ ಸಾಧ್ಯವಿಲ್ಲ; ಪ್ರಜಾರಾಜ್ಯ ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಆದಕಾರಣ ಇದನ್ನೆಲ್ಲಾ ಬಿಗಿಮಾಡಲು ಎಲ್ಲರೂ ಹೊಣೆ ಹೊರಬೇಕು. ಇಂದು ಭಾಷಾ ಸಮಸ್ಯೆ ಮತ್ತು ಗಡಿ ಸಮಸ್ಯೆ ನಮ್ಮ ದೇಶದಲ್ಲಿದೆ. ಹೀಗಿದ್ದರೆ ಇದರಿಂದ ರಾಜ್ಯದಲ್ಲಿ ಬಿಗಿಯಾದ ಆಡಳಿತವಿಲ್ಲವೆಂಬುದು ಅರ್ಥವಾಗುತ್ತದೆ. ಇದನ್ನು ತೀವ್ರವಾಗಿ ಬಗೆ ಹರಿಸಬೇಕಾದ್ದು ಅವಶ್ಯಕ.

ರಾಜ್ಯಪಾಲರ ಭಾಷಣದಲ್ಲಿ ಇಂದು ನಮ್ಮ ರಾಜ್ಯ ಆರ್ಥಿಕವಾಗಿ ಹೇಗೆ ಮುಂದುವರೆಯು ತ್ತಿದೆಯೆಂಬುದನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಉದ್ಯಮಗಳು ಹೇಗೆ ನಡೆಯುತ್ತಿವೆ, ವಿದ್ಯುಚ್ಛಕ್ತಿ ಯಾವರೀತಿ ಒದಗಿಸಲ್ಪಡುತ್ತಿದೆ, ವಿದ್ಯಾಭ್ಯಾಸ ಹೇಗೆ ಜರುಗುತ್ತಿದೆ ಎಂಬುದನ್ನು ಹೇಳಿದ್ದಾರೆ. ಆದರೆ ವಿದ್ಯಾಭ್ಯಾಸದಲ್ಲಿ ಪ್ರಗತಿಯಾಗಿದ್ದರೂ ಕೂಡ ವಿದ್ಯಾರ್ಥಿಗಳಲ್ಲಿ ಅದೂ ಕಾಲೇಜಿನಲ್ಲಿ ಒಂದು ಅಸಮಾಧಾನ ಉಂಟಾಗಿದೆ, ಅವರಲ್ಲಿದ್ದ ಒಂದು ಹುಮ್ಮಸ್ಸು ಹೋಗಿದೆ. ಏಕೆಂದರೆ ವಿದ್ಯೆಯನ್ನು ಪಡೆದಮೇಲೆ ಅವರಿಗೆ ಉದ್ಯೋಗಗಳು ದೊರೆಯುವುದು ಕಷ್ಟವಾಗಿದೆ. ಈ ದಿವಸ ಇಂಜನಿಯರುಗಳು ನಿರುದ್ಯೋಗಿಗಳಾಗಿದ್ದಾರೆ, ಮುಂದೆ ಡಾಕ್ಟರುಗಳೂ ಕೂಡ ನಿರುದ್ಯೋಗಿಗಳಾಗಬಹುದು. ವಿದ್ಯಾಭ್ಯಾಸ ಕ್ರಮದಲ್ಲಿ ಮತ್ತು ನೌಕರಿ ಕೊಡುವ ವಿಧಾನದಲ್ಲಿ ಮಾರ್ಪಾಡು ಮಾಡದಿದ್ದರೆ ಈಗಿರುವ ಅಸಮಾಧಾನ ಹೆಚ್ಚುವ ಸಂಭವವಿದೆ. ಇದಕ್ಕೆ ಅವಕಾಶವಿಲ್ಲದಂತೆ ಕೂಡಲೆ ಸೂಕ್ತ ಕ್ರಮ ಕೈಕೊಳ್ಳಬೇಕು. ಇಂದು ರಾಜ್ಯದಲ್ಲಿ ಪ್ರಗತಿಯಾಗಬೇಕಾದರೆ ಮುಖ್ಯವಾದ ಉದ್ಯಮಗಳು ಬೆಳೆಯಬೇಕು. ಈಗ ನಮಗೆ ಬೇಕಾದಷ್ಟು ವಿದ್ಯುಚ್ಛಕ್ತಿ ದೊರೆಯುತ್ತಿದೆ. ಆದರೂ ಕೂಡ ಸಾಕಾ ದಷ್ಟು ಕೈಗಾರಿಕೆಗಳು ನಮ್ಮಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ನಾನಾ ಕಾರಣಗಳಿವೆ. ಬಂಡವಾಳವುಳ್ಳ ಜನರು ಮುಂದೆ ಬರುತ್ತಿಲ್ಲ, ಅವರಿಗೆ ಸರಿಯಾದ ಉತ್ತೇಜನವಿಲ್ಲ. ಬಂಡವಾಳಗಾರರು ಮುಂದೆ ಬಂದು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಅವರಿಗೆ ಧೈರ್ಯವಿಲ್ಲ, ಇತರರಿಗೆ ಹಣದ ಕೊರತೆಯಿದೆ. ಕೈಗಾರಿಕೆಗಳು ಬೆಳೆಯದಿದ್ದರೆ ನಿರುದ್ಯೋಗ ಸಮಸ್ಯೆಯು ಬೃಹದಾಕಾರವನ್ನು ತಾಳುತ್ತದೆ, ರಾಜ್ಯದಲ್ಲಿ ಅಸಮಾಧಾನ ಹೆಚ್ಚು ಬೆಳೆಯುತ್ತದೆ. ಇಂಥ ಲಕ್ಷಣಗಳು ಕಂಡು ಬರುತ್ತಿವೆ. ನಮ್ಮ ದೊಡ್ಡ ದೊಡ್ಡ ಯೋಜನೆಗಳು ಹಿಂದೆ ಹೇಳುತ್ತಿದ್ದಂತೆ ಜಾರಿಗೆ ಇಂದು ಬರಬೇಕಾಗಿತ್ತು, ಸ್ಟೀಲ್ ಪ್ಲಾಂಟ್ ಬರುತ್ತದೆಂದು ಹೇಳುತ್ತಿದ್ದರು, ಹೊಸಪೇಟೆಯ ಬಳಿ ಒಂದು ಸಣ್ಣ ಸ್ಟೀಲ್ ಪ್ಲಾಂಟನ್ನಾದರೂ ಸ್ಥಾಪಿಸುವುದಾಗಿ ಹೇಳುತ್ತಿದ್ದುದೂ ಕೂಡ ಆಗಿಲ್ಲ.

ದೊಡ್ಡ ದೊಡ್ಡ ಪ್ರಾಜೆಕ್ಟುಗಳು, ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹಣ ಹೋಗುತ್ತಿದೆ ಎಂಬ ಭಾವನೆ ಜನಸಾಮಾನ್ಯರಲ್ಲಿ ಬೆಳೆದು ಬಂದಿದೆ. ಆದ್ದರಿಂದ ಯಾವ ಸ್ಥಳ ಉತ್ತಮವಾಗಿದೆಯೋ ಅಲ್ಲಿ ಯಾವ ಇಂಡಸ್ಟ್ರೀ ಬೆಳೆಯುವುದಕ್ಕೆ ಅನ್ವದವಿದೆಯೋ ಅದನ್ನು ಮಾಡದಿದ್ದರೆ ನಮ್ಮ ಕೈಗಾರಿಕೆ ಗಳು ಬೆಳೆಯುವುದಕ್ಕೆ ಸಾಧ್ಯವಿಲ್ಲ. ಹೊಸಪೇಟೆಯಲ್ಲಿ ಒಂದು ಸ್ಟೀಲ್ ಪ್ಲಾಂಟ್ ಹಾಕಬೇಕೆಂಬ ವಿಚಾರ ಇತ್ತು, ಆದರೆ ಇವತ್ತಿನ ದಿವಸ ರಾಜ್ಯಪಾಲರ ಭಾಷಣದಲ್ಲಿ ಆ ವಿಚಾರ ಇಲ್ಲದೇ ಇರುವುದು ಒಂದು ಗೂಢವಾದ ಅರ್ಥವನ್ನು ಕಲ್ಪಿಸುವುದಾಗಿದೆ.

10–00 A.M.

ಇವತ್ತು ನೀರಿನ ಸಮಸ್ಯೆಯನ್ನು ಇನ್ನೂ ಬಗೆಹರಿಸಿಲ್ಲ. ಇದು ಬಹಳ ವಿಷಾದನೀಯ. ನಮ್ಮ ರಾಜ್ಯ ನಿರ್ಮಾಣವಾಗಿ 1956ರಿಂದ ಇಂದಿನವರೆಗೂ ಇಂಟರ್ ಸ್ಟೇಟ್ ವಾಟರ್ ಡಿಸ್ಪ್ಯೂಟ್ಸ್

(ಶ್ರೀ ಎಸ್. ಎಂ. ಗುರೆಡ್ಡಿ)

ಏನಿದೆ ಅದನ್ನು ಇನ್ನೂ ಕೂಡ ಬಗೆಹರಿಸದಿದ್ದರೆ ಹೇಗೆ ರಾಜ್ಯವನ್ನು ನಡಿಸಿಕೊಂಡು ಬರಲಿಕ್ಕೆ ಸಾಧ್ಯವಿದೆ ಎಂಬುದನ್ನು ನೋಡಬೇಕು. ಕೃಷ್ಣಾ ಗೋದಾವರಿ ನೀರಿನ ಸಮಸ್ಯೆ ಆಂಧ್ರದವರಿಗೂ ನಮಗೂ ಮನಸ್ಸಿನಲ್ಲಿ ಒಂದು ಕೋಪವನ್ನುಂಟುಮಾಡಿದೆ. ಇವತ್ತಿನ ದಿವಸ ಅಪ್ಪರ್ ಕೃಷ್ಣಾ ಯೋಚನೆಯ ವಿಚಾರವನ್ನು ತೆಗೆದುಕೊಂಡರೆ ವಿಜಾಪುರ, ಗುಲ್ಬರ್ಗ, ರಾಯಚೂರು ಇವುಗಳೆಲ್ಲಾ ಬರಗಾಲದ ಹಾವಳಿಗೆ ತುತ್ತಾದ ಪ್ರದೇಶಗಳು ಎಂದು ಹೇಳುತ್ತಾ ಇದ್ದೀರೇ ಹೊರತು ಆ ಯೋಚನೆಯನ್ನೂ ಇನ್ನೂವರೆಗೂ ತೆಗೆದುಕೊಂಡಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಒಂದು ಮಾತನ್ನೂ ಹೇಳದೇ ಇರುವುದು ವಿಷಾದನೀಯ ಎಂದು ಹೇಳಬೇಕಾಗಿದೆ. ನಮ್ಮ ರೈತರು ಉದ್ಧಾರವಾಗಬೇಕು, ಒಕ್ಕಲುತನ ಬೆಳೆಯಬೇಕು ಎಂದು ಹೇಳಿ ನಾವು ಭಾಷಣಮಾಡುತ್ತಾ ಇದ್ದೇವೆ. ಹೀಗಾದರೆ ಜಾದು ಮಾಡಿ ಬೆಳೆಯುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಇವತ್ತು ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಎನ್ನುವುದು ಬರೀ ಬಾಯಿ ಮಾತಾಗಿದೆ. ಒಂದು ಕಟ್ಟಡ ಕಟ್ಟಲಿಕ್ಕೆ ಆಫೀಸರ್‌ಗಳು ಇರಲಿಕ್ಕೆ ವಸತಿ ಸೌಕರ್ಯ ಮಾಡಿಕೊಡಲಿಕ್ಕೆ ಹಣ ಖರ್ಚು ಮಾಡುತ್ತಾ ಇದ್ದೀರೇ ಹೊರತು ಅದರಿಂದ ಏನೇನೂ ಪ್ರಯೋಜನವಾಗುತ್ತಾ ಇಲ್ಲ, ಕಡೆಗೆ ಅವು ಕತ್ತೆಗಳನ್ನು ಕಟ್ಟುವುದಕ್ಕೆ ಉಪಯೋಗವಾಗತಕ್ಕ ಸ್ಥಿತಿಗೆ ಬರುತ್ತದೆ. ಆದಕ್ಕೆ ಖರ್ಚುಮಾಡಿದ ಹಣ ವ್ಯರ್ಥವಾಗುತ್ತಾ ಇದೆ. ಕೂಲಿ ಮಾಡುವವರು ಅಲ್ಲಿಗೆ ಬರುತ್ತಾರೆ, ಅವರು ಗುಡಿಸಿಲಿನಲ್ಲಿ ಇರುವುದಿಲ್ಲವೆ? ಇದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಷಯ. ಇದರಲ್ಲಿ ಮೈಸೂರು ರಾಜ್ಯ ಪ್ರಗತಿಯನ್ನು ಸಾಧಿಸಲಿಕ್ಕೆ ಹತ್ತಿದೆ. ಆದರೆ ಇವತ್ತು ಪ್ರೈವೇಟ್ ಬಸ್‌ನವರೂ ಓಡಿಸುತ್ತಾರೆ, ಸರ್ಕಾರದವರೂ ಬಸ್‌ಗಳನ್ನು ಓಡಿಸುತ್ತಾರೆ, ಹೀಗಾಗಿ ನಮ್ಮ ರೋಡ್ ಟ್ರಾನ್ಸ್‌ಪೋರ್ಟಿಗೆ ಬಹಳ ಲುಕ್ಸಾನಾಗುತ್ತಾ ಇದೆ. ಒಂದು ಹೆಜ್ಜೆಯನ್ನು ಇಟ್ಟಮೇಲೆ ಪೂರ್ಣವಾಗಿ ರಾಷ್ಟ್ರೀಕರಣ ಮಾಡಿ ಇಲ್ಲದೇ ಇದ್ದರೆ ಪ್ರೈವೇಟ್ ಆಪರೇಟರ್ಸ್‌ಗೆ ಕೊಟ್ಟುಬಿಡಿ. ಈ ಡ್ಯೂಯಲ್ ಪಾಲಿಸಿಯಿಂದ ರಾಜ್ಯಕ್ಕೆ ನೆಮ್ಮದಿ ದೊರೆಯುತ್ತಾ ಇಲ್ಲ ಎಂದು ನಾನು ಹೇಳಬೇಕಾಗಿದೆ. ಮತ್ತು ಬಸ್ ಚಾರ್ಜಸ್ ಕೂಡ ಬಹಳ ಹೆವಿಯಾಗುತ್ತಾ ಇದೆ. ಆದ್ದರಿಂದ ನಿಜವಾಗಿಯೂ ರೋಡ್ ಟ್ರಾನ್ಸ್‌ಪೋರ್ಟನ್ನು ಬಲಪಡಿಸಬೇಕಾದರೆ ಇಡೀ ರಾಷ್ಟ್ರಾದ್ಯಂತ ರಾಷ್ಟ್ರೀಕರಣ ಮಾಡಬೇಕೆಂದು ಹೇಳುತ್ತೇನೆ. ಯಾವ ಕೆಲಸ ಮಾಡಬೇಕಾದರೂ ಹಣ ಬೇಕೇ ಬೇಕು, ಶ್ರೀಮಾನ್ ದೇವರಾಜ್ ಅರಸ್ ರವರು ಚಾಸಿಗಳು ಸಿಕ್ಕುವುದಿಲ್ಲ ಎಂದು ಹೇಳುತ್ತಾ ಇದ್ದರು; ಹಾಗಾದರೆ ಪ್ರೈವೇಟ್ ಆಪರೇಟರ್ಸ್‌ಗೆ ಹೇಗೆ ಸಿಕ್ಕುತ್ತದೆ? ಆದ್ದರಿಂದ ಸಂಸ್ಥಾನದಲ್ಲಿ ಪೂರ್ಣ ನ್ಯಾಷನಲೈಸೇಷನ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ ಮಾಡಬೇಕೆಂದು ಸಂಬಂಧಪಟ್ಟ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೇನೆ.

ವಿದ್ಯಾಭ್ಯಾಸದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ವಿದ್ಯಾಭ್ಯಾಸ ವಿಶೇಷವಾಗಿ ಅಂಕಿಸಂಖ್ಯೆಗಳಲ್ಲಿ ಬೆಳೆಯುತ್ತಾ ಇದೆಯೇ ಹೊರತು ಗುಣಾಂಶ ಕಡಿಮೆಯಾಗುತ್ತಾ ಇದೆ. ಕ್ವಾಲಿಟಿ ಹೆಚ್ಚಾಗಬೇಕು. ಮತ್ತು ನಿರುದ್ಯೋಗ ಹೋಗಲಾಡಿಸಲಿಕ್ಕೆ ಯಾವ ಶಿಕ್ಷಣ ಬೇಕೋ ಅದನ್ನು ಕೊಡಬೇಕು. ನಮ್ಮ ದೇಶದಲ್ಲಿ ಅನೇಕ ಸಮಸ್ಯೆಗಳು ಇರುವಾಗ ಈಗ ಭಾಷಾ ಸಮಸ್ಯೆ ಬೇರೆ ತಲೆದೋರಿದೆ. ಮದ್ರಾಸಿನಲ್ಲಿ ಹಿಂದಿ ಪ್ರಚಾರ ಸಮಿತಿ ಅಂತ ಇತ್ತು, ಯಾರೂ ಹೇಳದೆ ಹಿಂದಿ ಪ್ರಚಾರ ಮಾಡುತ್ತಾ ಇತ್ತು. ಅದೇ ಇವತ್ತಿನ ದಿವಸ ನಮ್ಮ ದೇಶದಲ್ಲಿ ಒಂದು ಅಲ್ಲೋಲಕಲ್ಲೋಲವನ್ನುಂಟು ಮಾಡಿದೆ. ಯಾವ ಸಮಸ್ಯೆಯಾಗಲೀ ಅದನ್ನು ಆದಷ್ಟು ಜಾಗ್ರತೆ ಬಗೆಹರಿಸುವುದರ ಕಡೆಗೆ ಹೆಚ್ಚಿನ ಗಮನ ಕೊಟ್ಟು ಅದಕ್ಕೆ ತಕ್ಕ ಪರಿಹಾರವನ್ನು ಕಂಡುಹಿಡಿಯಬೇಕೇ ಹೊರತು ಅದನ್ನು ಬೆಳೆಸುವುದಕ್ಕೆ ಪ್ರಚೋದನೆ ಮಾಡುವುದು ಅಷ್ಟು ಸರಿಕಾಣುವುದಿಲ್ಲ.

ನಮ್ಮದು ಗ್ರಾಮೀಣ ಪ್ರದೇಶಗಳ ರಾಜ್ಯ, ಗ್ರಾಮೀಣ ಪ್ರದೇಶದವರು ಉದ್ಧಾರವಾಗಬೇಕು, ಅವರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಬೇಕು ಎಂದುಹೇಳುತ್ತಾ ಇದ್ದೇವೆ. ನಿಜವಾಗಿಯೂ ಹಳ್ಳಿಗಳವರ ಕುಡಿಯುವ ನೀರಿನ ಸಮಸ್ಯೆ ಮತ್ತು ಇತರ ಅನೇಕ ಸಮಸ್ಯೆಗಳು ಏನಿವೆ ಅವನ್ನು ಪರಿಹಾರ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರಕ್ಕೆ ಆಗಿಲ್ಲ. ಬೆಂಗಳೂರಿನಂತಹ ನಗರಕ್ಕೆ ಕೋಟ್ಯಾನು ಕೋಟಿ ರೂಪಾಯಿ ಖರ್ಚುಮಾಡಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೀರಿ, ವಿಶ್ವ ಬ್ಯಾಂಕ್‌ನಿಂದ ಅದಕ್ಕೆ ಸಾಲವನ್ನು ತರುತ್ತಾ ಇದ್ದೀರಿ, ಮಾಡಿರಿ. ಅದೇ ರೀತಿ ಗ್ರಾಮೀಣ ಪ್ರದೇಶಗಳ ಉದ್ಧಾರಕ್ಕೂ ಕೂಡ ಏಕೆ ಮಾಡಬಾರದು ಎಂದು ನಾನು ಕೇಳುತ್ತಾ ಇದ್ದೇನೆ. ಇವತ್ತು ಯಾವ ಗ್ರಾಮಕ್ಕೇ ಹೋದರೂ 2-3 ಮೈಲಿ ದೂರದಿಂದ ಕುಡಿಯುವ ನೀರನ್ನು ತರಬೇಕಾಗಿದೆ. ಅದರ ಕಡೆಗೆ ಗಮನ ಕೊಡದಿದ್ದರೆ ಹಳ್ಳಿಗಳ ಉದ್ಧಾರ

ವಾಗುವುದಿಲ್ಲ. ರೊಕ್ಕದ ಅಡಚಣೆ ಇದೆ ಎಂದು ಹೇಳುತ್ತಾರೆ. ಬೆಂಗಳೂರಿನ ನೀರಿನ ಸರಬರಾಯಿಗೆ ಯಾವ ರೀತಿ ಗಮನಕೊಡುತ್ತಾ ಇದ್ದೀರೋ ಅದೇ ರೀತಿ ಹಿಂದುಳಿದಿರತಕ್ಕ ಗ್ರಾಮಗಳ ಕಡೆಗೂ ಕೂಡ ಗಮನ ಕೊಡಬೇಕೆಂದು ಹೇಳುತ್ತೇನೆ.

ಎಲೆಕ್ಟ್ರಿಸಿಟಿ ಬೋರ್ಡ್‌ನವರು ಅನೇಕ ಹಳ್ಳಿಗಳನ್ನು ಎಲೆಕ್ಟ್ರಿಫೈ ಮಾಡುತ್ತೇವೆ ಎಂದು ಕಾಗದದಲ್ಲಿ ಹೇಳಿಕೊಂಡಿದ್ದಾರೆ. ಆದರೆ ಪ್ರಗತಿ ನೋಡಿದರೆ ಅದು ಸಮಾಧಾನಕರವಾಗಿ ನಡೆದಿದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಆದ್ದರಿಂದ ಕಾಗದದಲ್ಲಿ ಹೆಚ್ಚಾಗಿ ಬರೆದು ಕೊಳ್ಳುವುದಕ್ಕಿಂತ ಕಾರ್ಯರೂಪಕ್ಕೆ ತರುವುದು ಒಳ್ಳೆಯದು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತಾ ಇದ್ದೇನೆ.

ಇನ್ನು ನಮ್ಮ ರಾಜ್ಯದ ಬಂದರಿನ ವಿಷಯದಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸುತ್ತಾ ಇದ್ದೇವೆ, ಮಂಗಳೂರಿನ ಬಂದರಿನ ಅಭಿವೃದ್ಧಿ ನಡೆಯುತ್ತಾ ಇದೆ. ಆದರೆ ಈ ಕಾರವಾರ ಬಂದರಿನ ವಿಷಯ ಏನಾಯಿತು? ರಾಜ್ಯಪಾಲರ ಭಾಷಣದಲ್ಲಿ ಅದರ ಹೆಸರೇ ಇಲ್ಲ. ಈ ಹೊತ್ತು ಹೊಸಪೇಟೆ ಮತ್ತು ಬಳ್ಳಾರಿ ಈ ಪ್ರದೇಶದಲ್ಲಿ ಸಿಕ್ಕತಕ್ಕ ಅದರನ್ನು ಸಾಗಿಸಲು ನಮಗೆ ಸರಿಯಾದ ಮಾರ್ಗಾನುಕೂಲಗಳಿಲ್ಲ. ಮಂಗಳೂರಿಗೆ ಅಲ್ಲಿಂದ ರೈಲ್ವೆ ಮಾರ್ಗವಿಲ್ಲ; ಆದುದರಿಂದ ಅದುರನ್ನು ಮಂಗಳೂರಿಗೆ ಸಾಗಿಸಲು ಬಹಳ ತೊಂದರೆಯಾಗುತ್ತದೆ. ಈ ಕಾರಣದಿಂದ ಆ ಮಂಗಳೂರು ಬಂದರಿನ ಜೊತೆಗೆ ಇನ್ನೂ ಎರಡು ಮೂರು ಬಂದರುಗಳನ್ನು ಬೆಳೆಸುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಮಹಾಜನ್ ವರದಿಯ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈ ಮಹಾಜನ್ ವರದಿ ಬಂದಮೇಲೆ ನಮ್ಮ ರಾಜ್ಯದ ಹಾಗೂ ಮಹರಾಷ್ಟ್ರದ ಜನರ ಮನಸ್ಸು ಬಹಳ ಕದಡಿ ಹೋಗಿದೆ. ಆದರೆ ಈ ಮಹಾಜನ್ ಕಮಿಷನ್ ನೇಮಕ ಮಾಡಬೇಕೆಂಬ ಚಪಲ ಯಾರಿಗಿತ್ತು ? ಅದನ್ನು ಮಾಡಲೇಬೇಕೆಂದು ಹಟ ಹಿಡಿದವರೂ ಮಹರಾಷ್ಟ್ರೀಯರೇ, ಈಗ ಅದನ್ನು ಒಪ್ಪುವುದಿಲ್ಲ ಎಂದು ವಾದ ಮಾಡತಕ್ಕವರೂ ಅವರೇ. ಅಂದರೆ ಈ ದಿವಸ ಮಹರಾಷ್ಟ್ರೀಯರು ಮಾಡತಕ್ಕ ದೂಷಣೆಗಳನ್ನು ನೋಡಿದರೆ ಅವರು ಯಾವುದನ್ನು ಬೇಡುತ್ತಾರೋ ಅದೆಲ್ಲವನ್ನೂ ಅವರಿಗೆ ಕೊಟ್ಟರೆ ಮಾತ್ರ ಅವರಿಗೆ ಸಮಾಧಾನವಾಗುತ್ತದೆಂಬುದು ಎದ್ದು ಕಾಣಿಸುತ್ತಿದೆ. ಹಾಗೆ ಮಾಡಿದರೆ ಆಗ ಇದೆಲ್ಲವೂ ಸರಿಹೋಗುತ್ತದೆಂದು ಕಂಡುಬರುತ್ತದೆ. ಆದರೆ ಈ ಒಂದು ತಪ್ಪನ್ನು ನಾವು ಯಾರಮೇಲೆ ಹಾಕಬೇಕೋ ತಿಳಿಯದಾಗಿದೆ. ಇದನ್ನು ನಾವು ಕೇಂದ್ರ ಸರ್ಕಾರದ ಮೇಲೆ ಹಾಕೋಣವೇ ಅಥವಾ ನಮ್ಮ ಸರ್ಕಾರದವರ ಮೇಲೆ ಹಾಕೋಣವೇ ಎಂಬುದನ್ನು ತೀರ್ಮಾನ ಮಾಡಬೇಕು. ಇಲ್ಲಿಯವರೆಗೂ ನಾವೂ ಮಹಾರಾಷ್ಟ್ರೀಯರೂ ಅಣ್ಣತಮ್ಮಂದಿರಂತೆ ಇದ್ದೆವು. ಈ ದಿವಸ ಆ ಪ್ರೀತಿ ವಿಶ್ವಾಸಗಳು ಮಾಯವಾಗಿ ನಾವು ಒಬ್ಬರನ್ನೊಬ್ಬರು ವೈರಿಗಳಂತೆ ಕಾಣುತ್ತಿದ್ದೇವೆ. ಈಗಲಾದರೂ ಸರ್ಕಾರದವರು ಖಚಿತವಾಗಿ ಈ ಮಹಾಜನ್ ತೀರ್ಪನ್ನು ಅನುಮೋದಿಸಿ ಅದನ್ನು ಜಾರಿಗೆ ತರಬೇಕು, ಇಲ್ಲವೇ ಈಗಿದ್ದ ಹಾಗೇ ಇದೇ ಸ್ಟೇಟಸ್ ಕೋ ಇನ್ನು ಮುಂದಕ್ಕೂ ಖಚಿತವಾಗಿರುತ್ತದೆ ಎಂಬುದನ್ನು ತೀವ್ರವಾಗಿ ನಿರ್ಧರ ಮಾಡಬೇಕು. ಹಾಗೆ ನಿರ್ಧರ ಮಾಡಿ ಇದಕ್ಕೆ ಒಂದು ಪೂರ್ಣವಿರಾಮ ಹಾಕಬೇಕೆಂದು ಹೇಳಿ ಈ ವಂದನಾ ನಿರ್ಣಯಕ್ಕೆ ನನ್ನ ಅನುಮೋದನೆಯನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ತಾಯಿ ಅಧ್ಯಕ್ಷಣಿಯರೇ, ನಮ್ಮಲ್ಲಿ ಒಂದು ಗಾದೆ ಇದೆ—ಹೆತ್ತವರಿಗೆ ಹೆಗ್ಗಣ ಮುದ್ದು, ಕೂಡಿದವರಿಗೆ ಕೋಡಗ ಮುದ್ದು—ಎಂದು. ಈ ಗಾದೆಗನುಸಾರವಾಗಿದೆ ನಮ್ಮ ರಾಜ್ಯಪಾಲರ ಭಾಷಣ.

ಉಪಾಧ್ಯಕ್ಷರು.—ಅದರಲ್ಲಿ ನೀವೂ ಕೂಡಿದ್ದೀರಿ ಅಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ಹೌದು, ಅದು ನಮಗೂ ನಿಮಗೂ ಎಲ್ಲರಿಗೂ ಅನ್ವಯಿಸುತ್ತದೆ. ಈ ದಿವಸ ನಮ್ಮ ರಾಜ್ಯಕ್ಕೆ ಏನೋ ಒಂದು ಶುಭ ಸೂಚನೆ ಕಂಡುಬರುವ ಹಾಗೆ ಕಾಣಬರುತ್ತಿದೆ. ಈ ದಿವಸ ನಮ್ಮ ಎದುರು ಪಕ್ಷದ ಸದಸ್ಯರಾದ ಶ್ರೀಮಾನ್ ಪಂಚಗಾವಿಯವರು ಮತ್ತು ಶ್ರೀಮಾನ್ ಎಸ್. ಎಂ. ಗುರೆಡ್ಡಿಯವರೂ ಸಹಾ ಇಷ್ಟಾದರೂ ಪ್ರಾಮಾಣಿಕತೆಯಿಂದ ಸರ್ಕಾರದಲ್ಲಿರತಕ್ಕ ಆಡಳಿತ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸುತ್ತೇನೆ.

ಇನ್ನು ಕೃಷ್ಣಾ ನದಿಯ ನೀರಿನ ವಿಚಾರಕ್ಕೆ ಬಂದರೆ ನಮ್ಮನ್ನು ಕಾಡಿಗೆ ಕಣ್ಣು ಕಟ್ಟಿ ಬಿಟ್ಟ ಹಾಗೆ ಆಗಿದೆ. ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ನೆಗೋಷಿಯೇಟ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದರು. ಆದರೆ ಕೇಂದ್ರದವರು ಇದರ ವಿಚಾರದಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುವಂತೆ ಕಂಡುಬರುತ್ತಿಲ್ಲ. ಆದರೆ ಇತ್ತೀಚೆಗೆ ಅದೇನೋ ನಮ್ಮ ಸರ್ಕಾರದವರು ಬಹಳ ತರಾತುರಿಯಿಂದ ಲಾ ಇಲಾಖೆಯಿಂದ ಕಾಗದಪತ್ರಗಳನ್ನು ತರಿಸಿಕೊಳ್ಳುತ್ತಿದ್ದಾ

(ಶ್ರೀ ಎಚ್. ಎನ್. ನಂಜೇಗೌಡ)

ರೆಂದು ನಾನು ಸುದ್ದಿಯನ್ನು ಕೇಳುತ್ತಿದ್ದೇನೆ. ಈ ವಿವಾದವನ್ನು ಉಭಯ ರಾಜ್ಯಗಳವರೂ ಕುಳಿತು ಒಂದು ಒಮ್ಮತದಿಂದ ಒಂದು ತೀರ್ಮಾನಕ್ಕೆ ಬರಬೇಕು. ಹಾಗೆ ಒಂದು ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲವೆನ್ನುವುದಾದರೆ ಕೂಡಲೆ ನಮ್ಮ ಸರ್ಕಾರದವರು ಇದನ್ನು ಒಂದು ಟ್ರೈಬುನಲ್ಲಿಗೆ ರೆಫರ್ ಮಾಡಬೇಕು. ಅದನ್ನು ಮಾಡುತ್ತೇವೆಂದು ಕಳೆದ ಡಿಶೆಂಬರ್ 18 ನೇ ತಾರೀಖಿನಲ್ಲೇ ನಮ್ಮ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದರು. ನಾವು ಈ ಪ್ರಶ್ನೆಯನ್ನು ಒಂದು ತೀವ್ರಗತಿಯಿಂದ ಟ್ರೈಬುನಲ್‌ಗೆ ರೆಫರ್ ಮಾಡದಿದ್ದರೆ ನಮ್ಮ ಹಕ್ಕುಬಾಧ್ಯತೆಗಳು ಉಳಿಯುವುದಿಲ್ಲ, ನಾವು ಇದನ್ನು ತೀವ್ರಗತಿಯಿಂದ ಮಾಡುತ್ತೇವೆಂದು ಹೇಳಿದ್ದರು. ಅಷ್ಟೇ ಅಲ್ಲದೆ ಕೇಂದ್ರ ಸರ್ಕಾರದವರು ಇದನ್ನು ಒಂದು ಟ್ರೈಬುನಲ್ಲಿಗೆ ರೆಫರ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಪಕ್ಷದಲ್ಲಿ ನಾವು ಮುಂದೆ ಈ ವಿಚಾರದಲ್ಲಿ ಏನು ಮಾಡಬೇಕು ಎಂಬುದನ್ನೂ ಕೂಡ ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆಂದು ಆ ದಿವಸ ಹೇಳಿದ್ದರು. ಆದರೆ ನಮ್ಮ ಸರ್ಕಾರದವರು ಹೇಳುತ್ತಿರುವಂತೆ ಇದರಲ್ಲಿ ಇಷ್ಟು ದೀರ್ಘಕಾಲ ಅಲೋಚನೆ ಮಾಡತಕ್ಕದ್ದಾದರೂ ಏನಿದೆ ? ಈಗ ಉಳಿದಿರತಕ್ಕದ್ದು ನಮಗೆ ಒಂದು ರಿಟ್ ಆಫ್ ಮ್ಯಾಂಡಮಸ್ ಹಾಕುವುದು ಅಥವಾ ಇನ್ನೊಂದು ರಿಟ್ ಕೇಸನ್ನು ಹಾಕುವುದು ಇದನ್ನು ಬಿಟ್ಟರೆ ಇನ್ನು ಅಲೋಚನೆ ಮಾಡುವುದೇನು ಉಳಿದಿಲ್ಲ. ಪರಿಸ್ಥಿತಿ ಹೀಗಿದ್ದರೂ ಸರ್ಕಾರದವರು ಅರ್ಜಿಗಳು ಭಾರಿ ತರಾತುರಿಯಿಂದ ಓಡಾಡುತ್ತಿವೆ ಎಂದು ಹೇಳಿ ಹೀಗೇ ಕಾಲಹರಣ ಮಾಡುತ್ತಿರುವುದರಿಂದ ಇವರಿಂದ ಈ ಕಾರ್ಯಸಾಧನೆ ಸಾಧ್ಯವಿಲ್ಲವೆಂದು ಕಾಣುತ್ತಿದೆ. ಇವರ ಬರಿಯ ಒಂದು ಅಡ್ವರ್‌ಟೈಜ್‌ಮೆಂಟಿನ ಹೇಳಿಕೆಗಳನ್ನು ಕೇಳುತ್ತಾ ನಾವು ಕುಳಿತದ್ದರಿಂದ ನಮ್ಮ ಹಕ್ಕು ಭಾದ್ಯತೆಗಳು ಈ ದಿವಸ ಗಾಳಿಯಲ್ಲಿ ತೂರಾಡುವಂತಾಗಿದೆ. ಇವರಿಂದ ನಮ್ಮ ರಾಜ್ಯದ ಹಿತಸಾಧನೆಯಾಗುವುದಿಲ್ಲ. ನಮ್ಮ ವಿರೋಧಪಕ್ಷದ ನಾಯಕರು ಎಲ್ಲರನ್ನೂ ಸರ್ಕಾರದವರು ತಮ್ಮ ಒಂದು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಈ ಕಾರ್ಯ ಸಾಧನೆ ಮಾಡಬೇಕೆಂದು ಅನೇಕಾವರ್ತಿ ಇದೇ ಸಭೆಯಲ್ಲಿ ಒತ್ತಿ ಒತ್ತಿ ಹೇಳಿದ್ದಾರೆ. ಅದಾಗ್ಯೂ ನಮ್ಮ ಸರ್ಕಾರ ಇದರ ಬಗ್ಗೆ ತೀವ್ರ ಗಮನವಿತ್ತಂತೆ ಕಾಣುತ್ತಿಲ್ಲ. ಇವರ ಬೇಜಾವಾಬ್ದಾರಿ ವರ್ತನೆಯಿಂದ ನೊಂದಿರತಕ್ಕ ನಮ್ಮ ದೇಶದ ಬಡಜನತೆ ಏನಿದೆ ಅವರ ಶಾಪ ಇವರನ್ನೂ ಆಡಳಿತದಲ್ಲಿರತಕ್ಕವರನ್ನೂ ಸುಡದೇ ಖಂಡಿತ ಬಿಡುವುದಿಲ್ಲ. ಖಂಡಿತವಾಗಿಯೂ ಆ ಶಾಪ ಇವರಿಗೆ ತಟ್ಟೇತಟ್ಟುತ್ತದೆ. ಆದುದರಿಂದ ಈಗಲಾದರೂ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ನಾವಿನ್ನು ಕಾದು ಕುಳಿತುಕೊಳ್ಳಲು ಸಾಧ್ಯವಿಲ್ಲ; ತಕ್ಷಣವೇ ಇದರ ಬಗ್ಗೆ ಒಂದು ರಿಟ್ ಆಫ್ ಮ್ಯಾಂಡಮಸ್ಸನ್ನೊ ಅಥವಾ ಒಂದು ರಿಟ್ ಅರ್ಜಿಯನ್ನೊ ಖಂಡಿತ ಹಾಕುವುದಾಗಿ ಕೂಡಲೆ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ಮತ್ತು ಕೂಡಲೆ ಇದನ್ನು ರಿಟ್ ಮೂಲಕ ಮುಂದುವರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆದರೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ, ಶ್ರೀ ರಾಜಾಪಿಡ್ಡ್ನಾಯ್ಕರವರು ಅ ಅಪ್ಪರ್ ಕೃಷ್ಣಾ ಯೋಜನೆಯ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರದವರು 25 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆಂದು ಹೇಳಿದರು. ಆದರೆ ಅಲ್ಲಿ ಸರ್ಕಾರದವರು 25 ಸಾವಿರ ರೂಪಾಯಿಗಳನ್ನೂ ಕೂಡ ಖರ್ಚುಮಾಡಿಲ್ಲ ಎಂದು ನಾನು ಹೇಳುತ್ತೇನೆ. ಅಲ್ಲಿ ತೋರಿಸಿರತಕ್ಕ ಖರ್ಚುಗಳೆಲ್ಲಾ ಯಾವು ಯಾವುದಕ್ಕೊ ಬರಿ ಒಂದು ಅಡ್ಜಸ್ಟ್‌ಮೆಂಟ್ ಮಾಡಿರತಕ್ಕ ಅಂಕೆಸಂಖ್ಯೆಗಳೇ ವಿನಾ ಅಲ್ಲಿ ಇವರು ಹಣವನ್ನೇನೂ ಖರ್ಚುಮಾಡಿಲ್ಲ. ಇನ್ನು ಆ ಹಾರಂಗಿ ಪ್ರಾಜೆಕ್ಟಿನ ವಿಚಾರದಲ್ಲೂ ಹಾಗೇ ಮಾಡಿದ್ದಾರೆ. ಅಲ್ಲಿಯೂ ಕೂಡ ಹಣವನ್ನೇನೂ ಖರ್ಚುಮಾಡಿಲ್ಲ. ಆದುದರಿಂದ ನಮ್ಮ ಮಂತ್ರಿಮಂಡಲ ಈ ಕೆಲಸ ಕಾರ್ಯಗಳನ್ನು ಮಾಡುತ್ತದೆ ಎನ್ನತಕ್ಕ ಒಂದು ನಂಬಿಕೆ ನಮಗೆ ಸಂಪೂರ್ಣವಾಗಿ ಹೋಗಿಬಿಟ್ಟಿದೆ. ಆದುದರಿಂದ ಅವರಿಗೆ ನಾನು ಈ ವಿಚಾರದಲ್ಲಿ ಏನನ್ನೂ ಹೇಳ ಬಯಸುವುದಿಲ್ಲ. ಆದರೆ ಆ ಆಡಳಿತಪಕ್ಷದ ಮಾನ್ಯ ಸದಸ್ಯರಿಗೆ ಅವರಾದರೂ ಈ ವಿಚಾರದಲ್ಲಿ ತೀವ್ರ ಒತ್ತಾಯ ಮಾಡಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಲಮಟ್ಟಿಯ ಹತ್ತಿರ ಕೆಲಸದಲ್ಲಿದ್ದ ಸುಮಾರು 250 ಜನ ಜೂನಿಯರ್ ಇಂಜಿನಿಯರುಗಳನ್ನು ರಿಟ್ರೆಂಚ್ ಮಾಡಿದ್ದಾರೆ. ಹಾಗೆ ಅಲ್ಲಿ ಕೆಲಸಗಳು ತ್ವರಿತವಾಗಿ ನಡೆಯುತ್ತಿದ್ದರೆ ಇವರೇಕೆ ಆ 250 ಜನ ಜೂನಿಯರ್ ಇಂಜಿನಿಯರುಗಳನ್ನು ರಿಟ್ರೆಂಚ್ ಮಾಡಬೇಕಾಗಿತ್ತು ? ಇದನ್ನು ನೋಡಿದರೆ ನಮ್ಮ ಸರ್ಕಾರಕ್ಕೆ ಈ ಕೆಲಸವನ್ನು ಪೂರ್ಣಗೊಳಿಸಬೇಕೆಂಬ ಆಸೆ ಅವರಿಗಿರುವುದಿಲ್ಲ ಎನ್ನುವುದು ಚೆನ್ನಾಗಿ ಇದರಿಂದ ವ್ಯಕ್ತಪಡುತ್ತಿದೆ. ಆದುದರಿಂದಲೇ ನನಗೆ ಈ ಮಂತ್ರಿಗಳಲ್ಲಿ ವಿಶ್ವಾಸಇಲ್ಲ, ಇವರು ಈ ಕೆಲಸವನ್ನು ಮಾಡುವುದಿಲ್ಲ, ನಮ್ಮ ಹಕ್ಕು ಬಾಧ್ಯತೆಗಳನ್ನು ಇವರು ಕಾಪಾಡುವುದಿಲ್ಲ ಅನ್ನುವುದನ್ನು ಅರಿತೇ ಇವರಿಗೆ ಇನ್ನು ಮುಂದೆ ನಾನೇನೂ ಪ್ರಾರ್ಥನೆ ಮಾಡಿಕೊಳ್ಳುವುದಿಲ್ಲ; ಆ ಪಕ್ಷದ ಸದಸ್ಯರಿಗೆ ಮಾತ್ರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆಂದು ಆಗಲೇ ಹೇಳಿದ್ದೇನೆ.

ಇನ್ನು ಆ ಹಾರಂಗಿಯ ಪ್ರಾಜೆಕ್ಟಿನ ವಿಚಾರಕ್ಕೆ ಬಂದರೆ, ಅಲ್ಲಿಯ ಕೆಲಸಗಳ ಬಗ್ಗೆ ಕಳೆದ ಜನವರಿ 12 ರಲ್ಲಿ ಒಂದಾವರ್ತಿ ಟೆಂಡರುಗಳನ್ನು ಕರೆಯಲಾಯಿತು. ಅದನ್ನು ಕೈ ಬಿಟ್ಟು ಪುನಃ ಫೆಬ್ರವರಿ ತಿಂಗಳು 12 ರಲ್ಲಿ ಮತ್ತೊಮ್ಮೆ ಟೆಂಡರನ್ನೂ ಕರೆದರು. ಆಗಲೂ ಇವರು ಅವುಗಳನ್ನು ಒಪ್ಪಲಿಲ್ಲ. ಬಹುಶಃ ಮಾನ್ಯ ಮಂತ್ರಿಗಳಿಗೆ ಬೇಕಾದವರು ಯಾರೋ ಟೆಂಡರನ್ನು ಹಾಕದೆ ಇದ್ದುದರಿಂದ ಎರಡು ಸಾರ್ತಿ ಕರೆದಿದ್ದ ಟೆಂಡರುಗಳನ್ನೂ ಇವರು ರಿಜೆಕ್ಟ್ ಮಾಡಿದರೆಂದು ಕಂಡುಬರುತ್ತದೆ. ಹಾಗೆ ಇವರು ನಿಸ್ಪೃಹರಾಗಿದ್ದರೇಕೆ ಎರಡು ಸಾರ್ತಿ ಕರೆದ ಟೆಂಡರುಗಳನ್ನು ಇವರು ಓಪನ್ ಮಾಡಲಿಲ್ಲ ? ಇದನ್ನು ಸಭೆಗೆ ವಿವರವಾಗಿ ತಿಳಿಸಬೇಕು. ನಾವು ಇಲ್ಲಿ ಏನೇ ಮಾತನಾಡಿರಲಿ, ಎಷ್ಟೇ ದಾಖಲೆಗಳನ್ನು ಕೊಟ್ಟಿರಲಿ ಅವೆಲ್ಲವನ್ನೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮೂಲೆಗೆ ತಳ್ಳಿ ಆ ವಿಷಯಗಳಿಗೊಂದಕ್ಕೂ ಸ್ಪಷ್ಟವಾದ ಉತ್ತರವನ್ನು ಕೊಡದೆ ತೇಲಿಸಿ ತ್ಯಾಪೆ ಮಾತುಗಳ ಉತ್ತರವನ್ನು ಕೊಡುತ್ತಿದ್ದಾರೆ. ಇದೇ ರೀತಿಯ ಉತ್ತರಗಳನ್ನು ಇನ್ನು ಮುಂದಕ್ಕೂ ಅವರು ಕೊಡುತ್ತಾ ಹೋದರೆ ನಾವು ಇನ್ನು ಮುಂದೆ ಸುಮ್ಮನಿರುವುದಕ್ಕಾಗುವುದಿಲ್ಲ. ಹೇಮಾವತಿ ವಿಚಾರದಲ್ಲಿ ಟೆಂಡರನ್ನು ಕರೆದಿದ್ದರು. ಅಲ್ಲಿಯ ಕೆಲಸಕಾರ್ಯಗಳನ್ನು ಕನ್ನಯ್ಯ ಅಂಡ್ ಕಂಪೆನಿಗೆ ವಹಿಸಿದರು. ಅವರು ಅವರಲ್ಲಿದ್ದ ಮೆಷಿನರಿಗಳಿಗೆ ಹಾಕಿದ್ದ ಬಂಡವಾಳವನ್ನು ಬಿಟ್ಟರೆ ಅವರಲ್ಲಿ ಇನ್ನೇನೂ ಇಲ್ಲ. ಅವರು ಅರ್ನೆಸ್ಟ್‌ಮನಿಯನ್ನೂ ಕೂಡ ಕೊಟ್ಟಿಲ್ಲ. ಆವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿನಿಂತಿರುವ ಬಿಲ್‌ಗಳ ಬಗ್ಗೆ 80 ಸಾವಿರ ರೂಪಾಯಿ ಹಾಗೇ ಬಾಕಿನಿಂತಿದೆ.

ಏತಕ್ಕಾಗಿ ಸರ್ಕಾರ ಹೀಗೆ ಮಾಡುತ್ತಿದೆ ? 80 ಸಾವಿರ ಅವರು ಕೊಡಬೇಕಾಗಿರುವಾಗ ಅವರಿಗೆ ಆ ರೀತಿ ಕೊಡಬೇಕಾದ ಔಚಿತ್ಯವೇನಿತ್ತು ಎಂಬುದಾಗಿ ಮಂತ್ರಿಗಳಿಗೆ ಹೇಳಿದ್ದೇನೆ. ಆದರೂ ಇವರು ಸುಮ್ಮನೆ ಇರಬೇಕಾದರೆ ಇವರು ಎಷ್ಟು ಲಂಚ ತೆಗೆದುಕೊಂಡಿದ್ದಾರೆ ? 1924ರ ಕರಾರು ವಿಷಯಕ್ಕೆ ಈ ಸಭೆಯಲ್ಲಿ ಉತ್ತರ ಕೊಡಿಸಿದ್ದಾರೆ. ಆ ಕರಾರನ್ನು ನಾವು ರಿವೈವ್ ಮಾಡುವುದಕ್ಕಾಗುವುದಿಲ್ಲ. 1974ರಲ್ಲಿ ಅದನ್ನು ರಿವೈವ್ ಮಾಡಬೇಕು, ಅದಕ್ಕೋಸ್ಕರ ಚೀಫ್ ಇಂಜನಿಯರ್ ಅವರಿಗೆ ಸಂಬಂಧಪಟ್ಟಹಾಗೆ ಹೈಪವರ್ ಕಮಿಟಿಯನ್ನು ನೇಮಕಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಅವರು ನಾಲ್ಕು ವಾಲ್ಯೂಮ್‌ಗಳ ವರದಿಯನ್ನು ಕೊಟ್ಟಿದ್ದಾರೆ. ಇನ್ನೂ 5ನೇ ವಾಲ್ಯೂಂ ಆಗುತ್ತಿದೆಯೆಂದು ಹೇಳಿದ್ದಾರೆ. ಆ ಒಂದು ಕಮಿಟಿಯವರು ಒಂದು ವರದಿಯನ್ನು ಮಾಡಿದ್ದರೂ ಅದನ್ನು ಕಸದ ಬುಟ್ಟಿಗೆ ಹಾಕಿದ್ದಾರೆ. ಇವರಿಗೆ ಎಲ್ಲೋ ನಮ್ಮ ನದಿಗಳ ನೀರನ್ನು ಉಪಯೋಗಿಸಬೇಕು ಎಂದು ಇಚ್ಛೆ ಇಲ್ಲವೆಂದು ಕಾಣುತ್ತದೆ. ಕಮಿಟಿಗಳನ್ನು ಸುಮ್ಮನೆ ನೇಮಕ ಮಾಡಿ ಏಕೆ ಆ ರೀತಿ ಮಾಡಬೇಕು ? 1974ರಲ್ಲಿ ಆ ನೀರನ್ನು ಉಪಯೋಗಿಸುವುದಕ್ಕೆ ಅವಕಾಶವಿದೆ. ಸರ್ಕಾರ ಹಣದ ಅಭಾವ, ಹಣವಿಲ್ಲ, ಹಣವಿಲ್ಲವೆಂದು ಹೇಳುತ್ತಾರೆ. ಕಂದಾಯ ಮಂತ್ರಿಗಳು ಉತ್ತರ ಕೊಡುವಾಗ ರೈತರು ದುಡ್ಡು ಕೊಟ್ಟರೆ ನಾವು ಕೆಲಸಮಾಡಿಸುತ್ತೇವೆಂದು ಹೇಳಿದರು. ಸರ್ಕಾರಕ್ಕೆ ಹಣವಿಲ್ಲವೆಂದು ಹೇಳುವಾಗ ಅವರ ಕಷ್ಟವನ್ನು ಅರ್ಥಮಾಡಿಕೊಳ್ಳೋಣ. ಅದಕ್ಕೆ ಒಂದು ಸಲಹೆ ಕೊಡುತ್ತೇನೆ. ಪ್ರಾಮಾಣಿಕವಾಗಿ ಹೇಳುವುದಾದರೆ, ಸರ್ಕಾರಕ್ಕೆ ಕೆಲವು ವಿಷಯಗಳಲ್ಲಿ ತೀವ್ರವಾದ ತೊಂದರೆ ಇದೆಯೆಂಬುದನ್ನು ಒಪ್ಪಿಕೊಳ್ಳುತ್ತೇನೆ. ರಿಜರ್‌ವಾಯರ್ ಪ್ರಾಜೆಕ್ಟ್‌ಗಳ ಬಗ್ಗೆ ಡಿಬೆಂಚರ್ಸ್ ಎಂಬುದಾಗಿ ಬ್ಯಾಂಕುಗಳಲ್ಲಿ ಸರ್ಕಾರ ಒಂದು ಲೆಕ್ಕವನ್ನು ಓಪನ್ ಮಾಡಲಿ. ಹೇಮಾವತಿ, ಹಾರಂಗಿ ಪ್ರಾಜೆಕ್ಟ್‌ಗಳ ಬಗ್ಗೆಯೂ ಎಲ್ಲಾ ಬ್ಯಾಂಕುಗಳಿಂದ ಕೋಟ್ಯಾಂತರ ರೂಪಾಯಿಗಳಷ್ಟು ಸಾಲ ಪಡೆಯಬಹುದು. ಸುಮಾರು 20 ಅಥವಾ 30 ಕೋಟಿ ರೂಪಾಯಿಗಳಷ್ಟು ಸಾಲವನ್ನು ಸರ್ಕಾರ ಬ್ಯಾಂಕುಗಳಿಂದ ಪಡೆಯಲಿ. ವರ್ಷಂಪ್ರತಿ ನಾವು ಕೊಡುವ ಕಂಟ್ರಿಬ್ಯೂಷನ್ನಿನಲ್ಲಿ ಆ ಸಾಲಕ್ಕೆ ಸೇಕಡ 5-6ರಷ್ಟು ಬಡ್ಡಿ ಕೊಟ್ಟು ತೀರಿಸಬಹುದು. ಮಾನ್ಯ ಮಂತ್ರಿಗಳು ಈ ವಿಚಾರವನ್ನು ತಮ್ಮ ಕಿವಿಗೆ ಹಾಕಿಕೊಂಡು ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಲ್ಯಾಂಡ್ ರೆವಿನ್ಯೂ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಹೋದಸಾರಿ ಬಜೆಟ್ ಅಧಿವೇಶನದಲ್ಲಿ ಭೂಕಂದಾಯವನ್ನು ರದ್ದುಮಾಡುತ್ತೇವೆಂದು ಹೇಳಿದರು. ಈ ಸಭೆಯಲ್ಲಿಯೂ ಹೇಳಿದ್ದಾರೆ. ನಮ್ಮ ನಾಯಕರು ಈ ವಿಚಾರದಲ್ಲಿ ಕೇಳಿದಾಗ ಏಕೆ ವಿಳಂಬವಾಗುತ್ತಿದೆಯೆಂದು ಪ್ರಶ್ನೆ ಹಾಕಿದಾಗ ರೆವಿನ್ಯೂ ಮಂತ್ರಿಗಳು ಮದ್ರಾಸ್ ಮತ್ತು ಕೇರಳಾ ರಾಜ್ಯಗಳಲ್ಲಿ ಯಾವ ರೀತಿ ಅಲ್ಲಿನ ಕಾನೂನುಗಳನ್ನು ಸಡಿಲಗೊಳಿಸಿದ್ದಾರೆಂಬುದನ್ನು ನೋಡಬೇಕಾಗಿದೆ, ಅಲ್ಲಿನ ಕಾನೂನುಗಳನ್ನು ತರಿಸಿಕೊಂಡು ಓದುತ್ತಿದ್ದೇವೆಂದು ಹೇಳಿದರು. ಅಂದಮೇಲೆ ಇವರಿಗೆ ನಿಜವಾಗಿ ಭೂಕಂದಾಯವನ್ನು ರದ್ದುಮಾಡುವುದಕ್ಕೆ ಮನಸ್ಸು ಇಲ್ಲವೆಂದು ನಾನು ಹೇಳಬೇಕಾಗಿದೆ.

ಶ್ರೀ ಬಿ. ರಾಚಯ್ಯ (ಕಂದಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಮೇಲ್ಮನೆಯಲ್ಲಿ ಹೇಳಿಕೊಂಡಿದ್ದೇನೆ. ತಾರೀಖು 23ನೇ ಡಿಸೆಂಬರ್ 1967 ರಲ್ಲಿ ಒಂದು ವಿಚಾರವನ್ನು ಅಲ್ಲಿ ಹೇಳಿದೆ. ಮದ್ರಾಸ್ ಮತ್ತು ಕೇರಳಾ ಇತ್ಯಾದಿ ರಾಜ್ಯಗಳಲ್ಲಿ

(ಶ್ರೀ ಬಿ. ರಾಚಯ್ಯ)

ಭೂಕಂದಾಯ ರದ್ದು ಮಾಡುವ ಬಗ್ಗೆ ಹಾಗೂ ರಿಲ್ಯಾಕ್ಸ್ ಮಾಡುವ ಬಗ್ಗೆ ಸಂಬಂಧಪಟ್ಟ ಕಾನೂನುಗಳನ್ನು ತರಿಸಿ ಓದುತ್ತಿದ್ದೇವೆ. ಈ ಭೂಕಂದಾಯ ರದ್ದು ಮಾಡುವ ಬಗ್ಗೆ ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಸಂಬಂಧಪಟ್ಟ ಕಾನೂನುಗಳನ್ನು ಮಂಡಿಸುವ ಆಲೋಚನೆ ಇದೆ ಎಂದು ಹೇಳಿದ್ದೇವೆ. ಅಂದಮೇಲೆ ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ಸರ್ಕಾರಕ್ಕೆ ಮನಸ್ಸು ಇಲ್ಲವೆಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಆ ರೀತಿ ಮಾಡುವುದಾದರೆ ನಿಮಗೆ ಚಿರಋಣಿಗಳು. ಬಡ ರೈತರ ಪರವಾಗಿ ನಾನು ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ಯೋಜನಾ ಮಂಡಲಿಯಲ್ಲಿ ಇದರ ಬಗ್ಗೆ ಒಂದು ಮೀಟಿಂಗ್ ಸಹ ಆಗಿದೆ. ಅಲ್ಲಿ ಇದರ ಬಗ್ಗೆ ಸರ್ಕಾರದ ತೀರ್ಮಾನವನ್ನು ಈಗ ಪುನರ್ಪರಿಶೀಲಿಸಬೇಕು ಎಂದು ತಿಳಿಸಿದ್ದರೂ ಭೂಕಂದಾಯ ರದ್ದುಗೊಳಿಸುವುದಕ್ಕೆ ಜನಾಭಿಪ್ರಾಯ ವಿರೋಧಕರವಾಗಿದೆಯೆಂದು ಹೇಳಿದ್ದಾರೆ. ಜನಾಭಿಪ್ರಾಯ ಅಂದರೆ ರೈತರಲ್ಲಿ ಎಷ್ಟು ಸಾವಿರ ಜನ, ಎಷ್ಟು ಲಕ್ಷ ಜನ, ಎಷ್ಟು ಕೋಟಿ ಜನ ಭೂಕಂದಾಯವನ್ನು ರದ್ದುಮಾಡಬೇಡಿ ಎಂದು ಹೇಳಿದ್ದಾರೆ, ಯಾವ ರೈತ ಸಂಘಗಳು, ಇದನ್ನು ಡಬ್ಬಲ್ ಮಾಡಿ, ಟ್ರಿಬ್ಬಲ್ ಮಾಡಿ, ಮನೆ ಹಾಳು ಮಾಡಿ ಎಂದು ಮನವಿಗಳನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಿ.

ಶ್ರೀ ಬಿ. ರಾಚಯ್ಯ.—ನಮ್ಮ ಮನೆ ಹಾಳುಮಾಡಿ ಎಂದು ಯಾರೂ ಕೊಟ್ಟಿಲ್ಲ. ರಿಕ್ಲಾಸಿಫಿಕೇಷನ್ನಿನಲ್ಲಿ ಎಲ್ಲೆಲ್ಲಿ ದುಬಾರಿಯಾಗಿದೆಯೋ ಅದನ್ನು ವ್ಯತ್ಯಾಸಮಾಡಿ. ರೈತರಿಗೆ ಕಿರುಕುಳ ಕೊಡುವ ರೀತಿಯಲ್ಲಿ ಕಂದಾಯ ಹಾಕಿದರೆ ಬೇಡವೆಂದು ಹೇಳಿದ್ದಾರೆ. ಬೇರೆ ರೀತಿಯಲ್ಲಿ ತೊಂದರೆಯಾಗದ ಹಾಗೆ ಕಂದಾಯ ಹಾಕಿ ಎಂಬುದಾಗಿ ಮನವಿಗಳು ಬಂದಿವೆ. ರೈತರೂ ಆ ರೀತಿ ಹೇಳಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಭೂಕಂದಾಯ ತೆಗೆದುಹಾಕಬೇಕು ಎಂದು ಆ ಪಕ್ಷ ಈ ಪಕ್ಷ ಹೇಳಿದ್ದಾರೆ ಎಂದು ಹೇಳುತ್ತಾರೆ. ಈ ಸಭೆ ಇಡೀ ರಾಜ್ಯವನ್ನು ಪ್ರತಿಬಿಂಬಿಸುತ್ತದೆ. ಭೂಕಂದಾಯ ರದ್ದುಮಾಡಬೇಕೆಂದು ಪ್ರಾರ್ಥನೆ ಮಾಡುವುದಕ್ಕೆ ಜನಾಭಿಪ್ರಾಯ ಪ್ರತಿಬಿಂಬಿಸತಕ್ಕ ಈ ಸಭೆಗಿಂತ ಇನ್ನೊಂದು ಸಂಘ ಸಂಸ್ಥೆ ಇಲ್ಲ. ಆ ರೀತಿ ಇದ್ದರೆ ನಮಗೆ ತಿಳಿಸಿ.

ಶ್ರೀ ಎಚ್. ಎನ್. ನಂಜೇಗೌಡ.—ಆ ಒಂದು ಮಾತು ಆಡಿದಮೇಲೆ ಸರ್ಕಾರಕ್ಕೆ ಶಕ್ತಿ ಇದ್ದು ಹೇಳಬೇಕು. ಭೂಕಂದಾಯ ಜನಾಭಿಪ್ರಾಯ ಪಡೆಯದೆ ರದ್ದುಮಾಡುವ ಹಕ್ಕು ಸರ್ಕಾರದವರಿಗೆ ಇಲ್ಲವೆಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಆದ್ದರಿಂದ ತಮ್ಮನ್ನು ಪ್ರಾರ್ಥನೆಮಾಡುತ್ತೇನೆ, ದಯವಿಟ್ಟು ಭೂಕಂದಾಯವನ್ನು ರದ್ದುಮಾಡಿ.

ಶ್ರೀ ಬಿ. ರಾಚಯ್ಯ.—ನಾನು ಏನು ಹೇಳಬೇಕೆಂದಿದ್ದೆನೋ ಅದನ್ನು ಅವರೇ ಹೇಳುತ್ತಿದ್ದಾರೆ. ನೋಡೋಣ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮಂತ್ರಿಗಳು ಭೂಕಂದಾಯ ರದ್ದುಮಾಡಬೇಕು. ಅದನ್ನು ಇಡೀ ಜನತೆಯ ಪರವಾಗಿ ಹೇಳುತ್ತಿದ್ದೇನೆ. ಜನಾಭಿಪ್ರಾಯವನ್ನೂ ಸಹ ಪಡೆಯಬೇಕು. ಭೂಕಂದಾಯ ರದ್ದುಮಾಡಬೇಕು, ಕಂದಾಯ ಪೂರ್ತಿಯಾಗಿ ವಜಾಮಾಡಬೇಕು ಆದರೆ ಖಾತೆ ಎಕ್ಸ್‌ಟ್ರ್ಯಾಕ್ಟ್ಸ್ ಅವನ್ನೆಲ್ಲಾ ಮೇಂಟನೆನ್ಸ್ ಮಾಡುವುದಕ್ಕೆ ಸ್ವಲ್ಪಮಟ್ಟಿಗೆ ಕಂದಾಯ ಹಾಕುವುದನ್ನು ಇಟ್ಟುಕೊಳ್ಳಿ.

ಶ್ರೀ ಡಿ. ದೇವರಾಜ್ ಅರಸ್.—ಭೂಕಂದಾಯವನ್ನು ರದ್ದುಮಾಡಿದರೆ ಅದರ ಬದಲಾಗಿ ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ.—ಅದಕ್ಕೇನು ಮಾಡಬೇಕೆಂಬುದನ್ನು ನಾವು ಹೇಳುವುದಕ್ಕೆ ಹೊರಟರೆ ಎಷ್ಟೋ ಹೇಳಬಹುದು. ನೀವು ಏನು ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಡಿ. ದೇವರಾಜ್ ಅರಸ್.—ನಿಮಗೆ ಗೊತ್ತಿರುವುದು ಹೇಳಿ. ನಾವು ಮಾಡುವುದನ್ನು ಮಾಡುತ್ತೇವೆ. ಸರ್ಕಾರಕ್ಕೆ ಹಣವಿಲ್ಲ. ಹಣದ ಕೊರತೆ ಇದೆ. ಅದರಿಂದ ದೊಡ್ಡದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿಸುವುದು ವಿಳಂಬವಾಗುತ್ತಿದೆ. ನಿಜ. ಮಾನ್ಯ ಸ್ನೇಹಿತರು ಕೊಡುತ್ತಾ ಇರುವ ಸಲಹೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡಬೇಕು ಅಂದರೆ ಸರ್ಕಾರಕ್ಕೆ ಹಣವಿಲ್ಲವೆಂಬುದು ತೊಂದರೆ. ಅವರೂ ಅದನ್ನು ಒಪ್ಪಿಕೊಂಡಿದ್ದಾರೆ. ಸುಮ್ಮನೆ ಭೂಕಂದಾಯ ರದ್ದುಮಾಡಿ ಎಂದು ಹೇಳಿದರು. ಆ ಬಗ್ಗೆ ರಚನಾತ್ಮಕವಾದ ಸಲಹೆಗಳನ್ನು ಮಾನ್ಯ ಸದಸ್ಯರು ಕೊಡಬೇಕು. ಈ ಭೂಕಂದಾಯ

ವನ್ನು ರದ್ದುಮಾಡಬೇಕಾದರೆ ಇದು ಒಂದು ರೂಪಾಯಿ, ನೂರು ರೂಪಾಯಿ, ಲಕ್ಷ ರೂಪಾಯಿಗಳ ಮಾತು ಅಲ್ಲ. ನಾಲ್ಕಾರು ಕೋಟಿ ರೂಪಾಯಿಗಳ ಮಾತು. ಅಷ್ಟು ರೂಪಾಯಿಗಳ ಉತ್ಪತ್ತಿ ಕಂದಾಯದಿಂದ ಬರತಕ್ಕದ್ದನ್ನು ಈಗ ಬಿಡಬೇಕಾದರೆ ಇವತ್ತಿನ ಹಣಕಾಸಿನ ಪರಿಸ್ಥಿತಿ ಹೇಗೆ ಉತ್ತಮವಾಗುತ್ತದೆ? ಅದರ ಬದಲು ರೈತರು ಎಲ್ಲಾ ಒಳ್ಳೆಯವರಿದ್ದಾರೆ, ಎಲ್ಲಾ ಅನುಕೂಲ ವಾಗಿರುವ ಜನರು ಇದ್ದಾರೆ, ಬಡವರನ್ನು ಬಿಡಿ, ದೊಡ್ಡವರನ್ನು ಬಿಡಿ, ಎಂಬುದಾಗಿ ಇಲ್ಲಿ ಮಾನ್ಯ ಸದಸ್ಯರು ಭಾಷಣ ಮಾಡಿದರೆ ಸರಿಯಲ್ಲ. ಮಾನ್ಯ ಸದಸ್ಯರು ಇದರ ಬದಲಿಗೆ ಏನೇನು ಮಾಡ ಬೇಕೆಂಬುದನ್ನು ರಚನಾತ್ಮಕವಾದ ಸಲಹೆಗಳ ಮೂಲಕ ಸರ್ಕಾರಕ್ಕೆ ತಿಳಿಸಲಿ ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಅದನ್ನು ಹೇಳುವುದಕ್ಕೆ ಅವಕಾಶವಿಲ್ಲ. ನಾವು ಹೇಳಿದರೂ ನಿಮ್ಮ ಉದ್ದೇಶವೇನಿತ್ತೆಂದರೆ ಚುನಾವಣೆಯಲ್ಲಿ ನಿಮಗೆ ಜನಗಳು ಓಟನ್ನು ಕೊಡಲಿ ಎಂದು ಕಂದಾಯ ರದ್ದುಮಾಡುತ್ತೇವೆಂದು ಹೇಳಿದ್ದಿರಿ. ಮಿನಿಮಮ್ ಇಷ್ಟು ಎಕರೆ ಅದಕ್ಕಿಂತ ಕಡಮೆ ಜಮೀನಿರುವವರಿಂದ ರಿಕಾರ್ಡ್ಸ್ ಮೇಂಟೆನೆನ್ಸ್‌ಗೆ ಎಷ್ಟು ಬೇಕೋ ಅಷ್ಟು ಕಂದಾಯ ಬರುವಂತೆ ವ್ಯವಸ್ಥೆಮಾಡಿ. ಅದರ ಮೇಲೆ ಇರತಕ್ಕವರಿಗೆ ವ್ಯವಸಾಯ ವರಮಾನ ತೆರಿಗೆಯನ್ನು ಸ್ವಲ್ಪಮಟ್ಟಿಗೆ ಹಾಕಿ. ಅವರಲ್ಲಿ ಅನೇಕರು ಈಗಾಗಲೇ ಗಾಳಿ ಬೀಸುವುದಕ್ಕೆ ಬಂದಿದ್ದಾರೆ. ಕಂದಾಯ ರದ್ದು ಮಾಡಬೇಕು, ವ್ಯವಸಾಯ ವರಮಾನ ತೆರಿಗೆಯನ್ನು ಸ್ವಲ್ಪಮಟ್ಟಿಗೆ ಹಾಕಬೇಕೆಂದು ಈ ಸಭೆಯಲ್ಲಿ ಅನೇಕಬಾರಿ ಹೇಳಿದ್ದೇವೆ. ಆ ರೀತಿ ಮಾಡಿದರೆ ಸರಿಹೋಗುತ್ತದೆ.

ಇನ್ನು ಮೆಡಿಕಲ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಮೆಡಿಕಲ್ ಡಿಪಾರ್ಟ್‌ಮೆಂಟ್‌ಗೆ 1961ನೇ ಇಸವಿಯಿಂದ ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ ಯಾರನ್ನೂ ನೇಮಕಮಾಡಲಿಲ್ಲ. 1961ನೇ ಇಸವಿಯಿಂದೀಚೆಗೆ ಮಾಡಿರುವುದೆಲ್ಲಾ ನೇರವಾಗಿ ಮಂತ್ರಿಗಳೇ ಮಾಡಿದ್ದಾರೆ. ಹಿಂದಿದ್ದ ಆರೋಗ್ಯ ಮಂತ್ರಿಗಳು ಒಂದು ಕೆಲಸ ಮಾಡಿಸಿ ಕೊಡುವುದಕ್ಕೆ ನಾಲ್ಕು ಸಾವಿರ, ಐದು ಸಾವಿರದವರೆಗೆ ಲಂಚ ಹೊಡೆದಿದ್ದಾರೆಂಬುದಾಗಿ ಗೊತ್ತಾಗಿದೆ. ಈ ವಿಚಾರವಾಗಿ ಮಂತ್ರಿಮಂಡಲದಲ್ಲಿ ಈಗ ಒಂದು ಕಮಿಷನ್ನನ್ನು ಅಪಾಯಿಂಟ್ ಮಾಡಲಿ. 1961ರಿಂದೀಚೆಗೆ ಲೆಕ್ಚರರ್ಸನ್ನು ಯಾವ ರೀತಿಯಲ್ಲಿ ನೇಮಕಮಾಡಿದ್ದಾರೆಂಬುದನ್ನು ಹೇಳಲಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಈಗತಾನೆ ಒಂದು ದೊಡ್ಡ ಅಪಾದನೆ ಯನ್ನು ಈ ಸಭೆಯಲ್ಲಿಲ್ಲದ ಮಾಜಿ ಮಂತ್ರಿಗಳೊಬ್ಬರ ಮೇಲೆ ಮಾಡಿದರು. ಆದ್ದರಿಂದ ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುವುದು ಇಷ್ಟೆ. ಈಗ ಅವರು ಮಾಡಿದ ಅಪಾದನೆಯನ್ನು ಸಾಬೀತು ಮಾಡುವುದಕ್ಕೆ ಸಾಕ್ಷ್ಯ ಸಾಹಿತ್ಯಗಳೆಲ್ಲವನ್ನೂ ಇಟ್ಟುಕೊಂಡಿದ್ದಾರೆಯೇ?

10-30 A.M.

ಶ್ರೀ ಎಚ್. ಎನ್. ನಂಜೇಗೌಡ.—ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕಮಾಡಿ ಅವರ ಮುಂದೆ ಹೇಳುತ್ತೇನೆ. ನಿಮ್ಮ ಮುಂದೆ ಹೇಳುವುದಕ್ಕೆ ನಾನು ತಯಾರಾಗಿಲ್ಲ. ನಿಮ್ಮ ಮುಂದೆ ಹೇಳಿದರೆ ನೀವು ಅವನ್ನು ಕಸದ ಬುಟ್ಟಿಗೆ ಬಿಸಾಡುತ್ತೀರಿ. ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುತ್ತಿದ್ದಾರೆಯೆ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಮುಂದೆಯೋ ಅಥವಾ ಯಾರ ಮುಂದೆಯೋ ಯಾರ ಮುಂದೆ ಸರಿಯೆಂದು ಕಾಣುತ್ತದೆಯೋ ಅವರಮುಂದೆ ಹೇಳುವುದಕ್ಕೆ ಸಾಕ್ಷ್ಯ ಸಾಹಿತ್ಯಗಳೊಡನೆ ಆ ಅಪಾದನೆಯನ್ನು ಸಾಬೀತು ಮಾಡುವುದಕ್ಕೆ ತಯಾರಾಗಿರಿ. ಈಗ ನಮ್ಮ ಮುಂದೆ ಹೇಳುವುದಕ್ಕೆ ನೀವು ಹೆದರುತ್ತಿದ್ದೀರಿ?

ಶ್ರೀ ಎಚ್. ಎನ್. ನಂಜೇಗೌಡ.—ಒಂದು ಎನ್‌ಕ್ವೈರಿ ಕಮಿಷನ್ ನೇಮಕ ಮಾಡಿ ಅವರ ಮುಂದೆ ಹೇಳುತ್ತೇನೆ. ನಿಮ್ಮ ಮುಂದೆ ಹೇಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ಮಾತಿನ ಬಗ್ಗೆ ಜವಾಬ್ದಾರಿಯನ್ನು ಅರಿತು ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ.—ಈ ಮೆಡಿಕಲ್ ಇಲಾಖೆಯಲ್ಲಿ 1961ನೇ ಇಸವಿಯಿಂದ ಅಪಾಯಿಂಟ್‌ಮೆಂಟುಗಳನ್ನು ಮಾಡತಕ್ಕ ಸಂದರ್ಭದಲ್ಲಿ ಸರಿಯಾದ ರೀತಿಯಲ್ಲಿ ಮಾಡಿಲ್ಲ. ಅನೇಕ ರೀತಿಯ ಅಕ್ರಮಗಳು ನಡೆದಿವೆ. ತಮಗೆ ಬೇಕಾದವರಿಗೆ ಬೇಗ ಉದ್ಯೋಗಗಳು ಸಿಕ್ಕುತ್ತವೆ. ಇತರರಿಗೆ ವರ್ಷಗಳು ಉರುಳಿದರೂ ಕೆಲಸಗಳು ಸಿಕ್ಕುವುದಿಲ್ಲ. ಬೊಂಬಾಯಿನಲ್ಲಿರತಕ್ಕವರಿಗೆ ತಮಗೆ ಬೇಕಾಗಿರತಕ್ಕವರಿಗೆ ತರಾತುರಿಯಿಂದ ಕೆಲಸಕ್ಕೆ ಆರ್ಡರುಗಳು ಹೋಗಿವೆ. ಬೇಡವಾದವರು

(ಶ್ರೀ ಎಚ್. ಎನ್. ನಂಜೇಗೌಡ)

ಎಫ್.ಆರ್.ಸಿ.ಎಸ್., ಎಂ.ಎಸ್. ಪಾಸು ಮಾಡಿರತಕ್ಕವರಿಗೆ, ಎಂ.ಡಿ. ಪಾಸುಮಾಡಿರತಕ್ಕವರಿಗೆ ಕೆಲಸ ಸಿಕ್ಕದೇ ಇರತಕ್ಕ ಸಂದರ್ಭಗಳು ಇವೆ. ಇದನ್ನು ಬೇಕಾದರೆ ನಾನು ಸಾಬೀತು ಮಾಡುವುದಕ್ಕೆ ತಯಾರಾಗಿದ್ದೇನೆ ಈಗ ನೀವು ಎಂ.ಎಸ್. ಮತ್ತು ಎಂ.ಡಿ. ಕೋರ್ಸುಗಳನ್ನು ಪ್ರಾರಂಭ ಮಾಡಿದ್ದೀರಿ, ಅದನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಇನ್ನೂ ಅಪ್ರೂವ್ ಮಾಡಿಲ್ಲವೆಂದು ನನಗೆ ತಿಳಿದು ಬಂದಿವೆ. ಅದನ್ನು ಅಪ್ರೂವ್ ಮಾಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ರೀತಿ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಅಪ್ರೂವ್ ಮಾಡದೇ ಇರತಕ್ಕ ಭೋಗಸ್ ಡಿಗ್ರಿಗಳನ್ನು ಓಪನ್ ಮಾಡಿ ಏತಕ್ಕೆ ವಿದ್ಯಾರ್ಥಿಗಳ ಕಾಲ ಮತ್ತು ಹಣವನ್ನು ವ್ಯಯ ಮಾಡಿ ಎಂ.ಎಸ್. ಮತ್ತು ಎಂ.ಡಿ. ಡಿಗ್ರಿಗಳನ್ನು ಈ ಸ್ಥಿತಿಗೆ ತಂದಿಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ. ಆದ್ದರಿಂದ ಈ ಎಂ.ಎಸ್. ಮತ್ತು ಎಂ.ಡಿ. ಡಿಗ್ರಿ ಕೋರ್ಸುಗಳನ್ನು ಇಂಡಿಯನ್ ಮೆಡಿಕಲ್ ಕೌನ್ಸಿಲ್ ನವರು ಅಪ್ರೂವ್ ಮಾಡುವಂತೆ ಮಾಡಿ ಇಲ್ಲದಿದ್ದರೆ ಈ ಕೋರ್ಸುಗಳನ್ನು ತೆಗೆದು ಹಾಕಿ ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ಬೆಂಗಳೂರು ಯೂನಿವರ್ಸಿಟಿಯು ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ. ನಾನು ಆಫೀಸಿಗೆ ಹೋಗಿ ತಿಳಿದುಕೊಂಡು ಬಂದಂಥ ವಿಷಯ. ಅಲ್ಲಿ ಒಂದು ಪ್ರೊಫೆಸರ್ ಹುದ್ದೆಗೆ ಅರ್ಜಿಗಳನ್ನು ಕಾಲ್‌ಫಾರ್ ಮಾಡಿದರು. ಅದಕ್ಕೆ ಯಾರೂ ಸರಿಯಾದವರು ಇಂಟರ್‌ವ್ಯೂಗೆ ಬರಲಿಲ್ಲ. ಎಕ್ಸ್‌ಪರ್ಟ್ ಕಮಿಟಿಯವರು ಆ ಯೂನಿವರ್ಸಿಟಿಯಲ್ಲಿದ್ದವರೊಬ್ಬರು ಆ ಸ್ಥಾನಕ್ಕೆ ಲಾಯಕ್ಕಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದರೂ ಕೂಡ ಅವರು ಪಾರ್ಲಿಮೆಂಟರಿ ಮಂತ್ರಿಗಳಿಗೆ ಮತ್ತು ಉಪಕುಲಪತಿಗಳಿಗೆ ಬೇಕಾಗಿದ್ದವರಾದ್ದರಿಂದ ಎಕ್ಸ್‌ಪರ್ಟ್ ಕಮಿಟಿಯವರ ಅಭಿಪ್ರಾಯವನ್ನು ಮುಚ್ಚಿಟ್ಟು, ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಆ ಮನುಷ್ಯನನ್ನು ಪ್ರೊಫೆಸರ್ ಆಗಿ ತೆಗೆದುಕೊಂಡರು.

ಆಮೇಲೆ ಇನ್ನೊಂದು ಸಂದರ್ಭದಲ್ಲಿ ಒಬ್ಬ ರೀಡರು, ಒಬ್ಬ ಪ್ರೊಫೆಸರ್ ಸ್ಥಾನಕ್ಕೆ ಅರ್ಜಿಗಳನ್ನು ಕಾಲ್‌ಫಾರ್ ಮಾಡಿದ್ದರು. ಆಗ ಇಬ್ಬರು ಇಂಟರ್‌ವ್ಯೂಗೆ ಬಂದಿದ್ದರು. ಪ್ರೊಫೆಸರ್ ಸ್ಥಾನಕ್ಕೆ ಕಾಲ್‌ಫಾರ್ ಮಾಡಿದ್ದಕ್ಕೆ ತಮಗೆ ಬೇಕಾದವರು ಬರಲಿಲ್ಲ. ವೆಂಕಟೇಶ್ವರ ಯೂನಿವರ್ಸಿಟಿಯಿಂದ 9 ವರ್ಷಗಳು ಅನುಭವ ಇರುವವರು ಒಬ್ಬರು ಪ್ರೊಫೆಸರ್ ಸ್ಥಾನಕ್ಕೆ ಇಂಟರ್‌ವ್ಯೂಗೆ ಬಂದಿದ್ದರು. ಆಗ ಏನು ಮಾಡಿದರು ಎಂದರೆ, ತಕ್ಷಣ ರೀಡರ್ ಪೋಸ್ಟಿಗೆ ತೆಗೆದುಕೊಳ್ಳುತ್ತೇವೆ ಪ್ರೊಫೆಸರ್ ಪೋಸ್ಟನ್ನು ಭರ್ತಿ ಮಾಡುವುದಿಲ್ಲ ಆ ಹುದ್ದೆಗೆ ಮುಂದೆ ತೆಗೆದುಕೊಳ್ಳೋಣ ಎಂದು ರೀಡರ್ ಪೋಸ್ಟಿಗೆ ರೆಕಮೆಂಡ್ ಮಾಡುತ್ತೇವೆ ಎಂದು ಹೇಳಿದರು. ಆದರೆ ಅವರು ರೀಡರ್ ಪೋಸ್ಟಿಗೆ ಒಪ್ಪಲಿಲ್ಲ. ಆಮೇಲೆ ತಮಗೆ ಬೇಕಾದ ವ್ಯಕ್ತಿಯನ್ನು ರೀಡರ್ ಪೋಸ್ಟಿಗೆ ತೆಗೆದುಕೊಂಡು ಅವರಿಗೆ ಒಂದು ವರ್ಷದ ಮೇಲೆ ಪ್ರಮೋಷನ್ ಕೊಟ್ಟರು. ಈ ರೀತಿಯಾಗಿ ಅಲ್ಲಿ ರೀಡರುಗಳನ್ನು ಮತ್ತು ಪ್ರೊಫೆಸರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೆಪೋಟಿಜಮ್, ಸ್ವಜನ ಪಕ್ಷಪಾತ, ಅನ್ಯಾಯ ಇವುಗಳೆಲ್ಲವೂ ನಡೆಯುತ್ತಿವೆ. ಈಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುವುದನ್ನು ನೋಡಿದರೆ ಕಲ್ಲನ್ನು ತೆಗೆದುಕೊಂಡು ತಲೆಚಚ್ಚಿಕೊಳ್ಳಬೇಕು. ತಾವು ಬೇಕಾದರೆ ಎಕ್ಸ್‌ಪರ್ಟ್ ಕಮಿಟಿಗೆ ಕಾಗದ ಬರೆದು ತಿಳಿದುಕೊಳ್ಳಿ. ನಾನು ಹೇಳಿದ್ದರಲ್ಲಿ ಕೊಂಚ ಸುಳ್ಳಾದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಇಲ್ಲದೇ ಹೋದರೆ ಮಾನ್ಯ ವಿದ್ಯಾ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು. ಒಟ್ಟಿನಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ವಜನ ಪಕ್ಷಪಾತ, ನೆಪೋಟಿಜಮ್ ಮತ್ತು ಅನ್ಯಾಯಗಳು ನಡೆಯುತ್ತಿವೆ ಎಂದು ನಾನು ಹೇಳುತ್ತೇನೆ.

ಆಮೇಲೆ ರಾಜ್ಯಪಾಲರ ಭಾಷಣದಲ್ಲಿ ಸೆಪ್ಟೆಂಬರ್ 1965ರಲ್ಲಿ ಪಾಕೀಸ್ಥಾನವು ಭಾರತದ ಗಡಿಗಳನ್ನು ಆಕ್ರಮಿಸಿತಷ್ಟೆ; ಇದರಿಂದ ಹಲವಾರು ಘಟನೆಗಳು ತಲೆದೋರಿದುವು ಎಂದು ಹೇಳಿದ್ದಾರೆ. ಇದರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಘಟನೆಗಳು ಸೇರಿಕೊಂಡಿವೆಯೋ ಏನೋ ಗೊತ್ತಿಲ್ಲ. ಪಾಕೀಸ್ಥಾನದಲ್ಲಿ ತಯಾರಾದ ಕೈಬಾಂಬು ಚಿಕ್ಕಮಗಳೂರಿನಲ್ಲಿ ಒಬ್ಬರ ಮನೆಯಲ್ಲಿ ಸಿಕ್ಕಿವೆ. ಇದನ್ನು ಪೋಲೀಸಿನವರೂ, ಪುರಸಭೆಯ ಸದಸ್ಯರು, ಮತ್ತು ಇತರರೂ ಮುಚ್ಚಿಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಪಾಕೀಸ್ಥಾನದ ಏಜೆಂಟರು ನಮ್ಮ ರಾಜ್ಯಕ್ಕೆ ಕೈಬಾಂಬನ್ನು ಒದಗಿಸುತ್ತಿರುವ ಕಾಲದಲ್ಲಿ ನಮ್ಮ ಸರ್ಕಾರದವರು ಈ ಬಗ್ಗೆ ಏನು ಮಾಡುತ್ತಿದ್ದಾರೆಯೋ ಪರಮಾತ್ಮನಿಗೇ ಗೊತ್ತು. ಇಂಥವರ ಕೈಯಲ್ಲಿ ನಮ್ಮ ರಾಜ್ಯದ ಆಡಳಿತವನ್ನು ಕೊಟ್ಟಿರುವಾಗ ನಮ್ಮ ರಾಜ್ಯ ಕ್ಷೇಮವಾಗಿ ಉಳಿಯುತ್ತದೆಯೇ ಎಂದು ಆಲೋಚನೆ ಮಾಡಬೇಕಾಗಿದೆ. ಚಿಕ್ಕಮಗ

ಳೂರಿನಲ್ಲಿ ವರ್ಷಕ್ಕೆ ಒಂದು ಸಾರಿ ದತ್ತಾತ್ರೇಯ ಪೀಠದ "ಉರುಸ್ಸು" ಫೆಸ್ಟಿವಲ್ ನಡೆಯುತ್ತದೆ. ಆಗ ಅಲ್ಲಿ ಸುಮಾರು ಹತ್ತಾರು ಸಾವಿರ ಜನಗಳು ಹಿಂದುಗಳು ಮುಸ್ಲಿಮರು ಸೇರುತ್ತಾರೆ. ಈಗ ಅಲ್ಲಿ ಹಿಂದೂ ಮಹಮದೀಯರ ಗಲಭೆ ನಡೆಯಬಹುದಾದ ಕಾರಣ ಈ ಸಾರಿ ಅಲ್ಲಿ ಉರುಸ್ಸು ನಡೆಯಲು ಅನುಮತಿ ಕೊಡಬಾರದೆಂದು ಸರ್ಕಾರಕ್ಕೂ ಮತ್ತು ರಾಜ್ಯಪಾಲರಿಗೂ ನಾನು ಒಂದು ಕಾಗದವನ್ನು ಬರೆದಿದ್ದೇನೆ. ಚಿಕ್ಕಮಗಳೂರಿನಲ್ಲಿ ಮಹಮದೀಯರ ಸ್ಮಶಾನ ಊರಿನ ಮಧ್ಯದಲ್ಲಿದೆ. ಸುತ್ತಲೂ ಸರ್ಕಾರಿ ಕಟ್ಟಡಗಳು ಇವೆ. ಆ ಪ್ರದೇಶಕ್ಕೆ ಮಹಮದೀಯರು ಹೋಗುವುದಕ್ಕೆ ಸರಿಯಾದ ದಾರಿಯೂ ಇಲ್ಲ. ಅಂಥಾ ಪ್ರದೇಶಕ್ಕೆ ಮಹಮದೀಯರು ತಮ್ಮ ಪೈಕಿ ಸತ್ತವರನ್ನು ಸ್ವರ್ಗಕ್ಕೆ ಕಳುಹಿಸತಕ್ಕಂಥ ಸ್ಮಶಾನ ಕಾರ್ಯವನ್ನು ಮಾಡಬೇಕಾಗಿದೆ. ಇಂಥಾ ಪರಿಸ್ಥಿತಿ ಇರುವುದರಿಂದ ಆ ಸ್ಮಶಾನವನ್ನು ಅಲ್ಲಿಂದ ಬದಲಾಯಿಸಿ ಹಿಂದೂಗಳ ಮತ್ತು ಮಹಮದೀಯರ ಸ್ಮಶಾನಗಳೆರಡನ್ನೂ ಊರಿನಿಂದ ಆಚೆ ಒಂದು ಪೂರ್ವಕ್ಕೆ ಒಂದು ಪಶ್ಚಿಮಕ್ಕೆ ಇರುವಂತೆ ಮಾಡಬೇಕು. ಹಾಗೆ ಮಾಡದಿದ್ದರೆ ನಾನು ಮೊದಲೇ ಹೇಳಿದಂತೆ ಆ ಗಲಭೆ ತಪ್ಪುವ ಹಾಗಿಲ್ಲ. ಅಲ್ಲಿ ಒಬ್ಬರ ಮನೆಯಲ್ಲಿ ಪಾಕೀಸ್ಥಾನದಲ್ಲಿ ತಯಾರಾದ ಕೈಬಾಂಬು ಏನು ಸಿಕ್ಕಿದೆ ಅದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ನಾನು ಒತ್ತಾಯಪೂರ್ವಕವಾಗಿ ಎಚ್ಚರಿಕೆಯ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ.

ಇನ್ನೊಂದು ಮಾತನ್ನು ನಾನು ಹೇಳುತ್ತೇನೆ. ಅದು ಶಿವಪ್ಪನಾಯ್ಕನ ವಿಚಾರ. ಶಿವಮೊಗ್ಗ ಜಿಲ್ಲೆಯಲ್ಲಿ ಬಿದನೂರು ಹಿಂದೆ ಒಂದು ಸಂಪದ್ಭರಿತವಾದ ರಾಜ್ಯವಾಗಿತ್ತು ಎಂದು ಪತ್ರಿಕೆಗಳಲ್ಲಿ ನಾವು ಓದಿದ್ದೇವೆ. ಅಲ್ಲಿ ಒಂದು ಅರಮನೆಯಿದೆ. ಅಲ್ಲಿ ಕೆಲವು ಕ್ರಿಶ್ಚಿಯನ್ ಮಿಷನರಿಗಳು ಬಂದು ಒಂದು ಚರ್ಚ್ ಮಾಡಿ ಆ ಅರಮನೆಯ ಕಾಂಪೌಂಡನ್ನು ಒತ್ತರಿಸಿಕೊಳ್ಳುತ್ತಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಅದು ಪತ್ರಿಕೆಗಳಲ್ಲೂ ಬಂದಿದೆ. ಅರಮನೆ ಸುತ್ತಮುತ್ತಲೂ ಬೇಕಾದಷ್ಟು ಸಂಪತ್ತನ್ನು ಹುದುಗಿಸಿಟ್ಟಿದ್ದಾರೆಂದು ಈಗಲೂ ಪ್ರತೀತಿ ಇದೆ. ಇಂಥಾ ಪ್ರದೇಶವನ್ನು ರಕ್ಷಿತ ಪ್ರದೇಶವೆಂದು ಬ್ರಿಟೀಷಿನವರ ಕಾಲದಲ್ಲೇ ಎಂದರೆ 1933ನೇ ಇಸವಿಯಲ್ಲಿ ಒಬ್ಬ ಡೈರೆಕ್ಟರು ತೀರ್ಮಾನ ಮಾಡಿದ್ದಾರೆ. ಆ ಸ್ಥಳವನ್ನು ನಮಗೆ ಸ್ವಾತಂತ್ರ್ಯ ಬಂದಮೇಲೆ ಆರ್ಕ್ಯಲಾಜಿಕಲ್ ಇಲಾಖೆಯವರು ರಕ್ಷಿತ ಪ್ರದೇಶವೆಂದು ಘೋಷಿಸಿ ಒಂದು ಕಲ್ಲು ಗೋಡೆಯನ್ನು ಹಾಕಿದ್ದಾರೆ. ಈಗ ಕ್ರಿಶ್ಚಿಯನ್ ಮಿಷನರಿಗಳು ಆ ಅರಮನೆಯ ಕಾಂಪೌಂಡನ್ನು ಒತ್ತುವರಿ ಮಾಡಿಕೊಂಡು, ಅಲ್ಲಿ ಭೂಮಿಯಲ್ಲಿ ಹುದುಗಿಕೊಂಡಿರುವ ಸಂಪತ್ತನ್ನೆಲ್ಲಾ ದೋಚಿಕೊಂಡು ಹೋಗಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ. ಸರ್ಕಾರದವರು ಇದನ್ನೆಲ್ಲಾ ಕಣ್ಣುಬಿಟ್ಟು ನೋಡಿ ಇದರ ಬಗ್ಗೆ ಕ್ರಮ ಕೈಗೊಂಡು ಅದನ್ನು ಸರಿಪಡಿಸಬೇಕು. ಅದನ್ನು ನಮ್ಮ ಸರ್ಕಾರದವರು ರಕ್ಷಿತ ಪ್ರದೇಶವೆಂದು ಸಾರಿ ಕ್ರಿಶ್ಚಿಯನ್ ಮಿಷನರಿಗಳು ಒತ್ತುವರಿ ಮಾಡದ ಹಾಗೆ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ರಾಜ್ಯಪಾಲರ ಭಾಷಣವು ಏನೂ ಹುರುಳಿಲ್ಲದ್ದು, ತಿರುಳಿಲ್ಲದ್ದು. ಇದು ಸರ್ಕಾರದ ಒಂದು ಹೊಗಳಿಕೆಯ ಭಾಷಣವಾಗಿದೆ. ಅದನ್ನು ರಾಜ್ಯಪಾಲರವರ ಬಾಯಲ್ಲಿ ಹೇಳಿಸಿದ್ದಾರೆ ಅಷ್ಟೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**Sri D. DEVARAJ URS.**—Mr. Nanje Gowda while speaking has made a specific allegation that the previous Minister has received illegal gratification. That is a wild allegation. I request the Chair to see that it is expunged from the records.

**Sri H. N. NANJE GOWDA.**—I am prepared to prove it.

**Sri D. DEVARAJ URS.**—He cannot get away with the allegation.

**Mr. DEPUTY SPEAKER.**—I will look into the records.

**Sri H. N. NANJE GOWDA.**—Why should he make more than 70 irregular appointments ?

**Mr. DEPUTY SPEAKER.**—When the Hon'ble Member makes allegations, he must do it in a proper manner. The Hon'ble Member has the privilege to criticise and make allegations, but those allegations should be moderate.

Sri D. DEVARAJ URS.—My point is that the Hon'ble Member who has made the allegations should satisfy the Chair and adduce evidence in support of those allegations. Then it will be allright. Otherwise, if he simply makes sweeping remarks and gets away with them, I do not think the House can allow that. He should be called upon to produce records and tell the House what those specific charges are.

ಶ್ರೀ ಎನ್. ಹುಚ್ಚುಮಾಸ್ತಿಗೌಡ (ಹುಲಿಯೂರುದುರ್ಗ).—ಸಭೆಯ ಮಾನ್ಯ ಸದಸ್ಯರು ಜವಾಬ್ದಾರಿಯುತವಾದ ಹೇಳಿಕೆಯನ್ನು ಇಲ್ಲಿ ಕೊಟ್ಟಿರುವಾಗ ಅದನ್ನು ಇವರು ಎಕ್ಸ್‌ಪಂಜ್ ಮಾಡಬೇಕೆಂದು ಹೇಳುವುದು ಸರಿಯಲ್ಲ. ಅವರು ಅದನ್ನು ಹೇಳಿದ್ದಾರೆ. ಅದನ್ನು ಬೇಕಾದರೆ ಅವರು ಪರಿಶೀಲನೆ ಮಾಡಲಿ ಮತ್ತು ಅದನ್ನು ಕಿತ್ತುಹಾಕಿ ಎಂದು ಹೇಳುವುದು ಸರಿಯಲ್ಲ.

Sri D. DEVARAJ URS.—I repeat it. The person against whom allegations are made is not in the House to defend himself in which event the Hon'ble Member should take responsibility to substantiate the specific charges. He cannot simply be allowed to make wild allegations which cannot get in to the records.

Sri DIGAMBAR RAO B. KALMANKAR (Aland).—If the Hon'ble Minister takes the responsibility of appointing a Judicial Enquiry Committee, he is prepared to adduce evidence. He has spoken with all the full sense of responsibility. It is for the Minister to take note of the allegations and appoint an Enquiry Committe. Otherwise, there is no need to have the remarks expunged.

Mr. DEPUTY SPEAKER.—I will look into the records and examine it.

## RULING OF THE CHAIR.

Mr. DEPUTY SPEAKER.—On 21st February 1968, Hon'ble Sri Nanje Gowda objected to a certain proverb in Kannada used by the Chief Minister in his statement. The import of the said proverb is that ' small things should not be made big '. An expression becomes parliamentary or unparliamentry according to the tone and temper in which it is uttered. Good temper and moderation are the characteristics of parliamentary language. Parliamentary language is never more desirable than when a member is canvassing the opinion and conduct of his opponent in debate. There are rulings of our own Assembly that a word by itself cannot be said to be unparliamentary unless it contains some insinuation. The expressions used by the Chief Minister were in a general way to say that small things should not be made big. However, as the Members seem to be objecting to such colloquial proverbs, it is better such proverbs are not used in debate hereafter.

Sri P. F. D'MELLOW (Nominated).—Mr. Speaker, Sir, so much has transpired in this House since the Governor addressed us that it is difficult to deal with his address except to touch on the reference to the law and order situation in the State.

We have now had the Chief Minister explain the Government's view point both in regard to the law and order situation and the language issue as it affects the student world. Seeing that we are to have another opportunity to discuss the language issue when the substantive motion on the subject is introduced I shall not dilate on the three language formula except to the extent necessary to point out with a recent illustration just how certain Central Government Ministers interpret its meaning. Assuming he has been correctly reported in the Press, I am sorry that the Chief Minister should have come to the view that "retired gentlemen who had been brought up in an English atmosphere and background" had some part to play in the explosion that we recently witnessed in the student world, and I am sure that he will come to correct this impression by himself after he has spent a little more time as a permanent resident at Delhi. He will then realise, even as his distinguished predecessor in the office of President of the Congress, Shri Kamraj that he will come across an equally large section of gentlemen and ladies with an English background both at New Delhi at Allahabad, Lucknow and Benares to mention a few cities who are today among the foremost advocates of hastening with the imposition of Hindi. In fact, were the truth known a large number of members in the Hindi bloc in Parliament who insist on an English medium education for their children, are among the foremost protagonists of Hindi. For the moment I shall deal with the views of that large section of law abiding, thinking citizens in the State with very pronounced views, carefully arrived at and whose opinions we cannot ignore. Sir, I assert that public sympathy and support lie entirely with the students mainly because of the failure of the leadership to which they were entitled from their University College Authorities. Public opinion does not support the view that such leadership was not required to assert itself because the language issue as it arose out of the Official Language Amendment Act, 1967 was not an academic one and therefore beyond the purview of the University. The student had trustingly confided his feelings and his aspirations through the many surveys and polls conducted by University College Authorities previously on the question of the longuage media he sought for his education, and he was naturally at a loss when he found the leaders in his University and in the academic world to which he belonged failed him when he needed them most, to speak in his support.

It was only when this leadership had failed him entirely that the way was opened for other elements to rush into fill the breach, elements known to be acting under influences which had been imported into the State from outside.

Mysore, once the envy of the country as a State reputed for its tolerence, understanding and good neighbourliness came under the influence of the new religion of hate which is spreading throughout this land. A religion that demands we destroy and hate whatever fails to appeal to us or what we are unwilling to co-exist with. The new

(SRI P. F. D'MELLOW)

imperialists bent on imposing Hindi naturally looked with envy on this State which knew no hatred of language and the tragedy is that among those who would propagate hatred for language are to be found men occupying responsible positions in the Central Government and in public life.

A leading local newspaper commenting on the recent address of President Zakir Hussain to Parliament observed that the spirit of understanding and mutual accommodation to which the President made pointed reference should be addressed primarily to the Central Government and the Hindi bloc in Parliament. I believe that the general public of our State fully supports this view more especially after reading the Report of the address made by Prof. Sher Singh, Minister of State in the Central Ministry of Education last August, when presiding over the second Convocation of the Karnatak Mahila Hindi Seva Samithi at Bangalore. I invite Hon'ble Members to read that Report for then they will realise how insidiously this new religion of hate from outside the State has been imported.

Minister Prof. Sher Singh, as may be expected, directed his attack ostensibly against English which he claims corrupts and destroys all who come in contact with it. I searched the report of his address to find what place this Central Government Minister had for the Regional Language, but could find no mention of Kannada. Instead it is reported that the Minister had insisted that it was not enough that we should study Hindi but that we should work for its adoption as the language of instruction and legislation. Mark the advice, Hindi to be the language of intruction and legislation, and this to an audience in a State with a regional language even more developed than Hindi. I mention this for it is a typical example of what Ministers of the Central Government coming from Hindi States really mean when they speak of the three language formula.

Perhaps it is not fair to blame Minister Sher Singh when only a little earlier his Chief, the Union Education Minister had bent so far backward in an effort to down-grade English that some of his more ardent admirers in the Hindi States took him at his word and promptly banished English from the language pattern in their States. Dr. Triguna Sen has since then claimed to have seen the light and in an effort to undo some part of the mischief, has warned that the elimination of English would put the country back into the 17th Century. But that is another story, one of Dr. Triguna Sen's acrobatics when trying to shut the lid of Pandora's Box after opening it.

Our Deputy Prime Minister is yet another whose hatred for English blinds him to the necessity of perserving high educational standards. While on the one hand he expresses himself against English in the best traditions of a supreme pontiff, he has been known to advise others not

to express any opinions but leave the question of the medium of instruction to be settled by educationists, and at the same time displaying complete disregard for his own advice.

Sir, I venture to suggest that it is behaviour of this nature that leads our student world to feel infuriated and explode. For, the student and the intellectually honest section of the public are not deceived by leaders in the Central Government who pretend to be unaware of the part that English has played in the history of the Indian National Congress or who profess ignorance of the fact that English today is the medium through which India's battles are being fought at the United Nations, at the Hague, and in all the Capitals of the World. That it is the principal medium through which our scientific and research workers are helping with the economic and industrial development on which the raising of standards of living for our people depend.

The explosion that has taken place in the student world, where honest thinking still prevails, is but the natural reaction of clean-minded people to this new religion of hate for English, which Hindi neo-imperialists have imported into our State where previously all languages co-existed happily.

The Prime Minister desires to revive the National Integration Council, and no one would deny the need for such action. Law abiding citizens are alarmed at the ease with which violence is resorted to and it is asked what will be the fate of the country when more and more political parties come to raise private armies of their own.

Sir, I ask why the Prime Minister should not as a first step set about to implement the unanimous recommendations of the Sampurnanand Emotional Integration Committee to which she was herself a signatory. I believe that these recommendations could well provide means to restoring the question of the language media for higher education to its proper perspective. We should find that after the most careful consideration the Committee came to the conclusion, and rightly so that we could not dispense with English as the means for emotional integration throughout the country.

11-00 A. M.

Sir, I understand that Government has recently mentioned in the other House that most of the recommendations of the Kothari Education Commission have been accepted. I sincerely hope that this does not mean that this House is not to be given an opportunity to discuss those recommendations because I am one of those who believe that were we to examine those recommendations of the Experts on the Kothari Commission as well as the recommendations of the Vice-Chancellors' Conference of September 1967 and read them with the Sampurnanand Emotional Integration Committee, we should find that the student world is not entirely unpatriotic. After all, the future belongs to the young student, not to the adult or to the elders. It is only natural that the student with a clean mind, not yet contaminated with this new religion of hate, would like to view his future from an entirely different perspective.

(SRI P. F. D'MELLOW)

I, therefore, appeal to the Government and to the hon'ble Chief Minister in particular, not to dismiss the considered views of the students, as has been indicated through the several surveys and polls conducted by responsible University and Educational Authorities among our students. Those opinions are the opinions not by any means, of an immature mind. They are based on the advice of the parents and teachers and if we were to continue to pretend indifference or try to ignore the considered views of these clean-minded students, we should only be provoking another incident and be entirely responsible for their actions.

I thank you.

SRI V. N. PATIL (Humnabad).—Mr. Speaker Sir, I am surprised to go through the Governor's Address. It has come to such a level that even the Governor is compelled to do something, he is directed to do something. The Governor is made to say what he should not said and not allowed to say what he must have said. This is entirely the fault of the Government or the Council of Ministers. Not even one word could be found about Socialism in the Governor's Address. This shows that these Congressmen are hypocrites. They profess one thing and practise another They are adepts in deception. The establishment of the socialistic pattern of society, was once upon a time the slogan ; they say that it is their objective at every one of their Session. To-day, they feel ashamed to use that expression in the Governor's Address. There is not a word about socialism in it, lest it may hurt the capitalists and vested interests. The Governor's Address has come to such a ridiculous level that it does not even mention the objectives and accepted policy of the Congress if any to be followed by the Government. There is not one word about socialism by the Governor. The Governor had to say what the policy makers, namely, the Council of Ministers, advised him to say. We regret to say that the Governor's Address has failed to mention not only the day-to-day problems but has also failed to make a reference to the burning issues that are before the State. When the Government have not used the word 'socialism' in the Governor's Address, how can they establish a socialistic pattern of society ? It is clear that this Government is not there to improve the economic levels of people and root out poverty. It seems to exist to serve capitalists, monopolists and usurpers. It is not surprising that they have seized power by unfair, methods, and are trying to keep the Congress Organisation. They have usurped the power by their dubious methods. The Congress wants to survive in power somehow. So, what are the methods ? They have made use of these capitalists, monopolists and usurpers to finance their elections and they have completely forgotten their duty to the people of the State. This Government is interested only in its party and so the Governor's Address is capitalist-oriented to glorify only the Government which does not deserve it. Why is it that there is no mention in it about the policy that the Government is going to adopt for the future

one year or why is it that they have not clarified the policy they have got? We want to hear from the hon'ble Minister, who was so vigorous in thumping the table while answering the hon'ble member from the opposition side, as if none else can do it, the explanation of the Government for this omission. I can say to him that we too can thump the table better than his Party members. But we do not believe in thumping tables. We are not prepared to lose our temper. We believe in parliamentary methods and we want to give constructive suggestions as an eye opener to the power monger party in power. We try to look at the problems of the State in a proper and realistic manner and suggest only the best things that come from our side for their solution. This Government has adopted capitalistic ways and encouraging Birlas and Tatas to dominate the process of the development of the State in monopolist way. During the last few years it has become a fashion for the Government to interpret their sub-service to vested interest and pleased for socialism, democracy and democratic socialism as if they stand by it. They are conniving with bureaucrats to have their own dictatorship.

Sri D. DEVARAJ URS.—The hon'ble Member says that he is a believer in socialism. I take it that he is so. I take it that he has studied how socialism is working in Communist and Socialistic countries. Let him say whether law and order is maintained in those States where socialism prevails or they allow anybody and everybody to do as they like *i.e.*, to commit acts of violence and endanger national solidarity? I want the hon'ble Member to speak on this.

Sri V. N. PATIL.—I pity for the ignorance of the hon'ble Minister. He wants me to be a spokesman of those countries under socialism on the floor of this House, I am a spokesman of my country. I do not want to say anything of other countries. I represent my country, my state, I request only what is best for my country. Let him think of other States and try to copy in our own Country. In Bihar 18 thousand villages suffered without a single drop of water in the worst famine, in India even had during this century. In Bengal even in a famine of lesser magnitude of 35 lakhs people died. But in Bihar in spite of the worst famine not a single citizen of this country was allowed to die of starvation. This was due to the United Front. If congress were in power in Bihar it could have permitted hoarders to mint money and mercilessly it could have exposed lakhs of innocent citizens to starvation death. This will be the fate of our people as long as capitalism rules. I do not propose to be a representative of socialistic countries but definitely assert my sight to preach for socialism. I am a representative of the people of my own Taluk and District and I am prepared to talk only on their behalf.

Mr. DEPUTY SPEAKER.—Why does the member want to make a reference to the State of Bihar?

Sri D. DEVARAJ URS.—The hon'ble Member has yet to learn of Socialistic principles. Mr. Krishnan knows more about them and let him enlighten us.

**Sri M. S. KRISHNAN.**—What the Congress Government has forgotten, we have to remind for implementation.

**Sri V. N. PATIL.**—We have no illusions about socialism to be implemented by you, that is only a catchy slogan for you. We know whom you are representing! Why are you hypocritical? You are representing the monopolistic class; you represent the worst type of anti-national elements. There is a proverb in Urdu :

"Oontre Oont Teeri Konsi Kal Sidhi Hai"

It means 'Oh camel be kind to tell us which part of your body is straight'. So a stage has come and people are asking "Oh congressmen tell us which profession of your's is sincere and honest. You profess one thing and do the contrary. You swear by the people"

and only Exploit the poorer people to enrich the richer.

ಇನ್ನು ಲಾ ಅಂಡ್ ಆರ್ಡರ್ ಬಗ್ಗೆ ಹೇಳಬೇಕಾದರೆ, ಬೆಂಗಳೂರಿನ ವೈಯಾಲಿ ಕಾವಲ್‌ನಲ್ಲಿ ಜನರನ್ನು ಕೊಂದು ಹೆಣಗಳು ಬಿದ್ದಾಗ ನಿಮ್ಮ ಲಾ ಅಂಡ್ ಆರ್ಡರ್ ಎಲ್ಲಿ ಹೋಯಿತು. ಮಧುಗಿರಿ ಪ್ರಕರಣದಬಗ್ಗೆ ಮಾನ ಕಳೆದುಕೊಂಡ ಅಕ್ಕತಂಗಿಯರಲ್ಲಿ ಹೋಗಿ ಕ್ಷಮೆ ಕೇಳುವ ಧೈರ್ಯವನ್ನು ಒಬ್ಬ ಮಂತ್ರಿಗಳೂ ಸಹ ಮಾಡಲಿಲ್ಲ. ನಮ್ಮ ಬಿದರೆ ಜಿಲ್ಲೆಯ ಮಾರ್ಕಲ್ ಹಳ್ಳಿಯಲ್ಲಿ 50 ಗುಡಿಸಲುಗಳನ್ನು ನಾಶಮಾಡಿ ಸಾವಿರ ಜನ ಗಂಡಸರು ಮನೆ ಬಿಟ್ಟು ಹೋಗುವಂತೆ ಮಾಡಿದ್ದಕ್ಕೆ ಕಾರಣರಾದ ಎರಡು ಕಾಂಗ್ರೆಸ್ಸಿಗರ ಪಾರ್ಟಿಯ ಜಗಳದಿಂದ ಗುಡಿಸಿಲಿಗೆ ಬೆಂಕಿ ಬಿದ್ದಾಗ ನಿಮ್ಮ ಲಾ ಅಂಡ್ ಆರ್ಡರ್ ಎಲ್ಲಿ ಹೋಯಿತು? ಅಲ್ಲಿಯ ಜನರು ಮನೆಮಠವಿಲ್ಲದೆ ಇದ್ದಾರೆ. ಚಿಕ್ಕಮಗಳೂರು ಬಗ್ಗೆ ಏನು ಮಾಡಿದ್ದೀರಿ?

**Sri K. H. SRINIVAS** (Sagar).—The hon'ble Minister has commenced his speech in English. I wish he would continue in the same language. Can he continue in a different language? I want a ruling on this point of order.

**Sri V. N. PATIL.**—What has happened at Chickmagalur? Was there any law and order? What protection you gave to the minority people at Chickmagalur? Did you really give protection to those who are entitled for the same as a citizen? Are you not ashamed to attack brutally the innocent public sector worker coming peacefuly in cycle procession. Instead of keeping law and order you tried to break their heads. You are committing blunders. The law and order is rather a mockery and became a handy tool for supression of democratic rights. You are making use of this weapon to crush the opposition. You are encouraging anti-social elements and you are allowing the Police to take more active part in suppressing your political opponents rather than in maintaining the law and order and in breaking the heads of the people in the name of democracy. No Minister is interested to safeguard the interests of the State and the people. Instead they are spoiling the fair chance of the progress of the State. What is there in the Governor's address and it is a jugglary of words. There is nothing about policy matters. I do not know whether you have neglected it or forgotten to give suggestions about policy matters. Not a single word is there about policy matters. It pains us to know whenever an instance occur, it is not the Government that is going to declare an enquiry, but it is the Commissioner of

police who is going to declare that we conduct a Magistrial enquiry. They cannot do that, We on the opposition will certainly help the Government if it is going to conduct judicial enquiry. If you give charge of enquiry to the Police Department, we are not prepared to accept that it will lead to police state. There is a limit for it. When it comes to law and order situation, it amounts to say, that you are smoothening the ground for the dectatorship of the corrupt beaurocrats on account of your political inactivity. Your administration is very loose and you are encouraging an organisation which breaks the heads and such things are not fair in the interests of the Nation at large and particularly of Mysore State. Even if we take Karnataka border dispute, what have you done? In order to show to the people, your Organisation put up a show of stage drama. Some of your leaders offered sathyagraha and wanted to earn the favour of the public by stopping the Trains and getting photographed along with the police officers. If the same type of sathyagraha was offered by any party, you would have shot them there. Your interest was only to gain more sympathies of the public for your party but not in the interest of Karnataka. You wanted to serve your own party. Our Chief Minister's statment sayes at that time one Sri Senapnthi Baput went on hunger strike on the Maharashtra side. The Congress Working Committee took a decision immediately, because he was a Congressman. You should not have allowed it. This is disservice to the State and it cannot be forgotten. Our Chief Minister neither serves the State as Chief Minister nor serves his Organisation as President, by holding two posts. He cannot do both. If he is bent upon doing, he has to do in an half-hearted manner as a part-timer. The Chief Minister's position is very rediculous. We wanted the Chief Minister to resign because we do not want him to work as a part-timer as it is contrary to State's interest. We wanted him to do honest job. Now he cannot do that let him as an honest citizen and if he is true to his conscience he should resign from Congress Presidentship and devote his full time as a Chief Minister to the State's welfare. He has got that brutal majority. He does not want to heed to the suggestions of the opposition. If he adheres to democratic principles and methods, he will not continue in both the offices and he will resign this office. What he is doing is against the principles of his own party. Now coming to the irrigation side, Sir, I see no improvements in the State. They are not in a position to raise funds for minor irrigation nor they are strong enough to bring pressure on Centre, and instead referring in Governor's address to the UNCTAD as if it comes to redeem us from the man made poverty of the nation and State. They are incapable of doing anything. Our Chief Minister talks about the interests of the State. If he is so interested why should he not try to influence the Centre to give more funds for irrigation purposes to secure steel plant to Hospet and funds for Upper Krishna. You are the leader of the entire Congress Organisation and have starting, ceasing to be so of the Mysore State. Therefore economic bankruptcy is there. Neither they are in a position to solve the border issue nor are they in a position to assert that the Mahajan

(Sri V. N. Patil)

Commission's Report should be accepted as an Award. They are not in a position to put an end to fissiparous tendencies and indiscipline and this is being allowed to spread among the raw and innocent students. Even today they are uncertain about the language issue. How can we expect such a Government to lead our State. When it comes to the language question, they are unable to give directions to the youth of this country. Nor have they courage to bring sufficient pressure on the centre to reduce the burden giving equality to all the languages. We are not opposed to Hindi. We definitely know that it is going to be the language of the entire nation because it is spoken and understood by majority of people of India and National Language will be required. At the same time we do not want to forget that it is alien language that is English. We have no enemity against English. On account of the misguided directions by this Government and wrong statement made by the Chief Minister, *i.e.*, outsiders are influencing the trouble, that these things are going. That is not the kind of statement that should be made. For those agitated, for the just rights of the Kannadigas against imposition, they have given death. If this is the dem cracy, it is really a shame. If that is so, they must stop talking about democracy. You have no policy and you want to be in power at the cost of the nation. We want all Indian languages to be together and given equal opportunity, neither Hindi should be placed superior nor any other language. It is only the question of convenience. The language is only a social medium to understand the feelings of others. You make use of the language problem, for quarrel and this wrong policy of the Government has landed the State into chaos.

Coming to the question of river waters and State Industries, nothing has come about. In the matter of steel plant, our Government has become incompetent to act. The Andhra Government have taken up construction of crest gauges and our Government are not in a position to stop them from constructing. For the last eight years you have been saying that you will get the rightful share in the Krishna water. Upper Krishna project is a necessity for Mysore. The entire district of Gulbarga, Raichur and Bijapur need it mostly because there is a definite famine once in three years. You are unable to give water to our people and within the span of five years the Andhra has constructed Srisailam and Nagarjunsagar projects. Is our Government worth the name? Is our Government competent to bring the same pressure on the Centre as other State Governments do and to take up the Upper Krishna project? On the floor of this House the Minister assured that within three months if the Centre does nothing, the State Government will take action. What action have you taken? On this single issue alone they must have resigned and the entire Mysore Ministry should have resigned. The Centre only looks to the force and assertive rights of the States and seems to understand only the language of

force and acts. Unless our State acts boldly the Centre will not yield. Like that Hospet has been denied the Steel plant and the possibility does not seem to be even at a remote period.

About agriculture, what have you done? This State consists of 80 per cent of agriculturists. Now the Central Minister for Finance Sri Morarji Desai is thinking of social control of Banks. In the name of social control they want to provide an opportunity for the capitalists to exploit the unexploited field of agriculture. In the name of social control of banks they want capitalists to exploit agriculture so that they can prevent the agriculture peasantry that is coming up as a decisive force. They want to catch rural agriculture by giving more and more facilities to richer classes. This is the way they are giving encouragement. What has the Mysore Government done for agriculture? The figures are given and some targets are quoted. To whom are they giving all the facilities? Are they given for agricultural operation? Those tractors and bulldozers are used by the P. W. D. Contractors in order to make the contractors to earn profit. Even there, blackmarketing is going on. The manures are not supplied to the people in time and 75 per cent are going into blackmarket. To obtain Taccavi loan of Rs. 2,000 the peasant will have to spend Rs. five hundred to one thousand and will have to wait for years.

The Government has not solved food problem. They are giving just 1 kg. per person per month. Is it the way to deal with the food problem? Either you say that you are incapable to solve the food problems of the masses and therefore you leave them merciessly at the mercy of hoarders who are controlling the economy of our State or do it properly. In this front you have been a complete failure.

Coming to the law and order situation, there is no proper administration worth the name. There is interference in day to day administration. No Deputy Commissioner is independent enough to take any relief measure or administrative decision without consulting the Congress leaders. Take the instance of my District. The Deputy Commissioner was made to be transferred from Bidar. The reason was that there were some differences between the Managing Director of the Sugar Factory and Chairman of the Sugar Factory. The Chairman happens to be a Congressman and District Congress President. He was not allowed to do things as he liked it. Because there were some differences between them, the District Congress Committee passed a resolution seeking for the transfer of the Deputy Commissioner. In what way the District Congress Committee is interested. Does the Deputy Commissioner belong only to the District Congress Committee or is he the Deputy Commissioner an administrative for the whole district? Or is it because he was the Brahmin officer by caste and was not to the liking of the D. C. C. President and not co-operating with these things that he was asked to be transferred? If things go on like this, how can an officer be bold enough to implement the policies

(Sri V. N. Patil)

and programmes ? The administration in Mysore is at the mercy of the Congressmen and no officer is courageous enough to do what he is expected of. This is the state of affairs. The police officers have become dictators. They are not hesitant to arrest even 10 years old boys in Markhal Village of Bidar District where entire male population of the Village is being treated as accused, thanks to the divide and rule policy of Congressmen whe due to their internal quarrel have made two Villages to suffer.

11-30 A.M.

It is very strange that our ex-Home Minister—I would call him stop-gap Minister–Hon'ble Mr. Jatti read a statement. The entire male population of Markal is treated as accused and they are all absconding and none of them are living there. Even boys below the age of twelve are arrested and put in jail. These atrocities are going on and this is the Congress way of justice ; this is the Hitler form of justice. If this state of affairs is allowed to continue, every Police Constable will think that he is ruling, that he is superior even to the Chief Minister and every S. P. and the Commissioner of Police will think that he is superior even to the Governor and even superior to anybody. They will think that nobody under the Indian Constitution is superior and that they can do and undo things. Some corrupt and inhuman officers are playing ducks and drakes with the lives of masses and they are not transferred in spite of these atrocities. These police officers are made to inaugurate village colonies and they are presiding over public meetings. An S. P. was made to preside over the inauguration of a village colony and the colony was opened as Nehru Nagar because it was on an unauthorised site. A police officer by name Pratap Singh was allowed to collect funds in this behalf. I am sorry you have misused the Governor about the wrong things that you have done. You have forgotten your duty to the people though you talk of socialism. Every new industry that has come up in Mysore State has been given to outside industrialists though there are criminal cases against them. You are inviting such people and garlending them as saviours of Mysore State. They are only the saviours of the Congress organisation in Mysore State and the Congress organisation cannot survive without them. Actually what you are doing is to do service for yourselves. You don't deserve to continue as Government. Don't misuse the Governor to address what you wish him to address. Make the Governor address what the people wish him to address. With these words, I thank the Chair for having provided me an opportunity to express my views.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಮ್ಮ ಕಾಂಗ್ರೆಸ್ ಸದಸ್ಯರು ಬಹಳ ಚೆನ್ನಾಗಿ ಹೊಗಳಿಕೊಂಡಾಡಿದ್ದಾರೆ. ಅದರಲ್ಲಿ ಯಾವ ತಿರುಳೂ, ಹುರುಳೂ ಕೂಡ ಇಲ್ಲ. ಆದುದರಿಂದ ನಾನು ಅದನ್ನು ವಿರೋಧಿಸುತ್ತೇನೆ.

ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ನಮ್ಮ ರಾಜ್ಯಪಾಲರು ಕೊಟ್ಟಿರುವ ಹೇಳಿಕೆ ನೋಡಿದರೆ ಆಶ್ಚರ್ಯವೇನೂ ಕಂಡುಬರುವುದಿಲ್ಲ. ಇದಕ್ಕೆ ಮೊದಲನೆಯ ಮೂರು ಯೋಜನೆಗಳ ವಿಫಲತೆಯೇ ಕಾರಣವಾಗಿದೆ. ಪಾಶ್ಚಾತ್ಯ ದೇಶಗಳ ಯೋಜನೆಗಳನ್ನು ನೋಡುವುದಾದರೆ ಅವರು ಅವುಗಳನ್ನು ಎಷ್ಟು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ಮೊದಲನೆಯ ಯೋಜನೆಗಿಂತ ಮುಂದೆ ಬರುವ ಯೋಜನೆಗಳು ಇನ್ನೂ ಯಶಸ್ವಿಯಾಗುತ್ತವೆ. ನಮ್ಮಲ್ಲಾದರೋ ರಾಷ್ಟ್ರದ ಸಾಲ ಮಿತಿಮೀರಿ ಏರುತ್ತಿದೆ, ರಾಷ್ಟ್ರದ ಹೊರೆ ದಿನೇದಿನೇ ಜಾಸ್ತಿಯಾಗುತ್ತಿದೆ. ಆದರಿಂದ ಈ ಯೋಜನೆಗಳ ಕಾರ್ಯ ಕುಂಠಿತವಾಗುತ್ತಿದೆ. ವ್ಯವಸಾಯ ಮತ್ತು ಕೈಗಾರಿಕಾ ಯೋಜನೆಗಳ ಅಭಿವೃದ್ಧಿಯನ್ನು ನೋಡಿದರೆ ಅದರಲ್ಲೂ ಕೂಡ ಪ್ರಗತಿ ಸಾಧಿಸಿಲ್ಲ, ದಿನೇ ದಿನೇ ಅಲ್ಲಲ್ಲಿರುವ ಅನೇಕ ಕೈಗಾರಿಕೆಗಳು ಮುಚ್ಚಲ್ಪಡುತ್ತಿವೆ. ಇದಕ್ಕೆ ನಿದರ್ಶನವನ್ನು ಹೇಳುವುದಾದರೆ ಗೋರಿಬಿದನೂರು ಸಕ್ಕರೆ ಕಾರ್ಖಾನೆ ಮುಚ್ಚಲ್ಪಟ್ಟಿದೆ, ಮಂಡ್ಯ ಸಕ್ಕರೆ ಕಾರ್ಖಾನೆ ಕೆಲವು ದಿನಗಳ ಕಾಲ ಮುಚ್ಚಲ್ಪಟ್ಟಿದ್ದು ಈಗ ತೆರೆಯಲ್ಪಟ್ಟಿದೆ. ಇವು ಹೀಗಾದರೆ ಎಷ್ಟು ದಿವಸ ನಡೆಯುತ್ತವೆಯೋ ನನಗಂತು ನಂಬಿಕೆಯಿಲ್ಲ. ಅನೇಕ ಸಹಕಾರ ಗಿರಣಿಗಳೂ ಕೂಡ ಮುಚ್ಚಲ್ಪಟ್ಟಿವೆ. ಸರಕಾರ ಎಚ್ಚರಿಕೆಯಿಂದ ಸಕಾಲದಲ್ಲಿ ಸೂಕ್ತ ಕ್ರಮಗಳನ್ನು ಕೈಕೊಂಡಿದ್ದರೆ ಇದಕ್ಕೆ ಅವಕಾಶವಿರುತ್ತಿರಲಿಲ್ಲ. ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ನಮ್ಮ ಸರಕಾರದವರು ಹೊರಗಿನ ಉದ್ಯಮಿಗಳಿಗೆ ಕರೆನೀಡಿ ಅವರಿಗೆ ಹೆಚ್ಚಿನ ನೆರವು ನೀಡುವುದಾಗಿ ವಾಗ್ದಾನಮಾಡಿದ್ದಾರೆ. ಆದರೆ ಅವರು ಆ ರೀತಿ ಅವರು ನಮ್ಮಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುತ್ತಿಲ್ಲ. ಕಾರಣ ಇಷ್ಟೆ: ಉದಾಹರಣೆ ಹೇಳುವುದಾದರೆ ಟಾಟಾ ಫಿನ್‌ಲೆ ಟೀ ಕಂಪೆನಿಯವರು ಮತ್ತು ಟೀ ಕಂಪೆನಿಯವರು ಸೇಲ್ಸ್‌ಟ್ಯಾಕ್ಸ್ ಬಗ್ಗೆ ಕೊಂಚ ರಿಯಾಯಿತಿ ಕೇಳಿದರು, ರಾಜ್ಯ ಸರಕಾರ ಅದನ್ನು ಕೊಡಲಿಲ್ಲ, ಅದಕ್ಕಾಗಿ ಅವರು ಟೀ ಕಂಪೆನಿಯನ್ನೇ ಮುಚ್ಚಿದರು. ಅದನ್ನರಿತು ಸರಕಾರದವರು ಈಗ ಕೆಲವು ಉದ್ಯಮಿಗಳಿಗೆ ಉತ್ತೇಜನ ಕೊಡಲು ಕಳೆದ ಅಧಿವೇಶನದಿಂದಲೂ ಕೂಡ ತಯಾರಾಗಿದ್ದಾರೆ. ಇದಕ್ಕಾಗಿ ಒಂದು ಬಿಲ್ಲನ್ನು ತಂದಿದ್ದಾರೆ. ಇದಕ್ಕೆ ಮುಂಚೆ ದೂರದೃಷ್ಟಿ ಇಟ್ಟು ತಕ್ಕ ಕ್ರಮ ಕೈಕೊಂಡಿದ್ದರೆ ಎಷ್ಟೋ ಚೆನ್ನಾಗಿತ್ತು.

ಕೃಷಿ ವಿಚಾರದಲ್ಲಿ ಹೇಳುವುದಾದರೆ ಶಕ್ತಿಮಾನ್ ಬೀಜಗಳನ್ನು ಇಲ್ಲಿ ಉಪಯೋಗಿಸಲು, ಈಗ ಎರಡು ವರ್ಷಗಳಿಂದ ಪ್ರಚಾರಮಾಡುತ್ತಿದ್ದಾರೆ. ಸುಮಾರು ಹತ್ತು ವರ್ಷಗಳಿಂದ ಈ ಬೀಜಗಳ ವಿಚಾರ ತಿಳಿದಿದ್ದೂ-ಕಾರ್ಯಕ್ರಮ ತೆಗೆದುಕೊಂಡಿರಲಿಲ್ಲ ಇದಕ್ಕೆ ಇಲಾಖೆ ಮತ್ತು ಸರಕಾರದ ಮಂದ ಬುದ್ಧಿಯೇ ಕಾರಣವೆಂದು ಹೇಳಬೇಕಾಗಿದೆ. ಈ ಒಂದು ಸಂದರ್ಭದಲ್ಲಿ ಮಾನ್ಯ ಮಿತ್ರರಾದ ವೀರಪ್ಪ ಗೌಡರು ನಿನ್ನೆದಿವಸ ತಮ್ಮ ಭಾಷಣದಲ್ಲಿ ಹೇಳಿದ್ದನ್ನು ನೋಡಬಹುದು. ಭಗವತಿ ಫಾರೆಸ್ಟನ್ನು ನಾವು ಬೆಳೆಸಿದ್ದೇವೆ ಎಂದು ಅರ್ಥ ಬರುವಹಾಗೆ ಹೇಳಿದರು. ಇದನ್ನು ನೋಡಿದರೆ ತಾವು ಸಮುದ್ರ ನಿರ್ಮಾಣಮಾಡಿ ಅದರಲ್ಲಿರುವ ಪ್ರಾಣಿಗಳನ್ನು ಕೂಡ ಸೃಷ್ಟಿಮಾಡಿದ್ದೇವೆ, ಮಳೆ ತರಿಸುತ್ತಿದ್ದೇವೆ ಎಂದು ಅವರು ಹೇಳುವಂತೆ ಕಂಡುಬರುತ್ತದೆ. ಇಂಥಹ ಮಾತುಗಳನ್ನು ಹೇಳುವುದು ಅವರು ಬಿಡಬೇಕು. ಭಾಗವತಿ ಫಾರೆಸ್ಟನ್ನು ಕಾಂಗ್ರೆಸ್ ಬೆಳೆಸಿದೆಯೇ ಎಂದು ಪ್ರಶ್ನೆಮಾಡಬೇಕಾಗಿದೆ.

ನಮ್ಮ ಅನೇಕ ಮಿತ್ರರು ಹೇಳಿದಂತೆ ನಾನೂ ಕೂಡ ಸರಕಾರದಲ್ಲಿ ದಕ್ಷತೆ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ 6-1-68 ರಲ್ಲಿ ನಡೆದ ಒಂದು ದುರ್ಘಟನೆಯನ್ನು ಗಮನಕ್ಕೆ ತರುತ್ತೇನೆ. ಅಲ್ಲಿ 6-1-68 ರಿಂದ 3 ದಿವಸಗಳವರೆಗೆ ಸರಕಾರವಿರಲಿಲ್ಲ. ಕಾರಣ ಆ ಕಾಲದಲ್ಲಿ ಸರಕಾರ ಹೈದರಾಬಾದಿನಲ್ಲಿ ಇತ್ತು ಎಂದು ತಿಳಿದುಬಂದಿದೆ, ಎಲ್ಲಾ ಮಂತ್ರಿಗಳೂ ಅಲ್ಲಿಗೆ ಹೋಗಿದ್ದರು, ಹೋಗುವಾಗ ಸರಕಾರವನ್ನು ಗಂಟುಕಟ್ಟಿಕೊಂಡುಹೋಗಿದ್ದರು ಎಂದು ಕಾಣುತ್ತದೆ. ಲಾಲೆಸ್‌ನೆಸ್ ನಮ್ಮ ಚಿಕ್ಕಮಗಳೂರಿನಲ್ಲಿ ಇತ್ತು ಎನ್ನುವುದನ್ನು ಯಾವ ಸದಸ್ಯರೂ ಕೂಡ ಮರೆಯುವಂತಿಲ್ಲ. ಅಲ್ಲಿ ಹೇಳುವವರು, ಕೇಳುವವರು ಇಲ್ಲವಾಗಿತ್ತು. ಮಂತ್ರಿಗಳಿಗೆ ಬೇಕಾದ ಒಬ್ಬ ಡೆಪ್ಯೂಟಿ ಕಮಿಷನರವರನ್ನು ನೇಮಕ ಮಾಡಿದ್ದರು, ಅವರಿಂದ ನಮ್ಮ ಚಿಕ್ಕಮಗಳೂರಿಗೆ ತೊಂದರೆಯಾಗುತ್ತದೆ ಎಂಬ ವಿಚಾರವನ್ನು ಅನೇಕ ಬಾರಿ ಮಂತ್ರಿಗಳ ಗಮನಕ್ಕೆ ತಂದೆ. ಆದರೂ ಅವರು ಆ ಕಡೆಗೆ ಗಮನ ಕೊಡಲಿಲ್ಲ, ಕೊನೆಗೆ ಆದ ಪರಿಣಾಮ ಏನೆಂದರೆ 6-1-68ರ ಬೆಳಿಗ್ಗೆ ಆ ಅಧಿಕಾರಿ ಕಡೂರಿನಲ್ಲಿದ್ದರು ಚಿಕ್ಕಮಗಳೂರಿಗೂ ಕಡೂರಿಗೂ ಕೇವಲ 25 ಮೈಲಿ. ಈ ಹಿಂದೂ ಮುಸ್ಲಿಂ ಗಲಾಟೆ ಆ ದಿನ ಬೆಳಿಗ್ಗೆ ಹತ್ತೂವರೆ ಗಂಟೆಗೆ ಪ್ರಾರಂಭವಾಯಿತು. ಪ್ರಾರಂಭವಾದ ಕೂಡಲೆ ಅಲ್ಲಿರತಕ್ಕ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಅವರಿಗೆ ಆ ಸುದ್ದಿಯನ್ನು ಕಳುಹಿಸಿದರು. ಟೆಲಿಫೋನ್ ಮೂಲಕ ಆ ಸುದ್ದಿಯನ್ನು ಹೇಳಿದ ಕೂಡಲೆ ಆ ಅಧಿಕಾರಿ ಚಿಕ್ಕಮಗಳೂರಿಗೆ ಬರುವುದಕ್ಕೆ ಬದಲಾಗಿ ತರೀಕೆರೆಗೆ ಅವರ ಪ್ರವಾಸವನ್ನು ಮುಂದುವರಿಸಿದರು. ಅಲ್ಲಿಗೂ ಕೂಡ ಚಿಕ್ಕಮಗಳೂರಿನಲ್ಲಿದ್ದ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಅವರಿಗೆ ಸುದ್ದಿಯನ್ನು ಕಳುಹಿಸಿದರು, ಆದರೂ ಕೂಡ ಅವರ ಪ್ರವಾಸ ಅಲ್ಲಿಂದ ಲಕ್ಕವಳ್ಳಿಗೆ ಮುಂದುವರಿಯಿತು.

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಈ ಒಂದು ಕಾರಣದಿಂದ ಚಿಕ್ಕಮಗಳೂರಿನಲ್ಲಿ ಕಾನೂನು ಕಟ್ಟಳೆ ನಡೆಸತಕ್ಕವರು, ಲಾ ಅಂಡ ಆರ್ಡರ್ ತಹಬಂದಿಯಲ್ಲಿ ಇಡತಕ್ಕವರು ಯಾರೂ ಇಲ್ಲದಂತಾಯಿತು. ಅದರೂ ಕೂಡ ಅಲ್ಲಿದ್ದ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಮತ್ತು ಎಸ್.ಪಿ. ಅವರು ತಮ್ಮ ಕೈಲಾದ್ದನ್ನು ಅದಷ್ಟೂ ಪ್ರಯತ್ನ ಮಾಡಿದರು. ಆದರೂ ಕೂಡ ಅದು ವಿಕೋಪಕ್ಕೆ ಹೋಯಿತು. ಊರಿನಲ್ಲಿ ಬಹಳ ಗಲಾಟೆಯಾಯಿತು ಲೂಟಿ, ಬೆಂಕಿಹಚ್ಚುವುದು. ಎಲ್ಲಾ ನಡೆಯಿತು. ಈ ಒಂದು ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಾ ಈ ಅಧಿಕಾರಿಗೆ ನೀವು ಏನಾದರೂ ಅಂತಹ ಗಲಾಟೆಯಾದರೂ ಆ ಸ್ಥಳಕ್ಕೆ ಹೋಗಬಾರದು ಅಂತ ನಿರ್ದೇಶನ ಕೊಟ್ಟಿದ್ದೀರಾ ಎಂದು ಕೇಳುತ್ತಾ ಇದ್ದೇನೆ.

ಶ್ರೀ ಬಿ. ರಾಚಯ್ಯ.—ಅಲ್ಲಿ ಹಿಂದೆ ಇದ್ದಂಥ ಡೆಪ್ಯೂಟಿ ಕಮೀಷನರನ್ನು ವರ್ಗ ಮಾಡಿದ ಮೇಲೆ ಎಂದರೆ ಅಲ್ಲಿದ್ದ ಲಕ್ಷ್ಮಣರಾಯರು ವರ್ಗವಾದ ಮೇಲೆ ಹೊಸಬರನ್ನು ಅಲ್ಲಿಗೆ ಹಾಕಿದೆವು, ಈ ಶಾಸನಸಭೆಯ ಸದಸ್ಯರೂ ಕೂಡ ಬಂದು ಅವರು ಕನ್ನಡ ಬರದೇ ಇದ್ದವರು, ಅಂತಹ ವ್ಯಕ್ತಿ ನಮಗೆ ಬೇಕಾಗಿಲ್ಲ, ಅವರು ಬಂದರೆ ಸತ್ಯಾಗ್ರಹ ಹೂಡುತ್ತೇವೆ ಅಂತ ಅನ್ನುವವರೆಗೂ ಹೋಗಿ ಅವರು ಚಾರ್ಜ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಲಿಲ್ಲ. ಮೈಸೂರಿನ ಅಧಿಕಾರಿ ಒಬ್ಬರನ್ನು ಡೆಲ್ಲಿಗೆ ಎರವಲಾಗಿ ಕೊಟ್ಟಿದ್ದೇವೆ ಅವರನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದೆವು, ಅವರು ನನಗೆ ರಜಾ ಕೊಟ್ಟಿದ್ದಾರೆ, ಅದ್ದರಿಂದ ಈಗ ನಾನು ಹೋಗುವುದಿಲ್ಲ ಎಂದು ಹೇಳಲಾಗಿ ಈ ಮಧ್ಯೆ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಯಾರಿದ್ದರು ಅವರನ್ನು ಇನ್‌ಚಾರ್ಜ್ ಅಗಿ ಇಡಬೇಕಾದ ಪ್ರಸಂಗ ಬಂತೇ ವಿನಾ ಮೊದಲು ಯಾರನ್ನು ಪೋಸ್ಟ್ ಮಾಡಿದ್ದೆವೋ ಅವರು ಹೋಗಿದ್ದ ಪಕ್ಷದಲ್ಲಿ ಹೀಗೆ ಅಗುತ್ತಾ ಇರಲಿಲ್ಲ. ಉದ್ದೇಶಪೂರ್ವಕವಾಗಿ ಅಸಿಸ್ಟೆಂಟ್ ಕಮಿಷನರೇ ಜಿಲ್ಲಾಧಿಕಾರಿಯಾಗಿರಲಿ ಎಂದು ಹೇಳಿ ನಾವೇನೂ ಮಾಡಿರಲಿಲ್ಲ.

ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಲಕ್ಷ್ಮಣರಾಯರನ್ನು ಉದ್ದೇಶಪೂರ್ವಕವಾಗಿ ವರ್ಗ ಮಾಡುವ ಅವಶ್ಯಕತೆ ಇರಲಿಲ್ಲ. ಅವರ ವರ್ಗವಾದ ಮೇಲೆ ಈ ಕಾರ್ಯಗಳು ನಡೆದಿವೆ.

ಶ್ರೀ ಬಿ. ರಾಚಯ್ಯ.—ಅದಕ್ಕೆ ಬೇರೆ ರೀತಿಯಾದ ಕಾರಣ ಇತ್ತು. ಅವರನ್ನು ಸೋಷಿಯಲ್ ವೆಲ್‌ಫೇರ್ ಡೈರೆಕ್ಟರಾಗಿ ತೆಗೆದುಕೊಳ್ಳಬೇಕೆಂದು ಸೋಷಿಯಲ್ ವೆಲ್‌ಫೇರ್ ಮಿನಿಸ್ಟರು ಅವರನ್ನು ತೆಗೆದುಕೊಂಡಿದ್ದಾರೆ ಅದ್ದರಿಂದ ಅವರಿಗೆ ಕೊಡಬೇಕಾಯಿತು. ಅವರಿಗೆ ಬದಲಾಗಿ ಇನ್ನೊಬ್ಬ ವ್ಯಕ್ತಿಯನ್ನು ಅಲ್ಲಿಗೆ ಹಾಕಿದ ಮೇಲೆ ಅಲ್ಲಿನ ಜನ ಬಂದು ಅವರನ್ನು ಹಾಕಬೇಡಿ, ಕನ್ನಡಬರುವವರೇ ಬೇಕು ಎಂದು ಹೇಳಿ ಒತ್ತಾಯಮಾಡಿದರೆ ನಾವೇನು ಮಾಡುವುದಕ್ಕಾಗುತ್ತದೆ ?

ಶ್ರೀ ಕೆ. ಎಚ್. ರಂಗನಾಥ (ಮೂಡಿಗೆರೆ).—ಕನ್ನಡಬರುವವರನ್ನು ಹಾಕಿ ಎಂದು ಹೇಳುವುದೇ ತಪ್ಪಾಗುತ್ತದೆಯೇ ? ರಜಾ ಇದ್ದವನನ್ನು ಬಿಟ್ಟು ಇನ್ನೊಬ್ಬರನ್ನು ಹಾಕಬಹುದಾಗಿತ್ತು ನೀವು ಮೆಂಬರುಗಳನ್ನೇ ಕೇಳಿ ವರ್ಗಮಾಡುವುದಿಲ್ಲವಲ್ಲಾ ? ಕನ್ನಡ ಬರುವವರನ್ನು ಹಾಕಿ ಎಂದು ಹೇಳಿದೆವು ಅಷ್ಟೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಈಗ ಹೇಳಬೇಕೆಂದರೆ ಅವರ ಕೈಯಲ್ಲಿ ಒಂದು ಅಸ್ತ್ರ ಇದೆ. ತಮಗೆ ಬೇಕಾದ ಆಫೀಸರನ್ನು ಹಾಕಿಕೊಳ್ಳುತ್ತಾರೆ. ಯಾರು ಸರಿಯಾಗಿ, ಪ್ರಾಮಾಣಿಕವಾಗಿ, ಗೌರವದಿಂದ ಕೆಲಸ ಮಾಡುತ್ತಾರೆ, ಕಾಂಗ್ರೆಸ್‌ನವರು ಹೇಳಿದ ಹಾಗೆ ಕೇಳುವುದಿಲ್ಲ ಅವರನ್ನು ಬೇರೆ ಕಡೆಗೆ ವರ್ಗ ಮಾಡುವುದು ಅವರ ಜಾಗದಲ್ಲಿ ಮೋಸ್ಟ್ ಇನ್‌ಕಾಂಪಿಟೆಂಟ್, ಯಾವ್ಯಾವುದೂ ಬರದೇ ಇರತಕ್ಕವರು ತಮಗೆ ಬೇಕಾದವರನ್ನು ಹಾಕುವುದು ಅವರ ಪದ್ಧತಿಯಾಗಿದೆ.

ಶ್ರೀ ಬಿ. ರಾಚಯ್ಯ.—ವಿರೋಧ ಪಕ್ಷದ ಸದಸ್ಯರುಗಳೇ ಈ ವರ್ಗಾವರ್ಗಿ ವಿಷಯದಲ್ಲಿ ಎಷ್ಟೋ ಜನ ಕಾಗದ ಬರೆಯುತ್ತಾರೆ, ಬರೆದಿದ್ದಾರೆ. ಅಂತಹ ಒಂದು ಪಟ್ಟಿಯೇ ಇದೆ. ಅದ್ದರಿಂದ ಅವರೂ ಕೂಡ ಇದರಿಂದ ಏನೂ ದೂರವಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಒಂದು ಪಟ್ಟಿ ಮಾಡಿ, ಸುಮ್ಮನೆ ಈ ರೀತಿ ಹೇಳಿ ತಪ್ಪಿಸಿ ಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಜಿಲ್ಲೆಯ ಒಂದು ಉದಾಹರಣೆ ಕೊಡುತ್ತೇನೆ. ತಮಗೂ ಗೊತ್ತಿದೆ. ಅಲ್ಲಿರತಕ್ಕ ಅಧಿಕಾರಿ ಹತ್ತು ಮೆಟ್ಟಲು ನಡೆದರೆ ನೀವು ಕೇಳಿದ್ದು ಕೊಡುತ್ತೇನೆ. ಇವತ್ತು ಹತ್ತು ಮೆಟ್ಟಲುಗಳನ್ನು ಹತ್ತಿ ನಡೆಯುವುದಕ್ಕೆ ಅವರಿಗೆ ಶಕ್ತಿ ಇಲ್ಲ, ಅವರನ್ನು ಇಟ್ಟು ಕೊಂಡಿದ್ದೀರಿ, ಏಕೆ ನೀವು ಹೇಳಿದ್ದಕ್ಕೆಲ್ಲಾ ಅವರು ಸೈನ್ ಹಾಕಬೇಕು, ಅಂತಹ ಜಿಲ್ಲಾಧಿಕಾರಿ ಗಳನ್ನು ಇಟ್ಟುಕೊಂಡಿರುವುದರಿಂದಲೇ ಈ [illegible]ಸ ದೇಶದಲ್ಲಿ ಕ್ಷೋಭೆ, ಕಷ್ಟ. ಲಕ್ಷ್ಮಣರಾಯರು

ನಿಮಗಿಂತ ನಮಗೆ ಚೆನ್ನಾಗಿ ಗೊತ್ತು, ಸತ್ಯವಾಗಿ ನಡೆಯುತ್ತಾರೆ. ಅಂತಹವರು ಕಾಂಗ್ರೆಸ್‌ನವರಿಗೆ ಬೇಕಾಗಿಲ್ಲ. ಅವರು ಹೇಳಿದಂತೆ ಸಲಾಂ ಹಾಕಿಕೊಂಡು, ಜೀ ಹುಕುಂ ಅಂತ ಅನ್ನುವವರು ಬೇಕು. ನಿಮ್ಮ ಕೈಯಲ್ಲಿ ಅಧಿಕಾರ ಸರಿಯಾಗಿ ನಡೆಯಬೇಕಾದರೆ ಜಂಬ ಬಿಟ್ಟು ಸರಿಯಾಗಿ ನಡೆದುಕೊಳ್ಳಬೇಕು.

ಶ್ರೀ ಸದಾಶಿವ ಪಾಟೀಲ್ (ದೇವದುರ್ಗ).—ವಿರೋಧ ಪಕ್ಷದವರು ಹೇಳಿದ ಹಾಗೆ ಕೇಳುತ್ತೇವೆ ಎಂದು ಹೇಳಿದರು. ಆ ರೀತಿ ಯಾವುದನ್ನೂ ಮಾಡಿಲ್ಲ ಎಂದು ಹೇಳಲು ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನಿಷ್ಪಕ್ಷಪಾತವಾದ ಜಿಲ್ಲಾಧಿಕಾರಿಗಳು, ನಿಷ್ಪಕ್ಷಪಾತವಾದ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅಧಿಕಾರಿಗಳನ್ನು ಎಲ್ಲಿಯವರೆಗೆ ಹಾಕುವುದಿಲ್ಲ, ಅವರು ಹೇಳಿದ ಹಾಗೆ ಕೇಳುವವರನ್ನು ಹಾಕುತ್ತಾರೆ ಅಲ್ಲಿಯವರೆಗೂ ಈ ಕಷ್ಟ ತಪ್ಪುವುದಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಇಂಟರ್‌ಫಿಯರ್ ಮಾಡುವುದನ್ನು ಬಿಟ್ಟುಬಿಟ್ಟರೆ ನೀವು ಜಬರ್‌ದಸ್ತ್ ಮಾಡುವುದನ್ನು ಬಿಟ್ಟುಬಿಟ್ಟರೆ ನಾವೂ ಅಷ್ಟೇ ನಿಷ್ಠೆಯಿಂದ ನಡೆಯುತ್ತೇವೆ

ಶ್ರೀ ಎಚ್. ಸಿದ್ದವೀರಪ್ಪ.—ಸಭೆಯ ಸದಸ್ಯರು ಇಂಟರ್‌ಫಿಯರ್ ಮಾಡುತ್ತಾರೆ ಎಂದು ಈಗ ಏನು ನೀವು ಸ್ಟೇಟ್‌ಮೆಂಟ್ ಮಾಡುತ್ತಾ ಇದ್ದೀರಿ ಇದರ ವಿಷಯದಲ್ಲಿ ನಾಳೇ ನೀವು ಒಂದು ಪಟ್ಟಿ ತೆಗೆದುಕೊಂಡು ಬನ್ನಿ ಯಾರ್ಯಾರು ಇಂಟರ್‌ಫಿಯರ್ ಮಾಡಿದ್ದಾರೆ, ಯಾವ್ಯಾವುದರಲ್ಲಿ ಮಾಡಿದ್ದಾರೆ, ಎಷ್ಟು ಸಾರಿ ಮಾಡಿದ್ದಾರೆ ಇದನ್ನೆಲ್ಲಾ ಪಟ್ಟಿಮಾಡಿಕೊಂಡು ಬಂದು ಹೇಳಬೇಕೇ ಹೊರತು ಬರೇ ಒಂದು ಮಾತಿನಲ್ಲಿ, ಅಧಿಕಾರವಾಣಿಯಿಂದ ಹೇಳಿದರೆ ನಡೆಯುವುದಿಲ್ಲ.

ಶ್ರೀ ಸದಾಶಿವ ಪಾಟೀಲ್.—ಮೊನ್ನೆ ನಡೆದ ಚುನಾವಣೆಯಲ್ಲಿ ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟ್‌ಗೇ ಸಹಾಯ ಮಾಡುವುದಕ್ಕಾಗಿ ಒಬ್ಬ ಸಬ್‌ಇನ್‌ಸ್ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡಿಸಿದ್ದರು, ಆದರೆ ಆ ಎಸ್. ಐ. ಕಡಿಯಿಂದ ಏನೇನೂ ಆಗಲಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ನಮ್ಮ ಕಂದಾಯ ಮಂತ್ರಿಗಳು ಈ ಹಿಂದೆ ನಮ್ಮ ಚಿಕ್ಕಮಗಳೂರಿಗೆ ಹಾಕಿದ್ದ ಜಿಲ್ಲಾಧಿಕಾರಿಗಳಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ಆಗ ನಾವು ಇವರಲ್ಲಿ ನಮ್ಮ ಜಿಲ್ಲೆಗೆ ಕನ್ನಡ ಬರತಕ್ಕ ಒಬ್ಬ ಜಿಲ್ಲಾಧಿಕಾರಿಗಳನ್ನು, ಅವರು ಯಾವ ಮತಸ್ಥರಾದರೂ ಸರಿಯೇ ಮುಸಲ್ಮಾನರಾಗಲಿ, ಕ್ರಿಶ್ಚಿಯನ್ನರಾಗಲೀ ಯಾರನ್ನಾದರೂ ಸರಿ ಕನ್ನಡ ಬರತಕ್ಕವರನ್ನು ವರ್ಗಮಾಡಿ ಎಂಬುದಾಗಿ ಹೇಳಿದ್ದೆವು. ಈ ವಿಚಾರವನ್ನು ನಾವು ನಮ್ಮ ಮುಖ್ಯ ಮಂತ್ರಿಗಳಲ್ಲಿ ಹೇಳಿದ್ದೆವು. ಆ ರೀತಿಯಾಗಿ ನಾವು ಕೇಳಿದ್ದು ತಪ್ಪಲ್ಲ. ಆದರೆ ಅದನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ನಾವು ಅವರ ದಿನವಹಿ ಅಡ್ಮಿನಿಸ್ಟ್ರೇಷನ್ನಿನಲ್ಲಿ ಇಂಟರ್‌ಫಿಯರ್ ಮಾಡುತ್ತಿದ್ದಾರೆಂದು ಅವರು ಹೇಳಿದ ಮಾತುಗಳನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಅಲ್ಲಿಗೆ ಒಬ್ಬ ಸೀನಿಯರ್ ಅಸಿಸ್ಟೆಂಟ್ ಕಮೀಷನರನ್ನ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳನ್ನಾಗಿ ವರ್ಗಾಯಿಸಿದ್ದರ ಬಗ್ಗೆ ನೀವು ಇಂಟರ್‌ಫಿಯರ್ ಮಾಡಲಿಲ್ಲವೇ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಒಂದಾವರ್ತಿ ಚಿಕ್ಕಮಗಳೂರಿನ ಎಲ್ಲ ಸದಸ್ಯರೊಂದಿಗೆ ನಾನೂ ಸಹಾ ರೆವಿನ್ಯೂ ಮಂತ್ರಿಗಳನ್ನು ನೋಡಲು ಹೋಗಿದ್ದೆ... As far as the Deputy Commissioner of Chickmagalur is concerned, we have not interfered to transfer him. We only wanted a man who knew Kannada to be posted.

ಉಪಾಧ್ಯಕ್ಷರು.—ಅಲ್ಲಿಗೆ ಕನ್ನಡ ಬರತಕ್ಕವರೊಬ್ಬರನ್ನು ಜಿಲ್ಲಾಧಿಕಾರಿಗಳನ್ನಾಗಿ ಹಾಕತಕ್ಕ ಬಗ್ಗೆ ಸ್ವಲ್ಪ ನಿಧಾನವಾಯಿತು ಅನ್ನುವುದನ್ನು ಮಾನ್ಯ ಮಂತ್ರಿಗಳಾಗಲೆ ತಿಳಿಸಿದ್ದಾರೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ನಾನು ಆ ಮಾತನ್ನು ಸಮಂಜಿತವಾಗಿಯೇ ಹೇಳಿದ್ದೇನೆ ಆದರೆ ಮಂತ್ರಿಗಳು ತಾವು ಮಾಡಿರುವ ತಪ್ಪನ್ನು ಮುಚ್ಚಿಕೊಳ್ಳಲು ಅಲ್ಲಸಲ್ಲದ ಮಾತುಗಳನ್ನಾಡುತ್ತಿದ್ದಾರೆ. ಅದು ಸರಿಯಾದ್ದಲ್ಲ. ನಮ್ಮ ಮಲೆನಾಡಿನಲ್ಲಿ ಯಾವತ್ತೂ ಕಾಣದೆ ಇದ್ದ ಒಂದು ಕೆಟ್ಟ ಮತಗಲಭೆಯ-ಕ್ಷೋಭೆಯನ್ನು ಇವರ ಕಾಲದಲ್ಲಿ ಬಿತ್ತಿದಂತಾಯಿತು. ಆ ಗಲಭೆಯನ್ನು ತಡೆಗಟ್ಟಲು ಅಲ್ಲಿ ಎಲ್ಲ ಪಕ್ಷಗಳವರೂ ಶ್ರಮಿಸಿದರು ಎಂದು ಹೇಳಿದನೇ ವಿನಾ ನಾನೊಬ್ಬನೆ ಅದನ್ನು ತಡೆಗಟ್ಟಿದೆನೆಂದು ನಾನು ಹೇಳಲಿಲ್ಲ. ಆ ದಿವಸ ಚಿಕ್ಕಮಗಳೂರಿನಲ್ಲಿ ಶಾಂತಿ ನೆಲಸುವಂತೆ ಮಾಡತಕ್ಕ ಕಾರ್ಯದಲ್ಲಿ ಅಲ್ಲಿದ್ದ ಎಲ್ಲಾ ಪಕ್ಷಗಳವರೂ ಶ್ರಮಿಸಿದ್ದಾರೆ. ಅಲ್ಲಿ ವಿರೋಧ ಪಕ್ಷದ ಸದಸ್ಯರಿದ್ದರು, ಕಾಂಗ್ರೆಸ್

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ಪಕ್ಷದ ಸದಸ್ಯರಿದ್ದರು. ಹೀಗೆ ಎಲ್ಲರೂ ಅಲ್ಲಿ ಪ್ರಯತ್ನ ಮಾಡಿ ಶಾಂತಿ ನೆಲೆಸುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಅಲ್ಲಿ ಆ ದಿವಸ ಸರ್ಕಾರ ಮಾತ್ರ ಇರಲಿಲ್ಲ. ಅಲ್ಲಿಗೆ ಮೂರು ದಿವಸಗಳಿಂದಲೂ ನಮ್ಮ ಗೃಹ ಮಂತ್ರಿಗಳು ಹೈದರಾಬಾದಿನಲ್ಲಿ ನಡೆಯುತ್ತಿದ್ದ ಎ. ಐ. ಸಿ. ಸಿ. ಯಲ್ಲಿ ಭಾಗವಹಿಸಿದ್ದರು.

ಶ್ರೀ ಡಿ. ಎಂ. ಸಿದ್ದಯ್ಯ.—ತಾವು ಈಗ ತಾನೆ ಅಲ್ಲಿ ಎಲ್ಲ ಪಕ್ಷಗಳವರೂ ಸೇರಿ ಅಂದು ಹೇಳಿದಿರಿ. ಅದರಲ್ಲಿ ನಮ್ಮ ಕಾಂಗ್ರೆಸ್ ಪಕ್ಷದವರು ಸೇರಿರಲಿಲ್ಲವೇ ? ಅಲ್ಲಿ ಕಾಂಗ್ರೆಸ್ ಪಕ್ಷದವರೂ ಸೇರಿ ಅಲ್ಲಿ ಶಾಂತಿ ನೆಲೆಸುವುದಕ್ಕೆ ಪ್ರಯತ್ನ ಮಾಡಿದರೆಂದು ಹೇಳಿದ ಮೇಲೆ ಅಲ್ಲಿಗೆ ಕಾಂಗ್ರೆಸ್ ಪಕ್ಷದ ಮಂತ್ರಿಗಳು ಅಲ್ಲಿದ್ದಂತೆ ಆಗಲಿಲ್ಲವೇ ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ಸಿದ್ದಯ್ಯನವರು ಹೇಳಿದ್ದು ನನಗೆ ಈಗ ಅರ್ಥವಾಯಿತು. ಇಲ್ಲಿಯವರೆಗೂ ಈ ವಿಚಾರ ತಿಳಿದಿರಲಿಲ್ಲ. ಈ ವಿಚಾರ ಎಂದರೆ ಎಲ್ಲಾ ಕಾಂಗ್ರೆಸ್ ಸದಸ್ಯರೂ ಕೂಡ ಒಬ್ಬ ಮಂತ್ರಿಗಳಿದ್ದಂತೆ, ಮತ್ತು ಪೋಲೀಸ್ ಅಧಿಕಾರಿಗಳಿದ್ದಂತೆ ಅನ್ನುವುದು.

ಶ್ರೀ ಬಿ. ರಾಚಯ್ಯ.—ಅಲ್ಲಿ ಎಲ್ಲ ಪಕ್ಷಗಳೂ ಮತ್ತು ಸರ್ಕಾರದ ಪ್ರತಿನಿಧಿಗಳೂ ಅಲ್ಲಿ ಸೇರಿ ಶಾಂತಿ ನೆಲಸುವಂತೆ ಮಾಡಲಿಲ್ಲವೇ ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಷ್ಟೆಲ್ಲಾ ಆಯಿತು. ಹೋಗಲಿ ಆ ಜಿಲ್ಲಾಧಿಕಾರಿಗಳು ಮಾಡಿದ ತಪ್ಪಿಗೆ ಮಂತ್ರಿಗಳು ಅವರಿಗೆ ವಿಧಿಸಿದ ಶಿಕ್ಷೆಯಾದರೂ ಏನು ? ಅವರನ್ನು ಅಲ್ಲಿಂದ ವರ್ಗ ಮಾಡಿದ್ದು ಮಾತ್ರ. ಹೀಗೆ ವರ್ಗ ಮಾಡತಕ್ಕದ್ದೂ ಒಂದು ಪನಿಷ್‌ಮೆಂಟೋ ? ಆಗ ಆ ಜಿಲ್ಲಾಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯನ್ನು ಮಾಡಲಿಲ್ಲ. ಅವರು ತಮ್ಮ ಕರ್ತವ್ಯ ಚ್ಯುತಿಯನ್ನು ಒಪ್ಪಲೇ ಬೇಕು. ಆ ಜಿಲ್ಲೆಯಲ್ಲಿ ಯಾವ ಮೂಲೆಯಲ್ಲೇ ಜಿಲ್ಲಾಧಿಕಾರಿಗಳಿದ್ದರೂ ಜಿಲ್ಲಾ ಹೆಡ್ ಕ್ವಾರ್ಟರ್ಸಿಗೆ ಕೇವಲ ಎರಡು ಗಂಟೆಯ ಕಾಲದಲ್ಲಿ ಅವರು ಬರುವುದಕ್ಕೆ ಸಾಧ್ಯವಿದೆ. ಆದಾಗ್ಯೂ ಅವರು ಬರಲಿಲ್ಲ. ಅವರು ಬಂದದ್ದು ರಾತ್ರಿ ಹತ್ತೂವರೆ ಅಥವಾ ಹನ್ನೊಂದು ಗಂಟೆಗೆ. ಅವರು ಬಂದುದ್ದಾರೂ ಎಲ್ಲಿಗೆ ? ಅವರು ನೇರವಾಗಿ ಸ್ಥಳಕ್ಕೆ ಬಾರದೆ ಅವರು ಇಂಡಿಯನ್ ಕಾಫಿಕ್ಯೂರಿಂಗ್ ಹೌಸಿನಲ್ಲಿ ಕುಳಿತುಕೊಂಡು ಅಲ್ಲಿಗೆ ಪೋಲೀಸ್ ಅಧಿಕಾರಿಗಳನ್ನೂ ಮತ್ತು ಪೌರಸಭೆಯ ಅಧ್ಯಕ್ಷರನ್ನೂ ಕರೆಸಿಕೊಂಡು ಅವರ ಜೊತೆಯಲ್ಲಿ ಬಂದರು. ಅವರು ಬರುವ ವೇಳೆಗೆ ಅಲ್ಲಿ ಆಗಬೇಕಾಗಿದ್ದ ಅನಾಹುತಗಳೆಲ್ಲ ಆಗಿಹೋಗಿದ್ದವು. ಆದರೆ ನಾನು ಆ ದಿವಸ ಊರಲ್ಲಿರಲಿಲ್ಲ. ನಾನು ಬೇರೆ ಊರಿಗೆ ಹೋಗಿದ್ದೆ ಸ್ಥಳದಲ್ಲಿ ಹೀಗೆ ಗಲಾಟೆಯಾಗುತ್ತಿದೆ ಎಂಬುದನ್ನು ತಿಳಿದ ಕೂಡಲೇ ಕಾರಿನಲ್ಲಿ ಊರಿಗೆ ಬಂದೆನು. ಆ ನಂತರ ನನಗೆ ವಿಚಾರವೆಲ್ಲಾ ಗೊತ್ತಾಯಿತು. ಆ ಗಲಭೆಗೆ ಕಾರಣವೇನು ಅದಕ್ಕೆ ಕರ್ತರ್ಯಾರು, ಆ ದಿವಸ ಊರಿನಲ್ಲಿ ಏನಾಗುತ್ತದೆ ಎನ್ನುವುದೆಲ್ಲ ಮೊದಲೇ ಸರ್ಕಾರಕ್ಕೆ ಗೊತ್ತಿತ್ತು. ಆ ವಿಚಾರದಲ್ಲಿ ಅದುವರಿಗಾಗಲೇ ಅನೇಕರಿಂದ ದೂರುಗಳು ಬಂದಿದ್ದವು. ಅವು ಆ ಜಿಲ್ಲಾಧಿಕಾರಿಗಳ ಹತ್ತಿರಲೇ ಇದ್ದವು. ಆ ಗಲಭೆಗೆ ಮೂಲ ಕಾರಣ ಅಕ್ಕಪಕ್ಕದಲ್ಲೇ ಇದ್ದ ಹಿಂದುಗಳ ಮತ್ತು ಮುಸ್ಲಿಮ್ಮರ ಒಂದು ಸ್ಮಶಾನಕ್ಕೆ—ರುದ್ರಭೂಮಿಗೆ ಸಂಬಂಧಪಟ್ಟ ಹಾಗೆ ಈ ಗೊಂದಲ ಉಂಟಾಯಿತು. ಅಲ್ಲಿ ಹೀಗೆ ಒಂದು ಗಲಭೆ ಉಂಟಾಗುತ್ತದೆಂಬುದನ್ನು ಮೊದಲೆ ಜಿಲ್ಲಾಧಿಕಾರಿಗಳು ಆಲೋಚನೆ ಮಾಡಿದ್ದರು. ಚಿಕ್ಕಮಗಳೂರಿನಲ್ಲಿ ಈ ಗಲಭೆ ಉಂಟಾದ್ದು ಇದರ ಸೋಂಕು ಆಗಲೇ ಬೇಲೂರು, ಸಕ್ಕರಾಯಪಟ್ಟಣ ಮತ್ತು ಶಿವಮೊಗ್ಗದವರೆಗೂ ಹರಡಿ ಹೋಗಿತ್ತು. ಆದರೆ ಇಲ್ಲಿಯವರಗಾದರೂ ಸರ್ಕಾರದವರು ಆ ದಿವಸ ಅಲ್ಲಿ ಆ ಘಟನೆ ನಡೆಯುವುದಕ್ಕೆ ಕಾರಣವೇನು ಎಂಬುದನ್ನು ಇಲ್ಲಿಯವರೆಗೂ ಕಂಡುಕೊಂಡಿದ್ದಾರೋ ಇನ್ನೂ ಇಲ್ಲವೋ ಅದು ನನಗೆ ಗೊತ್ತಾಗುತ್ತಿಲ್ಲ. ಆ ದಿವಸ ಅಲ್ಲಿ ಒಂದು ನಾಡು ಬಾಂಬನ್ನು ಸಿಡಿಸಿದ್ದರಿಂದ ಊರಿನಲ್ಲಿದ್ದ ಜನರು ಕೋಪೋದ್ರಿಕ್ತರಾಗುವುದಕ್ಕೆ ಕಾರಣವಾಯಿತು. ನಾನು ಈ ವಿಚಾರದಲ್ಲಿ ನಮ್ಮ ಗೃಹ ಮಂತ್ರಿಗಳೇನಾದರೂ ವಿಚಾರಣೆ ನಡೆಸಿದ್ದಾರೆಯೇ ಅನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಆದರೆ ಅವರಿನ್ನೂ ಇದರ ವಿಚಾರಣೆಗೆ ಕೈ ಹಾಕಿಲ್ಲವೆಂದು ನನಗನಿಸುತ್ತಿದೆ. ಆದರೆ ಈ ಪ್ರಸಂಗ ಹೇಗೆ ಉಂಟಾಯಿತು ಎಂಬುದನ್ನು ವಿಚಾರಣೆ ಮಾಡದೆ ಆ ಮಧುಗಿರಿ ಪ್ರಕರಣವನ್ನು ಮುಚ್ಚಿಹಾಕಿದಂತೆ ಇದನ್ನೂ ಮಾಡಲು ಹೊರಟರೆ ಮುಂದೆ ಅನೇಕ ತೊಂದರೆಗೆ ಸರ್ಕಾರದವರು ಗುರಿಯಾಗಬೇಕಾಗುತ್ತದೆಂದು ನಾನು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಗೆ ಒಬ್ಬ ಒಳ್ಳೆಯ ಜಿಲ್ಲಾಧಿಕಾರಿಗಳನ್ನು ಕೊಡಿ ಎಂದು ಕೇಳತಕ್ಕದ್ದು ಎಲ್ಲಿಯೂ ಇಲ್ಲವೆ ? ಇದೇನು ಅಂಥ ಕೆಟ್ಟ ಪದ್ಧತಿಯೇ ? ನಾವು ಅಲ್ಲಿಗೆ ಕೇಳಿದ್ದು ಅಬ್ದುಲ್ ಜಬ್ಬಾರರಂಥ ಅಧ್ಯಕ್ಷರಾದ ಅಧಿಕಾರಿಗಳನ್ನಲ್ಲ. ಅಲ್ಲಿಗೆ ಕೇವಲ ಇನ್ನು 6—7 ತಿಂಗಳಲ್ಲಿ ನಿವೃತ್ತಿ ಹೊಂದು ವಂಥ ಅಧಿಕಾರಿಗಳನ್ನು ನೋಡಿ ಪೋಸ್ಟ್ ಮಾಡಿದ್ದಾರೆ ಅಂದಾಗ ಅಲ್ಲಿಗೆ ಸರಿಯಾದವರನ್ನೊಬ್ಬರನ್ನು ಹಾಕುವುದಕ್ಕೆ ನಮ್ಮಲ್ಲಿ ಐ.ಎ.ಎಸ್. ಪಾಸ್ ಮಾಡಿದ ಅಧಿಕಾರಿಗಳು ಯಾರೂ ಇಲ್ಲವಂತಲೋ ? ಇನ್ನು ಅಲ್ಲಿದ್ದ ಶ್ರೀ ಲಕ್ಷ್ಮಣರಾಯರನ್ನು ವರ್ಗ ಮಾಡಿದ್ದರ ಬಗ್ಗೆ......

ಶ್ರೀ ಬಿ. ರಾಚಯ್ಯ.—ಅಲ್ಲಿಗೆ ನಾವು ಇಬ್ಬರು ಐ.ಎ.ಎಸ್. ಅಧಿಕಾರಿಗಳನ್ನು ಪೋಸ್ಟ್ ಮಾಡಿದೆವು. ಒಬ್ಬರಿಗೆ ಕನ್ನಡ ಬರುವುದಿಲ್ಲ ಎಂದಾಯಿತು. ಇನ್ನೊಬ್ಬರು ವರ್ಗವಾಗಿ ಬರುತ್ತಿದ್ದ ಹಾಗೆ ರಜದಲ್ಲಿ ಬಂದರು. ಆ ರಜಾ ಅವಧಿ ಮುಗಿಯುವತನಕ ಹಂಗಾಮಿಯಾಗಿ ಒಬ್ಬ ಸೀನಿಯರ್ ಅಸಿಸ್ಟೆಂಟ್ ಕಮಿಷನರನ್ನು ಅಲ್ಲಿಗೆ ವರ್ಗಮಾಡಿದೆವು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ನಾನು ಅದನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ಒಬ್ಬ ರಿಟೈರ್ ಆಗತಕ್ಕ ಅಸಿಸ್ಟೆಂಟ್ ಕಮಿಷನರನ್ನು ಇನ್‌ಚಾರ್ಜ್ ಡೆಪ್ಯುಟಿ ಕಮಿಷನರನನ್ನಾಗಿ ನೇಮಕ ಮಾಡಿದ್ದೀರಿ. ಆ ಹುದ್ದೆಗೆ ಅವರು ಅರ್ಹರಿದ್ದಾರೊ, ಇಲ್ಲವೊ ಎನ್ನು ವುದನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

12.00 NOON.

ಶ್ರೀ ಡಿ. ದೇವರಾಜ ಅರಸ್.—ವಿಷಯವನ್ನು ಸರಿಯಾಗಿ ತಿಳಿದು ಹೇಳಿ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಯಾರು ನಿಮಗೆ ಚುನಾವಣೆಯಲ್ಲಿ ಸಹಾಯ ಮಾಡಿದ್ದರೋ, ಯಾರು ಕಾಂಗ್ರೆಸ್ ಸದಸ್ಯರಿಗೆ ಸಹಾಯ ಮಾಡಿದರೋ ಅಂತಹವರಿಗೆ ಈ ಪದವಿಯನ್ನು ಕೊಟ್ಟಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ಇಂಟರೆಸ್ಟ್ ಇದ್ದಂಥ ಮಂತ್ರಿಗಳೂ ಸಹ ಈ ಕೆಲಸ ಮಾಡಿಸಿದ್ದಾರೆ. ಅದರ ಜೊತೆಗೆ ಇನ್ನು ಜಿಲ್ಲಾಧಿಕಾರಿಗಳ ವಿಚಾರ ಹೇಳುವುದಾದರೆ ಮೊಟ್ಟಮೊದಲನೆಯದಾಗಿ ಮಾನ್ಯ ಶ್ರೀ ಸಂಪತ್ ಕುಮಾರನ್, ಡೆಪ್ಯುಟಿ ಕಮಿಷನರ್ ಅವರನ್ನು ವರ್ಗಮಾಡಿದರು. ಅದೇ ರೀತಿಯಲ್ಲಿ ಮಾನ್ಯ ಶ್ರೀ ಲಕ್ಷ್ಮಣರಾವ್ ಅವರನ್ನೂ ವರ್ಗಮಾಡಿದರು.

ಶ್ರೀ ಡಿ. ದೇವರಾಜ ಅರಸ್.—ಶ್ರೀ ಲಕ್ಷ್ಮಣರಾವ್ ಅವರು ನಮ್ಮ ಜಾತಿಯವರಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಏನೋ ತುರ್ತು ಪರಿಸ್ಥಿತಿ ಎಂದು ಸೋಷಿಯಲ್ ವೆಲ್‌ಫೇರ್ ಬೋರ್ಡಿಗೆ ಅಧ್ಯಕ್ಷರು ಬೇಕೆಂದು ತೀರ್ಮಾನಮಾಡಿ ಕೂಡಲೇ ಅವರನ್ನು ಇಲ್ಲಿಗೆ ಬದಲಾವಣೆ ಮಾಡಿದರು. ಆದರೆ ಇವತ್ತು ಸರ್ಕಾರದಲ್ಲಿ ಎಷ್ಟರಮಟ್ಟಿಗೆ ದಕ್ಷತೆ ಇದೆಯೆನ್ನುವುದನ್ನು ಮತ್ತೊಮ್ಮೆ ವಿವರಿಸುವುದಕ್ಕೆ ಇಷ್ಟಪಡುತ್ತೇನೆ. ಅದರ ಬಗ್ಗೆ ಸರ್ಕಾರದ ಮುಂದೆ ಕೆಲವು ವಿಷಯಗಳನ್ನು ಇಡಬಯಸುತ್ತೇನೆ. ಇಲ್ಲಿ ಗೃಹ ಮಂತ್ರಿಗಳಿಲ್ಲ, ಮುಖ್ಯ ಮಂತ್ರಿಗಳಿಲ್ಲ. ರೆವಿನ್ಯೂ ಮಂತ್ರಿಗಳಿಲ್ಲ, ಎಲ್ಲರೂ ಹೈದರಾಬಾದ್ ಎ.ಐ.ಸಿ.ಸಿ. ಅಧಿವೇಶನದಲ್ಲಿದ್ದಾರೆ. ಹೀಗಿರುವಾಗ ನಮ್ಮ ಊರಿನಲ್ಲಿ ಗಲಾಟೆ ಏನಾದರೂ ಆದರೆ ನಾವು ಯಾರಿಗೆ ತಿಳಿಸಬೇಕು ?

ಶ್ರೀ ಬಿ. ರಾಚಯ್ಯ.—ನಾನು ಇಲ್ಲಿಯೇ ಇದ್ದೆ.

ಶ್ರೀ ಎಚ್. ಸಿದ್ದವೀರಪ್ಪ.—ನೀವು ಕಾಡಿನಲ್ಲಿದ್ದೀರಿ.

(ನಗು)

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ಸಚಿವರು ಬೆಂಗಳೂರಿನಲ್ಲಿರಲಿಲ್ಲ. ನಾನು ಬಹಳ ಪ್ರಯತ್ನ ಮಾಡಿ ಚೀಫ್ ಸೆಕ್ರೆಟರಿಗಳಿಗೆ ತಿಳಿಸಿದೆ. ನಮಗೆ ಪೋಲೀಸಿನವರು ಸಹಾಯಕ್ಕೆ ಬಂದುದು ಯಾವಾಗ ಅಂದರೆ ಈ ಘಟನೆ ನಡೆಯಿತೆಂದು ಗೊತ್ತಾದಾಗ. 6ನೇ ತಾರೀಖು ಪೋಲೀಸಿನವರು ಬಂದುದು. 8ನೇ ತಾರೀಖೂ ಸಹ ಬೆಳಿಗ್ಗೆ ಸೆಕೆಂಡ್ ರೌಂಡ್ ಗಲಾಟೆಯಾಯಿತು. ಆದರೆ ಆಗಲೂ ಕೂಡ ಸಾಕಷ್ಟು ಪೋಲೀಸ್ ಅಧಿಕಾರಿಗಳು ಇರಲಿಲ್ಲ. ಅದಕ್ಕೆ ಬೇರೆ ಕಾರಣಗಳಿವೆ. ಅದು ತಪ್ಪು ಎಂಬುವುದಾಗಿ ನಾನು ಹೇಳುವುದಿಲ್ಲ. ಅವರು ಬೇರೆ ಕಾರಣಗಳಿಂದ ಹೊರಗೆ ಹೋಗಿರಬಹುದು. ಆಗ ಗಲಾಟೆಯಾಗುತ್ತಿದ್ದ ಸ್ಥಳದಲ್ಲಿ ಏನೋ ಶಾಂತಿ ಸಮಾಧಾನ ಮಾಡಿ ಎಲ್ಲ ಪಕ್ಷದವರೂ ಸೇರಿಕೊಂಡು ಒಂದು ಶಾಂತಿ ವಾತಾವರಣವನ್ನು ನಿರ್ಮಿಸಿದೆವು. ಆಗ ಚಿಕ್ಕಮಗಳೂರಿನ ಜನತೆಯ ಮನಸ್ಸಿನಲ್ಲಿ ಶಾಂತಿ ನೆಲಸಿತು. ಅನಂತರ ಇನ್ನೊಂದು ಸಾರಿ ಬಾಂಬು ಸಿಡಿಯಿತು. ಅದು ಏಕೆ ಎಂಬು

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ದನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ವಿಚಾರ ಮಾಡಬೇಕು. ಇಂತಹ ಒಂದು ಕೃತ್ಯಕ್ಕೆ ಯಾರು ಕಾರಣರು ಎಂಬುದನ್ನು ವಿಚಾರ ಮಾಡಿ ಶಿಕ್ಷೆ ಮಾಡಬೇಕೆಂಬುದಾಗಿ ಈಗ ಇಡೀ ಚಿಕ್ಕಮಗ ಳೂರು ಜನರು ಕೇಳುತ್ತಿದ್ದಾರೆ. ಯಾರೇ ಆಗಲೀ ಮುಸಲ್ಮಾನ್ ಆಗಿರಬಹುದು, ಹಿಂದೂ ಆಗಿರ ಬಹುದು. ಈ ಒಂದು ವಿಚಾರವನ್ನು ಸರ್ಕಾರದವರು ಕೂಡಲೇ ವಿಚಾರಣೆ ಮಾಡಬೇಕು. ತಪ್ಪು ಮಾಡಿರುವವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಎರಡನೆಯ ವಿಚಾರ, ಈ ಘಟನೆ ಪ್ರಾರಂಭವಾಗು ವುದಕ್ಕೆ ಕಾರಣ ಕರ್ತರು ಯಾರೆಂಬುದನ್ನು ವಿಚಾರ ಮಾಡಬೇಕು. ಬೆಳೆಯುವ ಮೊಳಕೆಯಲ್ಲಿಯೇ ಚಿವುಟಿದರೆ ಅದು ಮತ್ತೆ ಬೆಳೆಯುವುದಿಲ್ಲವೆಂದು ಹೇಳುವ ಹಾಗೆ ಇದನ್ನು ವಿಚಾರ ಮಾಡಬೇಕೆಂಬು ದಾಗಿ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಆದರೆ ಸರ್ಕಾರ ಇರಲಿಲ್ಲವೋ ಏನೋ ಎಂಬುವಂತೆ ಲಾಲೆಸ್‌ನೆಸ್ ಚಿಕ್ಕಮಗಳೂರಿನಲ್ಲಿ ವ್ಯಾಪಿಸಿತು. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಊರಿಗೆ ದಯಮಾಡಿಸಿದಾಗ ಲಾಲೆಸ್‌ನೆಸ್‌ನ ಪ್ರಸಾದವನ್ನು ಉಂಡಿದ್ದಾರೆ. ಅವರ ಕಾರು ಗಾಜು ಪೂರ್ಣ ವಾಗಿ ಪುಡಿ ಪುಡಿಯಾಯಿತು. ಆಗ ನಾವು ಕಾಂಗ್ರೆಸ್ ಪಕ್ಷ ಮತ್ತು ವಿರೋಧ ಪಕ್ಷವೆಂಬ ಭೇಧ ಭಾವ ಹಾಗೂ ವ್ಯತ್ಯಾಸವನ್ನು ನೋಡದೆ ಒಟ್ಟಿಗೆ ಕೆಲಸ ಮಾಡಿ ಆ ಸಂದರ್ಭದಲ್ಲಿ ಏನೇನು ಸಹಾಯ ಮಾಡಬೇಕೋ ಆ ಸಹಾಯವನ್ನು ಮಾಡಿದ್ದೇವೆ. ಕಾಂಗ್ರೆಸ್‌ನವರಲ್ಲ ವಿರೋಧ ಪಕ್ಷ ದವರು ಇರತಕ್ಕದ್ದು ವಿರೋಧ ಮಾಡುವುದಕ್ಕೇ ಇದ್ದಾರೆಂದು ಅವರ ತಲೆಯಲ್ಲಿ ಹೊಕ್ಕಿದೆ. ಇದನ್ನು ಬಿಡಿಸುವುದು ಬಹಳ ಕಷ್ಟ. ಅದು ಅವರಿಗೆ ಇರಬೇಕಾದುದು ಸಹಜ. ಆದರೆ ಇವತ್ತು ನಡೆದಂಥ ಘಟನೆ ಮಾನ್ಯ ಮುಖ್ಯ ಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ಚಿಕ್ಕ ಮಗಳೂರಿನಲ್ಲಿ ವ್ಯಾಪಿಸಿರತಕ್ಕ ಕೆಟ್ಟ ವಾತಾವರಣವನ್ನು ಸರಿಪಡಿಸುವುದಕ್ಕೆ ಸರ್ಕಾರ ಕೂಡಲೇ ಜವಾಬ್ದಾರಿಯನ್ನು ವಹಿಸಬೇಕೆಂಬುದಾಗಿ ನಾನು ಈ ಸಂದರ್ಭದಲ್ಲಿ ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ. ಕಾಂಗ್ರೆಸ್ಸಿನವರು ಇವತ್ತು ಬಹಳವಾಗಿ ಮಾತನಾಡಿದ್ದಾರೆ. ರಾಜ್ಯ ಪಾಲರ ಭಾಷಣದ ಮೇಲೆ ಅನೇಕ ಜನರು ವಂದನಾರ್ಪಣೆ ಅರ್ಪಿಸುತ್ತಾ ಈ ದೇಶದಲ್ಲಿ ಬಹಳವಾಗಿ ಅಭಿವೃದ್ಧಿಯಾಗಿದೆ. ಎಲ್ಲಾ ಕಡೆಯೂ ಸರ್ವತೋಮುಖವಾಗಿ ಅಭಿವೃದ್ಧಿಯಾಗಿದೆ ಎಂದು ಮಾತ ನಾಡಿದ್ದಾರೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಕಾಂಗ್ರೆಸ್ಸಿನವರು ಗಾಂಧೀಜಿಯವರು ಏನು ಹೇಳಿದ್ದಾರೆಂದರೆ, ಕಾಂಗ್ರೆಸ್ಸನ್ನು ಡಿಸಾಲ್ವ್ ಮಾಡಬೇಕೆಂದು, ಇದನ್ನು ಏಕೆ ವಿಚಾರ ಮಾಡು ತ್ತಿದ್ದೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡಬೇಕಾದರೆ, ಯಾವಾಗಲೂ ಗಾಂಧಿ ಯವರ ಹೆಸರನ್ನು ಎತ್ತಿ ಹಿಡಿದು ಮಾತನಾಡುತ್ತಾರೆ. ಒಂದು ಸಾರಿ ಚಿಕ್ಕಮಗಳೂರಿನಲ್ಲಿ ಇದೇ ರೀತಿ ಗಾಂಧಿಯವರ ಹೆಸರನ್ನೆತ್ತಿ ಅವರು ಭಾಷಣ ಮಾಡಲು ಹೊರಟಾಗ ಅವರಿಗೆ ಅಲ್ಲಿ ಭಾಷಣ ಮಾಡಲು ಅವಕಾಶವನ್ನು ಕೊಡಲಿಲ್ಲ. ಇತ್ತೀಚೆಗೆ ಗಾಂಧಿ ಹೆಸರನ್ನು ಮರೆಯುತ್ತಿದ್ದಾರೆ. ಅದರ ಜೊತೆಗೆ ಶ್ರೀ ಶಾಸ್ತ್ರಿಗಳ ಹೆಸರು ಬೇರೆ ಕೇಳಿಬರುತ್ತಾ ಇದೆ.

ಶ್ರೀ ಎಚ್. ಎನ್. ನಂಜೇಗೌಡ.—ಯಾವ ಶಾಸ್ತ್ರಿ ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿ.

1948ರಲ್ಲಿಯೇ ಗಾಂಧೀಜಿಯವರು ಏನು ಹೇಳಿದ್ದಾರೆಂದರೆ, ಕಾಂಗ್ರೆಸ್ಸನ್ನು ಡಿಸಾಲ್ವ್ ಮಾಡಬೇಕೆಂದು. ಆದ್ದರಿಂದ ಈಗಲಾದರೂ ಕಾಂಗ್ರೆಸ್ಸನ್ನು ಡಿಸಾಲ್ವ್ ಮಾಡಿದರೆ ಈ ದೇಶದಲ್ಲಿ ಒಳ್ಳೆಯದಾಗುತ್ತದೆ. ಅದನ್ನು ಮರೆಯಬಾರದು. ಕಾಂಗ್ರೆಸ್ಸಿನವರು ಏನು ತಿಳಿದುಕೊಂಡಿ ದ್ದಾರೆಂದರೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದುದು ನಮ್ಮಿಂದಲೇ ಎಂದು. ಹೀಗೆ ಹೇಳುತ್ತಾ ಕಾಂಗ್ರೆಸ್ಸಿನವರು ಕಾಂಗ್ರೆಸ್ಸಿನ ಹೆಸರನ್ನೇ ದುರುಪಯೋಗಮಾಡಿಕೊಂಡಿದ್ದಾರೆ. ಇಡೀ 48 ಕೋಟಿ ಜನ ಹೋರಾಟವಾಡಿದ್ದರಿಂದ ಸ್ವಾತಂತ್ರ್ಯ ಬಂತು. ಕೇವಲ ನಾಲ್ಕಾರು ಜನಗಳಿಂದಲಾಗಲೀ ಅಥವಾ ಟ್ರೆಜರಿ ಬೆಂಚಿನಲ್ಲಿ ಕೂತಿರತಕ್ಕ ಸದಸ್ಯರಿಂದಾಗಲಿ ಅದು ಬರಲಿಲ್ಲ. ಆದ್ದರಿಂದ ಈಗಲಾದರೂ ಕಾಂಗ್ರೆಸ್ ಪಕ್ಷದವರು ಕೂಡಲೇ ಅವರ ಕಾಂಗ್ರೆಸ್ ಸಂಸ್ಥೆಯನ್ನು ಡಿಸಾಲ್ವ್ ಮಾಡಬೇಕು. ಏಕೆಂದರೆ ಈಗ ನಮ್ಮ ಕರ್ಣಾಟಕದಿಂದ ಮುಖ್ಯ ಮಂತ್ರಿಗಳು ಎ.ಐ.ಸಿ.ಸಿ. ಅಧ್ಯಕ್ಷರಾಗಿ ಹೋಗಿದ್ದಾರೆ. ಆದ್ದರಿಂದ ಅವರಿಗೆ ಒಳ್ಳೆಯ ಹೆಸರು ಬರಬೇಕಾದರೆ ಇವರ ಕಾಲ ದಲ್ಲಿಯೇ ಈ ಕಾಂಗ್ರೆಸ್ ಸಂಸ್ಥೆಯನ್ನು ಡಿಸಾಲ್ವ್ ಮಾಡಲಿ, ಇಲ್ಲದೇ ಹೋದರೆ ಈ ಸಂಸ್ಥೆ ಅದರಷ್ಟಕ್ಕೆ ಅದೇ ಡಿಸಾಲ್ವ್ ಆಗಿ ಹೋಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಚಿಕ್ಕಮಗಳೂರಿನ ವಿಚಾರದಲ್ಲಿ ಒಂದು ಮಾತು. ನನ್ನ ಮಾನ್ಯ ಸ್ನೇಹಿತರಾದ ಶ್ರೀ ನಂಜೇಗೌಡರು ಆ ಮಾತಿನ ಬಗ್ಗೆ ಈಗಾಗಲೇ ಪ್ರಸ್ತಾಪಮಾಡಿದ್ದಾರೆ. ಅವರು ಅಲ್ಲಿರತಕ್ಕ ಸ್ಮಶಾನದ ವಿಷಯವಾಗಿ ಹೇಳಿದ್ದಾರೆ. ಅಲ್ಲಿ ವರ್ಷಕ್ಕೊಂದು ಸಲ ಉರಸ್ಸನ್ನು ನಡೆಸುತ್ತಿದ್ದಾರೆ. ಅನೇಕ ಕಡೆಗಳಿಂದ ಸುಮಾರು 30ಸಾವಿರ ಜನ ಹಿಂದೂಗಳು ಅದಕ್ಕಾಗಿ ಬರುತ್ತಾರೆ. ಆದರೆ ಈ ವರ್ಷ ಅದನ್ನು ನಿಲ್ಲಿಸಬೇಕೆಂದು ಸರ್ಕಾರಕ್ಕೆ ಪತ್ರವನ್ನು ನಾನು ಬರೆದಿದ್ದೇನೆ. ನಮ್ಮ ಊರಿನಲ್ಲಿರತಕ್ಕ ಒಂದು ಕಹಿ ವಾತಾವರಣ ಏನಿದೆಯೋ ಅದು ಇನ್ನೂ ಹೋಗಿಲ್ಲ. ಅದು ಹೋಗುವುದಕ್ಕೆ ಇನ್ನೂ ಸ್ವಲ್ಪ ದಿವಸಗಳು ಬೇಕಾಗಬಹುದು. ಏನೇ ಅಗಲಿ, ಈ ವರ್ಷ ಉರಸ್ಸನ್ನು ನಡೆಯುವುದಕ್ಕೆ ಖಂಡಿತವಾಗಿ ಅವಕಾಶವನ್ನು ಕೊಡಬಾರದು ಎಂಬುದಾಗಿ ಮಾನ್ಯ ಶ್ರೀ ನಂಜೇಗೌಡರು ಹೇಳಿದ್ದನ್ನು ನಾನು ಪುಷ್ಟೀಕರಿಸಿ ಹೇಳುತ್ತೇನೆ.

ಇನ್ನೊಂದು ಮಾತು ಹೇಳುತ್ತೇನೆ. ಆ ಸ್ಮಶಾನ ಯಾರ ಸ್ವತ್ತೂ ಅಲ್ಲ. ಹಿಂದೂಗಳ ಸ್ವತ್ತೂ ಅಲ್ಲ. ಅದು ಮುನಿಸಿಪಾಲಿಟಿಗೆ ಸಂಬಂಧಪಟ್ಟ ಜಮೀನು. ಆ ಸ್ಮಶಾನ ಇದ್ದರೆ ಖಂಡಿತವಾಗಿ ಈ ಜಗಳ ಹೋಗುವುದಿಲ್ಲ. ಒಂದಲ್ಲ, ಒಂದು ದಿವಸ ಈ ಜಗಳ ಪುನಃ ಪ್ರಾರಂಭವಾಗಬಹುದು. ನನಗೆ ತಿಳಿದಮಟ್ಟಿಗೆ ಅಲ್ಲಿರತಕ್ಕ ಮುಸಲ್ಮಾನರ ಲೀಡರ್ ಸಹಕಾರ ನೀಡಿ ಕಲ್ಲುಗಳನ್ನು ಹಾಕಿ ಹಿಂದೂಗಳು ಸ್ಮಶಾನಕ್ಕೆ ಹೋಗದ ರೀತಿಯಲ್ಲಿ ಮಾಡಿದ್ದರು. ಅದನ್ನು ಅವರೇ ಈಗ ಖುಲ್ಲಾ ಮಾಡಿಕೊಟ್ಟಿದ್ದಾರೆ. ಅದರೂ ಕೂಡ ಆ ರುದ್ರಭೂಮಿಯನ್ನು ಕೂಡಲೇ ಬದಲಾವಣೆ ಮಾಡುವುದು ಯೋಗ್ಯ. ಏಕೆಂದರೆ ನಾನು ಹಿಂದೆ ಹೇಳಿದ ಹಾಗೆ ಒಂದಲ್ಲ ಒಂದು ದಿವಸ ನಿಜವಾಗಿ ಪುನಃ ಜಗಳ ಆಗುವ ಪರಿಸ್ಥಿತಿ ಬರಬಹುದು. ಇದಕ್ಕೆ ಖಂಡಿತವಾಗಿ ಸರ್ಕಾರದವರು ಅವಕಾಶವನ್ನು ಕೊಡಕೂಡದು. ಆದ್ದರಿಂದ ಆ ರುದ್ರಭೂಮಿಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಬೇರೆ ಜಾಗವನ್ನು ಕೊಡುವ ವ್ಯವಸ್ಥೆ ಮಾಡಿ ಹಿಂದೂಗಳಿಗೇ ಇಷ್ಟು ಜಾಗ, ಮುಸಲ್ಮಾನರಿಗೇ ಇಷ್ಟು ಜಾಗವೆಂದು ಸಹಾಯಮಾಡಿದರೆ, ಮುಂದೆ ಚಿಕ್ಕಮಗಳೂರಿನಲ್ಲಿ ಇಂತಹ ಕೋಮುವಾರು ಭಾವನೆ, ಗೊಂದಲ ವಾಗುವುದಿಲ್ಲವೆಂದು ನಾನು ಈ ಸಭೆಯಲ್ಲಿ ಭರವಸೆ ಕೊಡುತ್ತೇನೆ.

ಈ ಒಂದು ಸಂದರ್ಭದಲ್ಲಿ ನಮ್ಮ ಸ್ನೇಹಿತರು ಹೇಳಿದರು ಅಲ್ಪಸಂಖ್ಯಾತರಿಗೆ ತುಂಬಾ ಹಾನಿ ಯಾಗಿದೆ ಅದನ್ನು ವಿಚಾರಮಾಡಬೇಕು ಎಂದು. ಯಾರದು ತಪ್ಪು ಯಾರದು ಸರಿ ಎನ್ನುವುದನ್ನು ನಾನು ಈ ಮನೆಯಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಅದರೂ ಕೂಡ ಅಲ್ಪ ಸಂಖ್ಯಾತರಿಗೆ ಎಲ್ಲಾ ಪಕ್ಷದವರೂ ಸೇರಿ ಹೆಚ್ಚಿನ ರೀತಿಯಲ್ಲಿ ಪ್ರೊಟೆಕ್ಷನ್ ಕೊಟ್ಟಿದ್ದೇವೆ, ಸಹಾಯ ಮಾಡಿದ್ದೇವೆ. ಎಲ್ಲಾ ರೀತಿಯ ಸಹಕಾರ ಮತ್ತು ಸಹಾಯವನ್ನು ನಾವು ನೀಡಿದ್ದೇವೆ ಎನ್ನುವ ವಿಚಾರವನ್ನು ನಾನು ಸರ್ಕಾರಕ್ಕೆ ಮತ್ತು ಈ ಸಭೆಗೆ ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಚಾರವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ನಾನು ಇಚ್ಛೆಪಡುತ್ತೇನೆ. ಅದು ಏನೆಂದರೆ ಅಜ್ಜಂಪುರದ ವಿಚಾರ. ಅಜ್ಜಂಪುರದಲ್ಲಿ ಅಂತರ ಗಟ್ಟೆ ಜಾತ್ರೆ ನಡೆಯುತ್ತದೆ. ಅಲ್ಲಿ ಯಾರೋ ಪುಂಡರು ಪೋಲಿಗಳು ಕೆಲವರು ಗಲಾಟೆಯನ್ನು ಶುರು ಮಾಡಿದರು. ಅದು ಯಾವರೀತಿ ಪರಿಣಮಿಸಿತು ಎಂದರೆ ಅದು ರಾಜಕೀಯಕ್ಕೆ ಎಡೆ ಕೊಟ್ಟಿತು ಎಂದು ಹೇಳುವುದಕ್ಕೆ ನಾನು ಇಷ್ಟ ಪಡುತ್ತೇನೆ. ಅಜ್ಜಂಪುರದಲ್ಲಿ ಶುರುವಾದ ಗಲಾಟೆಯಿಂದ ತರೀಕೆರೆಯವರಿಗೆ ಹೊಡೆದಾಟವಾಯಿತು. ಆ ಹೊಡದಾಟದ ಸಂದರ್ಭದಲ್ಲಿ ರಸ್ತೆಯಲ್ಲಿ ತಿರುಗಾಡುವ ವಾಹನಗಳನ್ನು ನಿಲ್ಲಿಸಿ ಅನೇಕ ಜನ ತೊಂದರೆಯನ್ನು ಮಾಡಿದರು. ಅದಕ್ಕೆ ಕಾರಣರು ಯಾರು ಎಂಬುದನ್ನು ವಿಚಾರ ಮಾಡಬೇಕು. ಆ ಸಂದರ್ಭದಲ್ಲಿ ನಮ್ಮ ತರೀಕೆರೆಯಿಂದ ಚುನಾಯಿತರಾಗಿ ಬಂದಿರತಕ್ಕ ಶ್ರೀ ಹಂಜಿ ಶಿವಣ್ಣನವರನ್ನು ಅವರ ಮನೆಗೆ ನುಗ್ಗಿ ಅವರನ್ನು ಹೊತ್ತುಕೊಂಡು ಹೋಗಿ ಮರ್ಡರ್ ಮಾಡುವ ವಿಚಾರ ಇತ್ತು ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದೇ ರೀತಿ ಅನೇಕ ಜನ ಮುಂದಾಳುಗಳನ್ನು ಚೆನ್ನಾಗಿ ಹೊಡೆದು ಅವರಿಗೆ ಮೂಳೆ ಮುರಿದುಹೋಗಿ ಅವರನ್ನು ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿದ್ದಾರೆ. ಇದರಿಂದಾಗಿ ಅಜ್ಜಂಪುರ ಮತ್ತು ತರೀಕೆರೆಯಲ್ಲಿರತಕ್ಕ ಈಬೆಂಕಿ ಇನ್ನೂ ಪೂರ್ಣವಾಗಿ ನಂದಿಲ್ಲ. ಇದನ್ನು ಸರ್ಕಾರ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಏನೋ ದೈವವಶಾತ್ ಯಾರೋ ಬಂದು ಶ್ರೀಮಾನ್ ಹಂಜಿ ಶಿವಣ್ಣನವರ ಪ್ರಾಣವನ್ನು ಉಳಿಸಿಕೊಂಡರು. ಇದು ರಾಜಕೀಯ. ಯಾರೋ ಹಿಂದೆ ಕಾಂಗ್ರೆಸ್ ನವರು ಚುನಾವಣೆಯಲ್ಲಿ ಸೋತವರು ಈ ಕೆಲಸವನ್ನು ಮಾಡಿಸಿದ್ದಾರೆಂದು ನಮಗೆ ತಿಳಿದುಬಂತು. ಇದನ್ನು ಸರ್ಕಾರದವರು ವಿಚಾರ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಸ್ವಾಮಿ, ರಾಜ್ಯಪಾಲರ ಭಾಷಣದಲ್ಲಿ ರಾಜ್ಯದಲ್ಲಿ ಏನಾಗಿದೆ, ಏನಾಗುತ್ತಿದೆ, ಎನ್ನುವ ಮಾತು ಸ್ಪಷ್ಟವಾಗಿ, ಪೂರ್ಣವಾಗಿ ಇಲ್ಲದಿದ್ದರೂ ಇದರಲ್ಲಿ ಸಂಕ್ಷಿಪ್ತವಾಗಿ ರೆಫರೆನ್ಸ್ ಕೊಟ್ಟಿದ್ದಾರೆ. ಒಂದು ಮಾತು ನಾನು ಹೇಳಬೇಕಾಗಿದೆ. ಸೋಷಿಯಲಿಜಮ್ ಬಗ್ಗೆ ನಾನು ಒಂದು ಮಾತು ಹೇಳುವುದಕ್ಕೆ ಬಯಸುತ್ತೇನೆ. ನಾವು ಈ ಪ್ರಿನ್ಸಿಪಲ್ ಒಪ್ಪಿದ್ದೇವೆ ಈ ಪ್ರಿನ್ಸಿಪಲ್ ಪ್ರಕಾರ ನಾವು ಎಷ್ಟರಮಟ್ಟಿಗೆ ನಡೆದಿದ್ದೇವೆ, ಎಷ್ಟರಮಟ್ಟಿಗೆ ನಮ್ಮ ಸಾಧನೆಯನ್ನು ಮಾಡಿದ್ದೇವೆ, ಎಷ್ಟು ಉಪಯೋಗ ಮಾಡಿದ್ದೇವೆ ಎನ್ನುವ ಮಾತು ಬರಲಿಲ್ಲ. ಸಮಾಜವಾದದ ಧ್ಯೇಯವನ್ನು ದೇಶದಲ್ಲಿ ಯಾವ ಯಾವ ಮಾರ್ಗದಲ್ಲಿ ಉಪಯೋಗ ಮಾಡುವುದು ಇದೆ, ಮತ್ತು ಎಷ್ಟರಮಟ್ಟಿಗೆ ಅದನ್ನು ಉಪಯೋಗ ಮಾಡಲಿಕ್ಕೆ ಸಾಧ್ಯವಾಯಿತು, ಮತ್ತು ಇನ್ನೂ ಯಾವ ಮಾರ್ಗದಲ್ಲಿ ಅದನ್ನು ಉಪಯೋಗ ಮಾಡುವುದಕ್ಕೆ ಅವಕಾಶವಿದೆ ಎಂಬುದು ಇದರಲ್ಲಿ ಬರಬೇಕಾದ್ದು ಅವಶ್ಯಕವಿತ್ತು. ಅದು ಬರಲಿಲ್ಲ. ಅದು ಬರುವುದು ಅವಶ್ಯಕ. ಒಂದು ಮಾತನ್ನು ವ್ಯವಸಾಯದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಬಹಳ ಸಂಕ್ಷೇಪವಾಗಿ ಕೊಟ್ಟಿದ್ದಾರೆ. ಎಷ್ಟು ಟ್ರ್ಯಾಕ್ಟರು, ಎಷ್ಟು ಗೊಬ್ಬರ ಸರ್ಕಾರದಿಂದ ಸಪ್ಲೈ ಮಾಡಿದ, ಎಷ್ಟು ಜನಗಳು ಅದನ್ನು ಉಪಯೋಗ ಮಾಡುವ ಸಲುವಾಗಿ ಕೆಲಸ ಮಾಡಲಾಗಿದೆ ಇತ್ಯಾದಿ ವಿಷಯಗಳನ್ನು ಇದರಲ್ಲಿ ಕೊಡಬೇಕಾಗಿತ್ತು. ಇವೊತ್ತಿನ ದಿವಸ ದೇಶದಲ್ಲಿ ಯಾವ ಯಾವ ನದಿಗಳಿಂದ, ಬಾವಿಗಳಿಂದ ಎಲ್ಲೆಲ್ಲಿ ನೀರಾವರಿ ಸೌಲಭ್ಯಗಳನ್ನು ಪಡೆದುಕೊಂಡು ಅದನ್ನು ಉಪಯೋಗ ಮಾಡಿಕೊಂಡು ಎಷ್ಟರಮಟ್ಟಿನ ಒಂದು ಅಭಿವೃದ್ಧಿಯನ್ನು ಸಾಧನೆ ಮಾಡಬೇಕಾಗಿತ್ತೋ ಅಷ್ಟು ಆಗಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಮಾತು ಹೀಗಾಗುತ್ತದೆ ಆ ಮಾತು ಹಾಗಾಗುತ್ತದೆ ಎಂದು ಇದನ್ನು ಪಾರ್ಟಿ ದೃಷ್ಟಿಯಿಂದ ವಿಚಾರಮಾಡುವುದಕ್ಕೆ ಸಾಧ್ಯವಿಲ್ಲ. ಭಾಷಾ ವಿಷಯವಾಗಲಿ, ಗಡಿ ವಿಷಯವಾಗಲೀ ಅಭಿವೃದ್ಧಿ ವಿಷಯವಾಗಲೀ ಇದು ರಾಜಕೀಯವಲ್ಲ, ಇದು ಜನತೆಗೆ ಸಂಬಂಧಪಟ್ಟ ವಿಷಯ. ಕಾರಣ ಇದನ್ನು ಗಂಭೀರತೆಯಿಂದ ವಿಚಾರ ಮಾಡುವುದು ಅವಶ್ಯಕವಿದೆ. ನಾನೊಬ್ಬ ಕಾಂಗ್ರೆಸ್ ಸದಸ್ಯನಾದರೂ ಈ ವಿಷಯದಲ್ಲಿ ಸರ್ಕಾರದ ತಪ್ಪು ಇದೆ ಎಂದು ನಾನು ತಮ್ಮ ಮುಂದೆ ಇಡುತ್ತೇನೆ. ವ್ಯವಸಾಯದ ಬಗ್ಗೆ ಇವೊತ್ತಿನದಿವಸ ಏನು ಹೇಳಿದರೂ, ಸೋಷಿಯಾಲಿಜಮ್ ಬಗ್ಗೆ ಏನು ಮಾತು ಆಡಿದರೂ, ಅದರ ಬಗ್ಗೆ ಎಷ್ಟರಮಟ್ಟಿನ ಒಂದು ಗುರಿಯನ್ನು ಮುಟ್ಟಬೇಕೋ ಆ ಗುರಿಯನ್ನು ಮುಟ್ಟುವ ಸಲುವಾಗಿ ಜನತೆಗೆ, ರೈತರಿಗೆ ಎಷ್ಟು ಸಾಲವನ್ನು ಹಂಚಬೇಕಾಗಿದೆ, ಎಷ್ಟು ಬೀಜವನ್ನು ಹಂಚಬೇಕಾಗಿದೆ, ಏನೇನು ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ ಅದು ಆಗುತ್ತಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ 5 ಭಾಗಗಳಿಂದ ಬಂದ ಪ್ರದೇಶಗಳು ಸೇರಿದ್ದರಿಂದ ಯಾವ ಭಾಗ ಮುಂದುವರಿದಿದೆ ಯಾವ ಭಾಗದಲ್ಲಿ ನೀರಾವರಿ ಸೌಲಭ್ಯ ಕಡಿಮೆ ಇದೆ, ಯಾವ ಭಾಗದಲ್ಲಿ ನೀರಾವರಿ ಸೌಲಭ್ಯ ಹೆಚ್ಚು ಇದೆ, ಯಾವ ಭಾಗದಲ್ಲಿ ರಸ್ತೆ ಇತ್ಯಾದಿ ಸೌಕರ್ಯ ಹೆಚ್ಚು ಇದೆ, ಯಾವ ಭಾಗದಲ್ಲಿ ಕಡಿಮೆ ಇದೆ ಎಂಬುದನ್ನು ನೋಡಿಕೊಂಡು ಎಲ್ಲಾಕಡೆಗೂ ಸರಿಸಮನಾಗಿ ಮಾಡುವ ಸಲುವಾಗಿ ಏನು ಕೆಲಸವನ್ನು ಮಾಡಬೇಕಾಗಿತ್ತೋ ಅದನ್ನು ಮಾಡುವ ಸಲುವಾಗಿ ಇದರಲ್ಲಿ ಸರ್ಕಾರದ ಧೋರಣೆ ಸ್ಪಷ್ಟವಾಗಿ ಇಲ್ಲ. ಯಾವ ಸರ್ಕಾರವೇ ಇರಲಿ. ಯಾವ ಪಾರ್ಟಿ ಇರಲಿ, ಯಾವುದೇ ಪ್ರಿನ್ಸಿಪಲ್ ಇರಲಿ, ಯಾರೇ ಇರಲಿ ಆ ಒಂದು ಧೋರಣೆ ಇದರಲ್ಲಿ ಇರಬೇಕಾಗಿತ್ತು ಎಂದು ನಾನು ಹೇಳಬಯಸುತ್ತೇನೆ. ಹೈದರಾಬಾದ್ ಪ್ರದೇಶದಿಂದ ಕೆಲವು ಭಾಗಗಳು ಬಂದು ಮೈಸೂರು ರಾಜ್ಯದಲ್ಲಿ ಸೇರಿವೆ. ಇದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಈ ಪ್ರದೇಶ ಹಿಂದುಳಿದಿದೆ ಎಂದು ಸ್ಪಷ್ಟವಾಗಿದೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ಗೋದಾವರಿ ನೀರಿನ ಹಂಚಿಕೆಯ ಬಗ್ಗೆ ಮತ್ತು ಯೋಜನೆಗಳ ಬಗ್ಗೆ ಏನೂ ಹೇಳಲಿಲ್ಲ. ಕೃಷ್ಣಾ ಗೋದಾವರಿ ನದಿಗಳ ನೀರಿನ ಹಂಚಿಕೆಯ ವಿವಾದದ ಬಗ್ಗೆ ಬಹಳ ದೊಡ್ಡ ಚರ್ಚೆ ಈ ಸಭೆಯಲ್ಲಿ ನಡೆದಿದೆ. ಆದರೆ ಗೋದಾವರಿ ನದಿಯ ಬೇಸಿನ್‌ನಲ್ಲಿ ಇಲ್ಲಿಯವರೆಗೂ ಯಾವ ಪ್ರಾಜೆಕ್ಟನ್ನು ತಗೆದುಕೊಳ್ಳಲಿಲ್ಲ. ಒಂದು ಪ್ರಾಜೆಕ್ಟ್ ತಯಾರು ಇದೆ. ಬೀದರನಲ್ಲಿ ಕಾರಂಜಿ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕಾಗಿದೆ. ಇದುವರೆಗೂ ಅದನ್ನು ತೆಗೆದುಕೊಳ್ಳಲಿಲ್ಲ. ಅದರ ಎಸ್ಟಿಮೇಟ್ ತಯಾರಾಗಿ 14 ವರ್ಷಗಳಾದುವು. ಈ ಬೀದರ್ ಜಿಲ್ಲೆಯು ಹೈದರಾಬಾದಿನಲ್ಲಿದ್ದಾಗಲೇ ಈ ಕಾರಂಜಿಯೋಜನೆಯ ಎಸ್ಟಿಮೇಟು ತಯಾರಾಗುತ್ತಿತ್ತು. ಇವೊತ್ತು ಅದರ ಎಸ್ಟಿಮೇಟು ಸಂಪೂರ್ಣವಾಗಿ ತಯಾರಾದರೂ ಕೂಡ ಆ ಯೋಜನೆಯನ್ನು ತಗೆದುಕೊಳ್ಳುವ ಬಗ್ಗೆ ನಮ್ಮ ಸರ್ಕಾರದವರು ಕೈ ಹಾಕಲಿಲ್ಲ; ತೆಗೆದುಕೊಳ್ಳಲಿಲ್ಲ ಇದು ದುರ್ಲಕ್ಷ್ಯಮಾಡುವ ಮಾತು ಎಂದು ನಾನು ಸರ್ಕಾರದಲ್ಲಿ ಹೇಳುತ್ತೇನೆ. ಇವೊತ್ತು ಬೇಕಾದರೆ ಯಾರಾದರೂ ಹೋಗಿ ನೋಡಿರಿ, ಬೀದರ್ ಜಿಲ್ಲೆಯಿಂದ ಅಕ್ಕಿ, ಜೋಳ ಮತ್ತು ಗೋಧಿಯನ್ನು 12-14 ಜಿಲ್ಲೆಗಳಿಗೆ ಸಪ್ಲೈ ಮಾಡುತ್ತಿದ್ದರು. ಅಲ್ಲಿ ಅಷ್ಟು ಒಳ್ಳೆಯ ಭೂಮಿ ಇದ್ದರೂ ಕೂಡ ಅಲ್ಲಿಗೆ ಯಾವ ತರಹದ ನೀರಾವರಿ

ಸೌಲಭ್ಯವನ್ನೂ ಸರ್ಕಾರದವರು ಒದಗಿಸಿಕೊಟ್ಟಿಲ್ಲ. ಅಲ್ಲಿ ಬರೀ ಬಾವಿಯಿಂದ ವ್ಯವಸಾಯವನ್ನು ಮಾಡುತ್ತಿದ್ದಾರೆ. ಎರಡು ಅಲ್ಲಿ ಮೂರು ಸಾವಿರ ಬಾವಿಗಳನ್ನು ಉಪಯೋಗ ಮಾಡುತ್ತಿದ್ದಾರೆ. ಅದರೂ ಅಲ್ಲಿ ನೀರು ಕಡಿಮೆಯಾಗಿದೆ. ಕಾರಂಜಿ ಪ್ರಾಜೆಕ್ಟ್ ಆಗದ ಹೊರತು ಯಾವ ಕೆರೆಯೂ ಆಗುವುದಿಲ್ಲ, ಯಾವ ಪ್ರಾಜೆಕ್ಟೂ ಆಗುವುದಿಲ್ಲ. ಬಾವಿ ನೀರಿನಿಂದ ಹೆಚ್ಚು ನೀರಾವರಿ ವ್ಯವಸಾಯ ವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೀದರ್ ಜಿಲ್ಲೆಯ ಎಲ್ಲಾ ಪಾರ್ಟಿಯ ಲೆಜಿಸ್ಲೇಟರು ಗಳೂ ಎಷ್ಟೋ ಸಾರಿ ಮುಖ್ಯಮಂತ್ರಿಗಳಿಗೂ ಮತ್ತು ಸರ್ಕಾರಕ್ಕೂ ಈ ವಿಷಯದಲ್ಲಿ ಮನವಿಯನ್ನು ಸಲ್ಲಿಸಿದ್ದಾರೆ. ಆದರೆ ಇದುವರೆವಿಗೂ ಸರ್ಕಾರದವರು ಈ ಕೆಲಸಕ್ಕೆ ಕೈಹಾಕಿಲ್ಲ ಎಂದು ವಿಷಾದ ಪಡುತ್ತಿದ್ದಾರೆ. ಅದ್ದರಿಂದ ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಯಾವ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳುವುದಕ್ಕೆ ತಯಾರಿದೆ ಅದನ್ನು ಕೂಡಲೇ ತೆಗೆದುಕೊಳ್ಳಬೇಕು.

ಶ್ರೀಮಾನ್ ನಿಜಲಿಂಗಪ್ಪನವರು ಯಾರಾದರೂ ಸ್ವಲ್ಪ ಸಾರ್ವಜನಿಕರು ಸಹಾಯ ಮಾಡಿದರೆ ನಾವು ಕೆಲಸ ತಗೆದುಕೊಳ್ಳಬಹುದು ಎಂದು ಹೇಳುತ್ತಿದ್ದಾರೆ. ಈ ರೀತಿ ಹೇಳುವುದು ಸರಿಯಲ್ಲ. ಈ ನೀರಾವರಿ ಯೋಜನೆಯನ್ನು ಮಾಡಿದರೆ, ಸಾವಿರಾರು ಎಕರೆ ಜಮೀನುಗಳಲ್ಲಿ ಸಾಗುವಳಿ ಮಾಡಲು ಅನುಕೂಲವಾಗುತ್ತದೆ. ಇದರಿಂದ ಮೈಸೂರಿನ ಬೇರೆ ಭಾಗಗಳಲ್ಲಿ ಎಷ್ಟು ಬೆಳೆಯಾಗು ತ್ತದೆಯೋ ಅದರ ಹತ್ತರಷ್ಟು ಬೆಳೆ ಬೆಳೆಯಬಹುದು. ಇವತ್ತಿನ ದಿವಸ ಈ ಸೋಲ್ಪಿ ಯಲಿಸಂ ಎಂದು ನಾವು ಏನು ಹೇಳುತ್ತಿದ್ದೇವೆ, ಅದನ್ನು ಪರಿಪಾಲಿಸಿಕೊಂಡು ಬರಬೇಕು. ಇಷ್ಟು ದಿವಸ ಇದನ್ನು ಅಲಕ್ಷ ಮಾಡಿದ್ದರೂ, ಈಗಲಾದರೂ ದಯವಿಟ್ಟು ಅದಕ್ಕೆ ಲಕ್ಷ್ಯ ಕೊಟ್ಟು ಮಾಡಬೇಕೆಂದು ಪಾರ್ಥನ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಬೀದರ್ ಜಿಲ್ಲೆ ಬಹಳ ಹಿಂದುಳಿದ ಪ್ರದೇಶ, ಅದನ್ನು ದುರ್ಲಕ್ಷ್ಯ ಮಾಡುತ್ತಿದ್ದಾರೆ. ಇನ್ನು ಮುಂದಾದರೂ ಹಾಗೆ ಮಾಡದೆ, ರೈತವರ್ಗದವರಿಗೆ, ಅನುಕೂಲವಾಗುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಸರ್ಕಾರದವರು ಮಾಡುತ್ತಾರೆಂದು ತಿಳಿದುಕೊಳ್ಳುತ್ತೇನೆ.

ಇನ್ನು ಭಾಷೆಯ ಬ್ಗಗೆ ಒಂದು ಮಾತು ಹೇಳುತ್ತೇನೆ. ಬಹಳ ದಿವಸಗಳಿಂದ, ಒಂದು ತಿಂಗಳಿನಿಂದ ಈ ಭಾಷೆಯ ವಿಚಾರ ಚರ್ಚೆಯಾಗುತ್ತಿದ. ದಹಲಿಯಿಂದ ಹಳ್ಳಿಯವರೆಗೂ ಈ ವಿಚಾರ ಬಂದಿದೆ. ನಮ್ಮ ಹೈದರಾಬಾದದಲ್ಲಿ ನನ್ನ ಕ್ಷೇತ್ರದ ಕರ್ಣಾಟಕದ ವಿಚಾರ ಹೇಳುವುದಾದರೆ, ಈ ಹಿಂದಿ ಭಾಷೆ ರಾಷ್ಟ್ರಭಾಷೆಯಾಗಬೇಕೆಂಬುದರಲ್ಲಿ ಯಾರಿಗೂ ವಿರೋಧವಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಈ ವಿಚಾರದಲ್ಲಿ ಒಂದು ತಿದ್ದುಪಡಿ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಹೇಳುವುದಾದರೆ, ಬೆಂಗಳೂರು ಮತ್ತು ಮೈಸೂರು ಬಿಟ್ಟು, ಈ ಭಾಷೆಯ ಬಗ್ಗೆ ಬೇರೆ ಯಾವ ಕಡೆಗಳಲ್ಲಿಯಾ ಗೊಂದಲ, ಪ್ರತಿಭಟನೆಯಾಗಲಿಲ್ಲವೆಂದು ಹೇಳಬಹುದು. ನಮ್ಮ ಹೈದರಾಬಾದು ಕರ್ಣಾಟಕದವರಿಗೆ, ಬೊಂಬಾಯಿ ಕರ್ಣಾಟಕದವರಿಗೆ ಹಿಂದಿ ವಿಚಾರದಲ್ಲಿ ನಂಬಿಕೆ ಇದೆ. ಈ ಹಿಂದಿ ಭಾಷೆಯನ್ನ ಕಳೆದ 20 ವರ್ಷಗಳಿಂದಲೂ ನಿರ್ಲಕ್ಷ್ಯ ಮಾಡಿದ ಕಾರಣ ಇಂದು ಈ ರೀತಿಯಾಗಿದೆ. ಇಲ್ಲದಿದ್ದರೆ. ಎಲ್ಲರೂ ಅಭಿರುಚಿ ತೆಗೆದುಕೊಂಡು ಸುಧಾರಣೆ ಮಾಡುತ್ತಿದ್ದರು ಮತ್ತು ಈ ರೀತಿಯ ಪ್ರಸಂಗ ಬರುತ್ತಿರಲಿಲ್ಲ. ಅದ್ದರಿಂದ ನಮ್ಮ ಸರ್ಕಾರ ಎಷ್ಟು ಸಾಧ್ಯವಿದೆಯೋ, ಅಷ್ಟು ಈ ರಾಷ್ಟ್ರ ಭಾಷೆಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ಉತ್ತರಪ್ರದೇಶಗಳಲ್ಲಿ ಹಿಂದಿ ಭಾಷೆ ಮಾತಾಡುತ್ತಿದ್ದಾರೆ. ಅವರಿಗೆ ಎರಡೇ ಭಾಷೆಯಾಗುತ್ತದೆ. ಅವರು ಕೂಡ ಮೂರು ಭಾಷೆ ಕಲಿಯಲೇಬೇಕೆಂದು ನಾವು ಚಳುವಳಿ ಹೂಡುವುದು ಸರಿಯಲ್ಲ. ಯಾವಾಗ ಹಿಂದಿ ಭಾಷೆ ಯನ್ನು ರಾಷ್ಟ್ರಭಾಷೆಯಾಗಿ ಒಪ್ಪಿದ್ದೇವೋ, ಅದರ ಪ್ರಕಾರ ಭಿನ್ನ ಭಾವ, ಭೇದ ಭಾವ ಇಟ್ಟು ಕೊಂಡು ಈ ರೀತಿಯ ಅನ್ಯಾಯಗಳನ್ನು ಹಾನಿಯನ್ನು ಉಂಟು ಮಾಡುವುದು ಸರಿಯಲ್ಲ.

ಇನ್ನು ಈ ಒಂದು ಗಡಿಯ ಸಮಸ್ಯೆಯ ಬಗ್ಗೆ ಮಹಾಜನ್ ವರದಿ ಬಂದಿದೆ. ಈ ವಿಚಾರದಲ್ಲಿ ಎಲ್ಲಾ ಪಕ್ಷಗಳಲ್ಲಿಯೂ ಏಕಾಭಿಪ್ರಾಯವಿದೆ. ಈ ವಿಚಾರದಲ್ಲಿ ಅನೇಕ ಸತ್ಯಾಗ್ರಹ ಚಳವಳಿಗಳು ನಡೆದವೆ. ಇದನ್ನು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ನ್ಯಾಷನಲ್ ಕಾನ್‌ಸೆನ್ಸಸ್‌ಗೆ ಒಪ್ಪಿದರೂ, ನಾವು ಅದಕ್ಕೆ ಒಪ್ಪಬಾರದು. ಬೀದರ್ ಜಿಲ್ಲೆಯ ಶಾಸಕರು ಕಾಂಗ್ರೆಸ್ ಕಮಿಟಿಯಲ್ಲಿ ರಿಸೊಲ್ಯೂಶನ್ ಮಾಡಿ ಇಲ್ಲಿ ಕೊಟ್ಟಿದ್ದಾರೆ. ಈಗಲೂ ನಾನು ನಿಜಲಿಂಗಪ್ಪನವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವು ಅದರಲ್ಲಿ, ಅಧ್ಯಕ್ಷರಾಗಿದ್ದೀರಿ, ಮುಖ್ಯ ಮಂತ್ರಿಯಾಗಿದ್ದೀರಿ. ನೀವು ಯಾವುದೇ ರೀತಿಯಲ್ಲಿ ಈ ನ್ಯಾಷನಲ್ ಕಾನ್ಸೆನ್ಸಸ್‌ಗೆ ಒಪ್ಪಬಾರದು. ಬೇರೆ ಪಕ್ಷದವರೂ ಇದಕ್ಕೆ ಬೆಂಬಲ ಕೊಟ್ಟಿದ್ದಾರೆ. ಈ ಮಹಾಜನ್ ವರದಿಯನ್ನು ಜಾರಿಯಲ್ಲಿ ಕೂಡಲೇ ತರಲೇಬೇಕು ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ಎಸ್. ಭೀಮಣ್ಣ)

12-30 P.M.

ಇನ್ನು ಮಾನ್ಯ ಕಂದಾಯ ಸಚಿವರಾದ ರಾಚಯ್ಯನವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಹಿಂದೆ 14 ವರ್ಷಗಳ ಮೊದಲು ಬಿದಾರ್ ಜಿಲ್ಲೆಯಲ್ಲಿ ಜಹಗೀರುದಾರರ ಕಾಲದ ಲ್ಯಾಂಡ್ ರೆವೆನ್ಯೂ ಏನು ಇತ್ತೋ, ಅದರ ಎರಡು ಪಾಲಿಗಿಂತಲೂ ಜಾಸ್ತಿಯಾಗಿದೆ. ಇದರಲ್ಲಿ ಸುಮಾರು ತರದ ಕ್ಯಾಟಗರಿ ಇದೆ. ಇದರ ಕಡೆ ಮಾನ್ಯ ಸಚಿವರು ಗಮನಕೊಟ್ಟು ಅಲ್ಲಿನ ಜನರಿಗೆ ಅನುಕೂಲ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಒಬ್ಬ ಮನುಷ್ಯನಿಗೆ ತನ್ನ ಸಂಪೂರ್ಣ ಸ್ವತ್ತನ್ನು ಮಾರಿದರೂ ರೆವೆನ್ಯೂ ಅಸೆಸಮೆಂಟ್ ಕೊಡುವುದು ಸಾಧ್ಯವಿಲ್ಲ. ಈ ವಿಚಾರದ ಬಗ್ಗೆ ಮಾನ್ಯ ರಾಚಯ್ಯನವರಿಗೆ ಮನವಿಗಳನ್ನು ಮಾಡಿದ್ದಾರೆ. ಅದರೂ ಈಗ ಕೂಡ ಅವರಿಗೆ ಈ ವಿಚಾರಕ್ಕೆ ಸ್ವಲ್ಪಗಮನ ಹರಿಸುವಂತೆ ಮನವಿ ಮಾಡಿಕೊಳ್ಳುತ್ತೇನೆ. ಅವರು ಇದಕ್ಕೆ ಒಂದು ಕಮಿಶನ್ ಮಾಡಿ ಅಲ್ಲಿಯ ಜನರಿಗೆ ತೊಂದರೆಯಾಗುವುದನ್ನು ನಿವಾರಣೆ ಮಾಡುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೀದರ್ ಜಿಲ್ಲೆಯಲ್ಲಿ ರೆವೆನ್ಯೂ ಅಸೆಸ್‌ಮೆಂಟು ಈಗ ಮಾಡಿರುವುದು ಸರಿಯಿಲ್ಲ. ಒಂದೊಂದು ಕಡೆ ಒಂದೊಂದು ರೀತಿಯಾಗಿದೆ. ಒಂದು ರೂಪಾಯಿ ಇರುವ ಕಡೆಗೆ ನಾಲ್ಕು ಹಾಗೂ ಎಂಟು ರೂಪಾಯಿಗಳಷ್ಟು ಹೆಚ್ಚು ಬಿದ್ದಿದೆ. ಇದರ ಬಗ್ಗೆ ಸರಿಯಾದ ಒಂದು ಸ್ಟ್ಯಾಂಡರ್ಡ್‌ನ್ನು ಅನುಸರಿಸದೇ ಮಾಡಿರುವುದರಿಂದ ಇಲ್ಲಿನ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ಇಲ್ಲಿನ ಜನರು ಸರಕಾರಕ್ಕೆ ಬೇಕಾದಷ್ಟು ರೆಪ್ರಸೆಂಟೇಷನ್‌ಗಳನ್ನೂ ಕೂಡ ಕೊಟ್ಟಿದ್ದಾರೆ. ಇದರ ಬಗ್ಗೆ ಸರಕಾರ ಲಘುವಾಗಿ ಹೇಳುವುದು ಸರಿಯಿಲ್ಲ. ಇದನ್ನೆಲ್ಲಾ ಸರಿಯಾಗಿ ಗಮನಕ್ಕೆ ತೆಗೆದುಕೊಂಡು ಯಾವ ಯಾವ ವರ್ಗದ ಭೂಮಿ ಯಾವ ಯಾವ ರೀತಿಯಾಗಿರಬೇಕು, ಸಾಯಿಲ್ ಹೇಗಿರಬೇಕು ಅದರ ಪ್ರಕಾರ ನೋಡಿಕೊಂಡು ರೆವೆನ್ಯೂ ಅಸೆಸ್‌ಮೆಂಟು ಹಾಕಬೇಕು.

ಇನ್ನು ನಮ್ಮ ಮಾನ್ಯ ಸದಸ್ಯರಾದ ಶ್ರೀ ವಿ. ಎನ್. ಪಾಟೀಲ್‌ರವರು ಬೀದರ್ ಜಿಲ್ಲೆಯಲ್ಲಿ ಲಾ ಅಂಡ್ ಆರ್ಡರು ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ಅವರು ಹೇಳಿರುವುದು ಸತ್ಯಾಂಶಕ್ಕೆ ದೂರವಾದ ಮಾತುಗಳು ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾನೂ ಕೂಡ ಬೀದರು ಜಿಲ್ಲೆಯಿಂದ ಬಂದವನೇ ಆಗಿರುವುದರಿಂದ ಅವರು ಹೇಳಿರುವ ಮಾತುಗಳು ಸತ್ಯಕ್ಕೆ ದೂರವಾದ ಮಾತುಗಳು ಎನ್ನುವುದನ್ನು ಮಾತ್ರ ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಶ್ರೀಮಾನ್ ಪಾಟೀಲ್‌ರವರು ಮರಕಳ ಗ್ರಾಮದ ಬಗ್ಗೆ ಹೇಳಿದ ಮಾತುಗಳೆಲ್ಲಾ ವಾಸ್ತವಾಂಶಕ್ಕೆ ದೂರವಾದವುಗಳು. ಇದರಲ್ಲಿ ಡೆಪ್ಯೂಟಿ ಕಮಿಷನರವರು ಹೋಗಿ ಎಲ್ಲವನ್ನೂ ನೋಡಿಕೊಂಡು ಬಂದಿದ್ದಾರೆ. ಇಲ್ಲಿ ಹರಿಜನರಿಗಾಗಿ ಒಂದು ಕಡೆ ಜಾಗವನ್ನು ಕೊಟ್ಟು ಗುಡಿಸಲುಗಳನ್ನು ಹಾಕುವಾಗ ಆ ಊರಿನ ಜನಗಳಿಗೆ ಹೊಡದಾಟವಾಗಿ ಅವರಿಗೆಲ್ಲಾ ಬಹಳ ಅನಾಹುತಗಳಾದವು ಎಂದು ಇಲ್ಲಿ ಬಹಳವಾಗಿ ಹೇಳಿದರು. ಅವೆಲ್ಲಾ ಸತ್ಯಕ್ಕೆ ದೂರವಾದ ಮಾತುಗಳು. ಇವುಗಳ ಬಗ್ಗೆ ಇಲ್ಲಿನ ಡೆಪ್ಯೂಟಿ ಕಮಿಷನರು ಕಾರವಾಯಿ ನಡೆಸಿದ್ದಾರೆ ಅದು ನನಗೂ ಗೊತ್ತು. ಆದರಲ್ಲೇನೂ ಹೆಚ್ಚು ನಡೆದಿಲ್ಲ. ಪೋಲಿಸಿನವರು ಎಲ್ಲಾದರೂ ಗಲಭೆಗಳಾದಾಗ ಅದನ್ನು ತಡೆಗಟ್ಟುವುದು ಸ್ವಾಭಾವಿಕ. ಇದರಲ್ಲಿ ಏನಾದರೂ ತಪ್ಪುಗಳಿದ್ದರೆ ಅದನ್ನು ಸರಿಮಾಡಲು ಪೋಲೀಸರು ಬರುತ್ತಾರೆ. ಇದರಲ್ಲಿ ಯಾವ ಪ್ರಕಾರ ಭೇದವು ಇಲ್ಲ. ಇಲ್ಲಿ ಒಂದಕ್ಕೆ ಹತ್ತರಷ್ಟು ಸೇರಿಸಿ ಪ್ರಚಾರವಾಗಲಿ ಎಂದು ಇಲ್ಲಿ ಹೇಳುವುದು ಪ್ರಪೊಗಾಂಡಕ್ಕಾಗಿಯೇ ಹೊರತು ಬೇರೇನೂ ಇಲ್ಲ. ಇದರ ಬಗ್ಗೆ ಕಾರವಾಯಿಯನ್ನು ನಾನೂ ಕೂಡ ಹೋಗಿ ನೋಡಿದ್ದೇನೆ. ಇಲ್ಲಿನ ಹರಿಜನರನ್ನು ಕರೆಸಿ ಕೇಳಿದ್ದೇನೆ. ಮತ್ತು ಇತರ ಊರಿನ ಜನರನ್ನೂ ಕೇಳಿದ್ದೇನೆ. ಅವರೆಲ್ಲಾ ಹೊಂದಿಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ನಾನೂ ಕೂಡ ಎಷ್ಟೋ ಸಾರಿ ಡೆಪ್ಯೂಟಿ ಕಮಿಷನರ ಕಡೆಗೂ ಹೋಗಿ ಹೇಳಿ ಬಂದಿದ್ದೇನೆ. ಅವರು ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಮಿತಿ ಬಗ್ಗೆ ಹೇಳಿದರು. ಇಲ್ಲಿರುವ ಡೆಪ್ಯೂಟಿ ಕಮಿಷನರ್‌ರವರು, ಕಾಂಗ್ರೆಸ್ಸು ಕಮಿಟಿ ಪ್ರೆಸಿಡೆಂಟರು ಒಂದು ರೆಸಲ್ಯೂಷನ್ ಪಾಸು ಮಾಡಿದ್ದಾರೆ, ಅದರಂತೆ ಸರಕಾರದ ಅಧಿಕಾರಿಗಳೂ ನಡೆಯಬೇಕು ಎಂದು ಹೇಳುವುದರ ಬಗ್ಗೆ ಅಂತಹ ನಿರ್ಣಯ ಯಾವುದೂ ಕಾಂಗ್ರೆಸ್ ಸಮಿತಿಯಲ್ಲಿ ಮಾಡಲಿಲ್ಲ ಎನ್ನುವುದಕ್ಕೆ ಸಾಕಷ್ಟು ಪ್ರಚಾರ ಪೇಪರುಗಳಲ್ಲಿಯೂ ಬಂದಿದೆ ಮತ್ತು ಎಲ್ಲರಿಗೂ ಇದು ಚನ್ನಾಗಿ ತಿಳಿದಿದೆ. ಅಲ್ಲದೆ ಇಲ್ಲಿನ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಾಗಪ್ಪನವರೂ ಕೂಡ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ ಇಲ್ಲಿನ ಡೆಪ್ಯೂಟೀ

ಕಮಿಷನರವರು ಕೂಡ ಯಾವ ಅಧಿಕಾರಿಗಳನ್ನೂ ಕೆಲಸದಿಂದ ತೆಗೆಯುವುದಕ್ಕೆ ತಮಗೆ ಸಾಧ್ಯವಿಲ್ಲ ಅಲ್ಲದೆ ಅಪಾಯಿಂಟ್‌ಮೆಂಟ್‌ಗಳನ್ನೂ ಕೂಡ ತಾವು ಮಾಡುತ್ತಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಇದರಲೇನೋ ದೊಡ್ಡ ತಪ್ಪು ನಡೆದಿದೆ ಎಂದು ಇಲ್ಲಿ ಮಾನ್ಯ ಸದಸ್ಯರು ವಿಶೇಷವಾಗಿ ಹೇಳಿದರು. ಇದರಲ್ಲೇನೂ ಹುರಳಿಲ್ಲ. ಕಾಂಗ್ರೆಸ್ಸು ಆಫೀಸಿಗೂ ಡೆಪ್ಯೂಟಿ ಕಮಿಷನರಿಗೂ ಇದರಲ್ಲಿ ಯಾವ ಸಂಬಂಧವೂ ಇಲ್ಲ. ಇದರ ಬಗ್ಗೆ ಕಾಂಗ್ರೆಸ್ ಪಕ್ಷದ ಆಫೀಸಿನಿಂದಲೂ ಕೂಡ ಸ್ಪಷ್ಟವಾದ ವಿವರಗಳನ್ನು ಪ್ರಕಟಣೆಗಳ ಮೂಲಕ ತಿಳಿಸಿದ್ದಾರೆ. ಇಂತಹ ವಿಚಾರಗಳನ್ನು ಈ ಸಭೆಯಲ್ಲಿ ಹೇಳುವುದು ಅಷ್ಟು ಸರಿಯಾಗಿರುವುದಿಲ್ಲ. ಇದರಲ್ಲಿ ಒಂಧಕ್ಕೆ ಹತ್ತು ಪಟ್ಟು ಜಾಸ್ತಿಯಾಗಿ ಉತ್ಪ್ರೇಕ್ಷೆಯಿಂದ ಹೇಳಬಾರದು.

ಇನ್ನೂ ಕಡೆಯದಾಗಿ ಸಂಕ್ಷೇಪವಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ನಮ್ಮ ಭಾಗದಲ್ಲಿರುವ ಕಾರಂಜಿ ಪ್ರಾಜೆಕ್ಟನ್ನು ಬೇಗನೆ ಮಾಡಿಸಿಕೊಡಬೇಕು ಮತ್ತು ನಮ್ಮ ಭಾಗದಲ್ಲಿ ಮಾಡಿರುವ ರೆವಿನ್ಯೂ ಅಸೆಸ್‌ಮೆಂಟ್ ಸರಿಯಾಗಿಲ್ಲ. ಇದರ ಬಗ್ಗೆ ಸರಕಾರ ಸೂಕ್ತವಾದ ಕ್ರಮ ಗಳನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಒತ್ತಿ ಹೇಳುತ್ತಿದ್ದೇನೆ. ಇಷ್ಟನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet again at One P.M. on Tuesday the 27th February 1968.

*The House adjourned at Thirty-five Minutes past Twelve of the Clock to meet again at One of the Clock on Tuesday, the 27th February 1968.*